
ಕಲ್ಯಾಣ ಕಿರಣ

ಫೆಬ್ರವರಿ-2008

ಬೆಲೆ-10.00











ಬಸವನೆಂದಡೆ ಪಾಪ ದೆಸೆಗೆಟ್ಟು ಹೋಗುವುದು
ಬಸವನಾ ಪಾದವ ನಂಬಿದ
ಭಕ್ತರು ಹಸನಾದರಯ್ಯಾ ಸರ್ವಜ್ಞ

ಮಾಲೂರಿನ ಶರಣೆ. ವಿ.ನಂಜಮ್ಮನವರು

ಸಂಪುಟ-38 ಬಸವ ಶಕೆ-874 ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-2 ಫೆಬ್ರವರಿ-2008 ವಾರ್ಷಿಕ ಚಂದಾ 100/- ರೂ.

ಚನ್ನ ಬಸವೇಶ - ಮಂಟಪದ ಮಾಣಿಕ್ಯ

ಶ್ರೀ ಚನ್ನ ಬಸವೇಶ ಭಕ್ತರನು ಪೊರೆವೀಶ
ಜಯ ಭಜಕ ಜನ ಬಂಧು ಕಾರುಣ್ಯ ಸಿಂಧು ॥ ಪ ॥

ಪರಮ ಗುರು ಬಸವನ ಕರಕಮಲ ಜನಿತನೆ
ಶರಣ ಹೃತ್ಸರಸಿಯ ಶ್ರೀ ಪರಮಹಂಸೆಯೆ ॥ ಅ.ಪ ॥

ಕಾರ್ತೀಕ ಪ್ರತಿಪದೆಯ ದೀವಳಿಗೆಯಂದು
ಮಾತೆಯ ಗರ್ಭದಿಂ ನೀ ಬಂದೆಯಂದು।
ಅವ್ವ ನಾಗಾಂಬಿಕೆಯ ಅಕ್ಕರೆಯ ಚಿಣ್ಣನೆ
ಅಯ್ಯ ಶಿವದೇವನ ಮಮತೆಯ ತನುಜನೆ ॥ 1 ॥

ಷಟಸ್ಥಲದ ಚೌಕಟ್ಟ ವಚನ ಶಾಸ್ತ್ರಕೆ ಇತ್ತೆ
ಸಟೆಯ ಮಾಯೆಯ ಗೆಲಿದು ವಿರಾಗಿ ಎನಿಸಿದೆ।
ಉನ್ಮನಿಯ ಉಯ್ಯಾಲೆಯಲ್ಲಿ ತೂಗಿ ನಲಿದು
ಅನುಭವ ಮಂಟಪದ ಹೊಂಗಳಶವಾದೆ ॥ 2 ॥

ವಚನ ವಾಙ್ಮಯಕ್ಕಂದು ಸಂಕಷ್ಟ ಎರಗಿರಲು
ಕಾಷಾಯ ಧರಿಸಿಯೂ ಖಡ್ಗವನು ನೀ ಹಿಡಿದೆ।
ಮುನ್ನಡೆಸಿ ಶರಣರ ವಾಙ್ಮಯವ ರಕ್ಷಿಸಿದೆ
ಚನ್ನಹುಣ್ಣಿಮೆಯಂದು ಉಳವಿಯಲಿ ಬಯಲಾದೆ ॥ 3 ॥

ನೀ ಪಾದವಿಟ್ಟುದು ಸುಕ್ಷೇತ್ರ ತಾನಾಯ್ತು
ನೀನುಡಿದ ಮಾತೆಲ್ಲ ದಿವ್ಯ ಶಾಸ್ತ್ರವದಾಯ್ತು
ಶರಣ ಧರ್ಮದ ಉಳಿವು ನಿನ್ನಿಂದಲೇ ಆಯ್ತು
ಸಚ್ಚಿದಾನಂದನ ಮೆಚ್ಚಿಗೆಯ ಮಗನಾದೆ ॥ 4 ॥

ಮರ್ತ್ಯಲೋಕದ ಭಕ್ತರ ಮನವ ಬೆಳಗಲೆಂದು ಇಳಿತನಂದನಯ್ಯಾ ಶಿವನು:
ಕತ್ತಲೆಯ ಪಾಳೆಯುವ ರವಿ ಹೊಕ್ಕಂತಾಯಿತ್ತಯ್ಯಾ
ಚಿತ್ತದ ಪ್ರಕೃತಿಯ ಹಿಂಗಿಸಿ,
ಮುಕ್ತಿ ಪಥವ ತೋರಿದನೆಲ್ಲ ಅಸಂಖ್ಯಾತ ಗಣಂಗಳಿಗೆ.
ತನುವೆಲ್ಲ ಸ್ವಯಲಿಂಗ, ಮನವೆಲ್ಲ ಚರಲಿಂಗ
ಭಾವವೆಲ್ಲ ಮಹಾಘನದ ಬೆಳಗು
ಚನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣ ಸಮ್ಯಕ್ ಜ್ಞಾನಿ ಚನ್ನಬಸವಣ್ಣನ ಶ್ರೀ ಪಾದಕ್ಕೆ ಶರಣೆಂದು.
ಎನ್ನ ಭವಂ ನಾಸ್ತಿಯಾಯಿತ್ತಯ್ಯಾ ಪ್ರಭುವೆ.

- ಜಗನ್ಮಾತಾ ಅಕ್ಕಮಹಾದೇವಿ

★ ಕಲ್ಯಾಣ ಕಿರಣ ★

ಮುಖ ಪುಟ : 21ನೇ ಶರಣ ಮೇಳದ ಉದ್ಘಾಟನೆ . ದಿ 13-1-2008ರಂದು
ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡೆಯೂರಪ್ಪನವರಿಂದ
ಸಮುದಾಯ ಪ್ರಾರ್ಥನೆ ಉದ್ಘಾಟನೆ. ದಿ 14-1-2008ರಂದು
ಕೇಂದ್ರ ಮಂತ್ರಿ ಎಂ.ವಿ.ರಾಜಶೇಖರನ್ ಅವರಿಂದ

KALYANA KIRANA-Reg No.19988/70. Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10,

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ: 23325335/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010

ವಚನ ಕಿರಣ: - ಮಾತಾಜಿ

ಶರಣನ ದಿನಚರಿ

ತಾ ಮಾಡುವ ಕೃಷಿ ಮಾಡುವನ್ನಬರ ಮಾಡಿ
ಕೃಷಿ ತೀರಿದ ಬಳಿಕ ಮತ್ತೆ ಗುರು ದರ್ಶನ,
ಲಿಂಗಪೂಜೆ, ಜಂಗಮ ಸೇವೆ
ಶಿವಭಕ್ತರ ಸುಖ ಸಂಭಾಷಣೆ, ಶರಣರ ಸಂಗ
ಈ ನೇಮವನರಿವುತ್ತಿಪ್ಪುದು ಸದ್ಭಕ್ತನ ಸದಾತ್ಮನ ಯುಕ್ತಿ
ಆಚಾರವೇ ಪ್ರಾಣವಾಗಿಪ್ಪ ರಾಮೇಶ್ವರ ಲಿಂಗಕ್ಕೆ

- ಶರಣೆ.ಅಕ್ಕಮ್ಮ

ಬಸವಾದಿ ಪ್ರಮಥರು ಬೋಧಿಸಿದ ಸಿದ್ಧಾಂತ ಜೀವನ ಸಿದ್ಧಾಂತ, ಜೀವನ ವಿಮುಖಿ ಸಿದ್ಧಾಂತವಲ್ಲ. ಆಸೆಯೇ ದುಃಖಕ್ಕೆ ಮೂಲ ಎಂಬುದು ಪರಮ ಸತ್ಯ. ಆದರೆ ಆಸೆಯನ್ನು ಬಿಟ್ಟು ಬದುಕಲು ಆಗದು. ಅದಕ್ಕಾಗಿ ವ್ಯಕ್ತಿಯು ತನ್ನಲಿರುವ ಹುಟ್ಟು ಗುಣ (*Instinct*), ಸಹಜ ಪ್ರವೃತ್ತಿ, ಅಂತಃಕರಣ, ಇಂದ್ರಿಯ ಎಲ್ಲವನ್ನೂ ದೈವೀಕರಿಸಿಕೊಂಡು ಬದುಕನ್ನು ಸಾರ್ಥಕಗೊಳಿಸಿಕೊಳ್ಳಬೇಕು ಎಂಬುದೇ ಶರಣ ಸಿದ್ಧಾಂತ.

ಕೆಲವು ವ್ಯಕ್ತಿಗಳು ಧರ್ಮ, ಸಮಾಜ, ಸಾಂಘಿಕ ಜೀವನದ ಸಂಪರ್ಕಕ್ಕೆ ಬರದೆ ಬರೀ ದುಡಿಮೆಯಲ್ಲಿ ನಿರಂತರವಾಗಿರುವರು. "ನಾವು ಬಹಳ ಬ್ಯುಸಿ, ನಮ್ಮ ವೃತ್ತಿ ಜೀವನದಲಿ ನಮಗೆ ಬಿಡುವೆ ಸಿಗದು." ಎಂದು ಹೆಮ್ಮೆಯಿಂದ ಹೇಳಿಕೊಳ್ಳುವರು. ಶರಣೆ ಅಕ್ಕಮ್ಮನವರ ಪ್ರಕಾರ ದಿನಚರಿಯಲ್ಲಿ, ಜೀವನದಲ್ಲಿ ಎಲ್ಲ ಅಂಶಗಳಿಗೂ ಸ್ಥಾನವನ್ನು ಕೊಡಬೇಕು. ಕಾಯಕವು ಶರಣನ ಕಡ್ಡಾಯ ಮತ್ತು ನಿತ್ಯ ಕ್ರಿಯೆ. ಯಾವುದೇ ಉದ್ಯೋಗವಿರಲಿ ತನ್ನ ಕಾಯಕವನ್ನು ನಿಷ್ಠೆಯಿಂದ ಮಾಡಬೇಕು. ಜಾಸ್ತಿ ಹೊತ್ತು ದುಡಿದರೆ ಜಾಸ್ತಿ ಹಣ ಬರುವುದೆಂದು ಕೇವಲ ದುಡಿಮೆಯಲ್ಲೇ ನಿರತರಾದರೆ ಆಗ ಆ ದುಡಿಮೆ ಕೇವಲ ದುಡಿತ (*Labour*) ಆಗುವುದೇ ವಿನಾ ಕಾಯಕ (*Work - divine*) ವಾಗುವುದಿಲ್ಲ. ಕಾಯಕಕ್ಕೆ ಸಮಯ ಮೀಸಲಿರಿಸಿ ಉಳಿದ ಸಮಯದಲ್ಲಿ ಗುರು ದರ್ಶನ , ಲಿಂಗ ಪೂಜೆ, ಜಂಗಮ ಸೇವೆ, ಶಿವಭಕ್ತರೊಡನೆ ಸಂಭಾಷಣೆ, ಶರಣರ ಸಂಗ ಇವುಗಳನ್ನು ಅಳವಡಿಸಿಕೊಳ್ಳಬೇಕು. ಮುಸಲೀಮರು ಮತ್ತು ಸಿಖ್ಖರು ತಾವು ವಾಸಿಸುವ ಪ್ರದೇಶಗಳಲ್ಲಿ ಮಸೀದಿ, ದರ್ಗಾ ಮತ್ತು ಗುರುದ್ವಾರ ಕಟ್ಟಿಕೊಂಡು ತಪ್ಪದೆ ನಿತ್ಯವೂ ಗುರು (ತತ್ವ) ದರ್ಶನ ಪಡೆಯುತ್ತಾರೆ. ಹಿಂದಿನ ಕಾಲದಲ್ಲಿ ಪ್ರತಿ ಊರಿಗೆ ಒಂದು ಮಠವಿರುತ್ತಿತ್ತು, ಸ್ವಾಮಿಗಳು ಇರುತ್ತಿದ್ದರು. ಭಕ್ತರು ದರ್ಶನ ಪಡೆಯುತ್ತಿದ್ದರು. ಈಗ ಈ ಎಲ್ಲವೂ ಶಿಥಿಲಗೊಂಡಿವೆ. ಆದ್ದರಿಂದ ಮನೆಯಲ್ಲಿಯೇ ಧರ್ಮಗುರು ದರ್ಶನವನ್ನು ಪಡೆಯುವಂತೆ ಗುರು ಬಸವಣ್ಣನವರ ಭಾವಚಿತ್ರವನ್ನಿಟ್ಟು ಪೂಜಿಸಿ ದರ್ಶನವನ್ನು ಪಡೆದು ಮನೆಯಿಂದ ಹೊರಕ್ಕೆ ಹೋಗಬೇಕು. ಧರ್ಮಗುರುವಿನ ವಾಣಿಗಾಗಿ ವಚನಾಧ್ಯಯನ ಮಾಡಬೇಕು.

ಲಿಂಗ ಪೂಜೆ: ಭಕ್ತನು ದೇವನನ್ನು ಅರಸಿಕೊಂಡು ಕಾಡು ಮೇಡುಗಳನ್ನು ಅಲೆಯಬೇಕಾಗಿಲ್ಲ. ತನ್ನೊಳಗೇ ಇರುವ ದೇವನನ್ನು ಇಷ್ಟಲಿಂಗ ರೂಪದಲ್ಲಿ ಆರಾಧಿಸಿ ಪೂಜೆಯ ಪ್ರತಿಫಲವಾಗಿ ಕರುಣೋದಕ ಮತ್ತು ಕರುಣ ಪ್ರಸಾದವನ್ನು ಪಡೆಯಬೇಕು. ಇಲ್ಲಿ ಪೂಜಾರಿಯ ಮಧ್ಯ ಪ್ರವೇಶವಿಲ್ಲ ಜನ ಜಂಗುಳಿಯ ಸಂತೆಯಿಲ್ಲ. ಭಕ್ತನು ಏಕಾಂತದಲ್ಲಿ ಮನದುಂಬಿ ಪೂಜಿಸಬಹುದು.

ಜಂಗಮ ಸೇವೆ : ಜಂಗಮ ತತ್ವ ಎಂದರೆ ಧರ್ಮದ ಪ್ರತಿನಿಧಿಗೆ ಗಳಿಕೆಯ ಒಂದು ಪಾಲನ್ನು ನೀಡಿ ಸೇವೆ ಸಲ್ಲಿಸುವುದು. ಜಂಗಮ ಅಂದರೆ ಸಮಾಜವೂ ಅಹುದು. ಸಮಾಜದ ಹಿತಕ್ಕೆ ತನ್ನ ಗಳಿಕೆಯ ಒಂದು ಪಾಲನ್ನು ಭಕ್ತನು ಅಂದರೆ ವ್ಯಕ್ತಿಯು ವಿನಿಯೋಗಿಸಬೇಕು. ಜೈನ ಧರ್ಮದಲ್ಲಿ ಜೀವ ದ್ರವ್ಯ, ದೇವದ್ರವ್ಯ, ಆತ್ಮದ್ರವ್ಯ ಎಂದು ಮೂರು ರೀತಿಯಲ್ಲಿ ವಿಂಗಡಿಸಲಾಗುವುದು. ಜೀವ ದ್ರವ್ಯವೆಂದರೆ ಅನ್ಯ ಜೀವರ ಹಿತಕ್ಕಾಗಿ, ನೆರವಿಗಾಗಿ ವಿನಿಯೋಗಿಸುವ ಗಳಿಕೆ, ದೇವ ದ್ರವ್ಯವೆಂದರೆ ಧರ್ಮದ ಏಳ್ಗೆಗಾಗಿ, ಧರ್ಮಮಂದಿರಗಳ ನಿರ್ಮಾಣಕ್ಕಾಗಿ ವಿನಿಯೋಗಿಸುವ ಹಣ. ಆತ್ಮ ದ್ರವ್ಯವೆಂದರೆ ತನ್ನ ಬದುಕಿಗಾಗಿ, ಕುಟುಂಬ ನಿರ್ವಹಣೆಗಾಗಿ ವಿನಿಯೋಗಿಸುವ ಹಣ. ವ್ಯಕ್ತಿಯು ಈ ರೀತಿ ಮೂರಕ್ಕೂ ತನ್ನ ಆದಾಯದ ಪಾಲನ್ನು ಮೀಸಲಿಡಬೇಕು. ಧರ್ಮದ ಏಳ್ಗೆ ಮರೆತು ಕೇವಲ ಜೀವದಯಾಪರನಾದರೆ ಸಾಲದು. ಕೆಲವರು ಲಿಂಗಾಯತರು ಕಾಣಿಕೆ ಕೇಳಲು ಹೋದಾಗ ಹೇಳುವರು "ನಮಗೆ ಧರ್ಮಕ್ಷೇತ್ರ,

ಬೆಳೆಸುವುದರಲ್ಲಿ, ಬೃಹತ್ ಪುತ್ಥಳಿ ಮಾಡುವುದರಲ್ಲಿ, ಬಸವ ಮಂಟಪ ಕಟ್ಟುವುದರಲ್ಲಿ ಆಸಕ್ತಿ ಇಲ್ಲ. ಅನಾಥಾಶ್ರಮಕ್ಕೆ ಬೇಕಾದರೆ ಕಾಣಿಕೆ ಕೊಡುತ್ತೇವೆ." ಇವರ ಮನೋಭಾವ ಉದಾತ್ತವಾದುದೆ, ಇಲ್ಲಿ ಮಾನವೀಯತೆ ಇದೆ. ಆದರೆ ಮಾನವೀಯತೆಗೆ ತಳಹದಿ ಧರ್ಮ. ಜೈನರು, ಕ್ರೈಸ್ತರು, ಸಿಖ್ಖರು, ಮುಸಲೀಮರು ತಮ್ಮ ತಮ್ಮ ಧರ್ಮ ಮಂದಿರ ಬೆಳೆಸಿಯೇ ಮಾನವೀಯತೆಯನ್ನು ರೂಢಿಸಿಕೊಂಡಿರುವುದು ಗಮನಾರ್ಹ. ಕಾಯಕದ ಪ್ರತಿಫಲವು 1. ತನ್ನ ಬದುಕಿಗೆ ದಾರಿ ತೋರಬೇಕು. 2. ಧಾರ್ಮಿಕ ಮಂದಿರಗಳನ್ನು ಕಟ್ಟಬೇಕು. 3. ಜೀವ ದಯಾಪರತ್ವದ ಕೆಲಸಕ್ಕೆ ನೆರವಾಗಬೇಕು. ಅದೇ ಜಂಗಮ ಸೇವೆ।

ಮತ್ತೊಂದು ಅತೀವ ಅಗತ್ಯವಾಗಿರುವುದು ಭಕ್ತರೊಡನೆ ಮಾಡುವ ಸುಖ ಸಂಭಾಷಣೆ. ಹಾಳು ಹರಟೆ, ಜಗಳ, ಅಶ್ಲೀಲ ಸಂಭಾಷಣೆ, ಕುಚೋದ್ಯ, ಆಡಿಕೊಳ್ಳುವಿಕೆ, ದೂಷಣೆ ಮುಂತಾದವುಗಳಲ್ಲಿ ಸಮಯವನ್ನು ಅಪವ್ಯಯ ಮಾಡದೆ, ಸಜ್ಜನ ಸದ್ಭಕ್ತರ ಜೊತೆಗೆ ಉಲ್ಲಾಸಕರ ಸಂಭಾಷಣೆ ನಡೆಸಬೇಕು. ಅದರಿಂದ ಜ್ಞಾನವೃದ್ಧಿಯಾಗುವುದು, ಚಿಂತೆ ದೂರವಾಗುವುದು, ಬದುಕಿನ ಎಡರು ತೊಡರುಗಳು ಭಾರವೆನಿಸುವುದಿಲ್ಲ.

ಆರನೆಯದು ಶರಣರ ಸಂಗ; ವೈಯಕ್ತಿಕವಾಗಿ ಪರಸ್ಪರ ಭೇಟಿಯಾಗಿ ಸಂಭಾಷಣೆ ಮಾಡುವುದರ ಜೊತೆಗೆ ಆಗಾಗ ಸಾಮೂಹಿಕವಾಗಿ ಸೇರಬೇಕು. ಅನುಭವ ಮಂಟಪ ಕಟ್ಟಿ ಅನುಭವ ಗೋಷ್ಠಿಯನ್ನು ಧರ್ಮಪಿತ ಬಸವಣ್ಣನವರು ನಡೆಸುವುದರ ಉದ್ದೇಶ ಸಮುದಾಯ ಜೀವನದ ಸೂತ್ರವಾಗಿತ್ತು. ಧಾರ್ಮಿಕ ಸಹೋದರತ್ವ ಪರಸ್ಪರರಲ್ಲಿ ಬೆಳೆದು ಭೇದಗಳು ನಿವಾರಣೆಯಾಗಬೇಕಾದರೆ ಶರಣ ಸಂಗವು ಅತ್ಯಂತ ಅಗತ್ಯ. ದೀಕ್ಷೆಯನ್ನು ಪಡೆದವರೆಲ್ಲ ಸಾಮರಸ್ಯದಿಂದ ಬಾಳಬೇಕಾದರೆ ಸಹ ಪಂಕ್ತಿ ಭೋಜನ, ಅನುಭವ ಗೋಷ್ಠಿ, ವೈವಾಹಿಕ ಸಂಬಂಧ ಬೆಳೆಯಬೇಕು ಎಂಬುದೇ ಧರ್ಮಪಿತ ಬಸವಣ್ಣನವರ ಆಶಯವಾಗಿತ್ತು. ಇದನ್ನು ಗ್ರಹಿಸಿಯೇ ಶರಣೆ ಅಕ್ಕಮ್ಮನವರು ಶರಣನ ದಿನಚರಿಯಲ್ಲಿ ಕಾಯಕ, ಗುರು ದರ್ಶನ, ಲಿಂಗಪೂಜೆ, ಜಂಗಮ ಸೇವೆ, ಸದ್ಭಕ್ತರೊಡನೆ ಸಂಭಾಷಣೆ, ಶರಣರ ಸಂಗ ಎಂಬ ಆರು ಕ್ರಿಯೆಗಳನ್ನು ಪಟ್ಟಿ ಮಾಡಿದ್ದಾರೆ.

ಇದಕ್ಕೆ ಪೂರಕವಾಗಿ ಮಡಿವಾಳ ಮಾಚಿದೇವರ ಒಂದು ವಚನ ಹೀಗಿದೆ.

ಗುರು ಪೂಜೆಯನರಿದೆನೆಂದು ಲಿಂಗಪೂಜೆ ಬಿಡಲಾಗದು
ಲಿಂಗಪೂಜೆಯನರಿದೆನೆಂದು ಜಂಗಮ ಪೂಜೆಯ ಬಿಡಲಾಗದು
ಜಂಗಮ ಪೂಜೆಯನವರಿದೆನೆಂದು ಶರಣ ಸಂಗವ ಮರೆಯಲಾಗದು
ಇದು ಕಾರಣ, ಶರಣ ಸಂಗದ ಸಮ್ಯಗ್‌ಜ್ಞಾನದಲಲ್ಲದೆ
ಕಲಿದೇವಯ್ಯನ ಕೂಡುವ ಕೂಟ ಕಾಣಬಾರದು
ಹೋಹ ಬಾರಾ ಚಂದಯ್ಯ.

ಗುರು ಪೂಜೆ, ಲಿಂಗ ಪೂಜೆ , ಜಂಗಮ ಪೂಜೆ -ಸೇವೆ ಇವೆಲ್ಲ ವೈಯಕ್ತಿಕವಾಗಿ ತನ್ನ ಭಕ್ತಿಯನ್ನು ತೋರ್ಪಡಿಸುವ ಧಾರ್ಮಿಕ ವಿಧಿಗಳು. ಆದರೆ ಸಾಂಘಿಕವಾಗಿ ಸೇರಿ ಅನುಭವ ಗೋಷ್ಠಿ ಮಾಡುವುದು ಅತ್ಯಂತ ಮಹತ್ವಪೂರ್ಣ. ಗುರು ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪದಲ್ಲಿ ನಡೆಯುತ್ತಿದ್ದ ಅನುಭವ ಗೋಷ್ಠಿಗಳು ಉಪಮಾತೀತ. ಈ ಬಗೆಯ ಸಾಮೂಹಿಕ ಮುಕ್ತ ಚರ್ಚೆ ಏಸುಕ್ರಿಸ್ತರಾಗಲಿ, ಮೊಹಮ್ಮದರಾಗಲಿ, ಗೌತಮ ಬುದ್ಧರಾಗಲಿ ಅವರ ಜೀವನದಲ್ಲಿ ನಡೆಸಲಿಲ್ಲ. ಅಲ್ಲೆಲ್ಲ ಅವರು ಪ್ರವಚನ ಮಾಡಿದುದು ಅನುಯಾಯಿಗಳು ಕೇಳಿದುದನ್ನು ನಾವು ಗಮನಿಸುತ್ತೇವೆ. ಸಂಸತ್ತಿನ ರೀತಿಯಲ್ಲಿ ಚರ್ಚೆ ನಡೆದುದರಿಂದಲೇ ಅಲ್ಲಿ ಸಮ್ಯಕ್ ಜ್ಞಾನ ದೊರೆಯುತ್ತಿತ್ತು ಎಂಬ ಮಾತನ್ನು ಮಡಿವಾಳ ಮಾಚಿದೇವರು ಹೇಳಿ ಶರಣ ಸಂಗವಿಲ್ಲದೆ ಸಮ್ಯಕ್ ಜ್ಞಾನವನ್ನು ಪಡೆಯಲು ಸಾಧ್ಯವಿಲ್ಲ. ಆದ್ದರಿಂದ ಹೋಗೋಣ ಬಾ ಎಂದು ಚಂದಯ್ಯನವರನ್ನು ಒತ್ತಾಯಿಸುವುದನ್ನು ಕಾಣುತ್ತೇವೆ. ಚಂದಯ್ಯ ಶರಣರು ಕಾಯಕ ಪ್ರೇಮಿ, ಪ್ರಾಮಾಣಿಕರು. ಆದರೆ ಅವರು ಶರಣರ ಸಂಗಕ್ಕೂ ಆಸಕ್ತಿ ತೋರದ "ಕೆಲಸದ ಗೀಳು" (*Work - mania*) ಹಿಡಿಸಿಕೊಂಡಿದ್ದರು ಅಂತ ಕಾಣಿಸುತ್ತದೆ. ಅದಕ್ಕೇ ಅವರಿಗೆ ಶರಣ ಸಂಗದ ಮಹತ್ವವನ್ನು ಮಾಚಿದೇವರು ತಿಳಿಸಿಕೊಡುತ್ತಾರೆ. ಹೀಗೆ ಶರಣ ಸಂಗಮವು ಬಾಳಿನ ಗುಡಿಗೆ ಕಳಸವಿದ್ದಂತೆ..........!!

ಮೂವರು ಸನ್ಮಿತ್ರರೆಂದರೆ ವೃದ್ಧ ಹೆಂಡತಿ, ನಾಯಿ ಮತ್ತು ಹಣ - ಬೆಂಜಮಿನ್ ಫ್ರಾಂಕ್ಲಿನ್

ಶರಣ ಮೇಳದ ಚಿಂತನ ಗೋಷ್ಠಿಯಲ್ಲಿ ಕೆಲವೊಂದು ವಿಷಯಗಳು ಚರ್ಚಿತವಾದವು. ಆ ಬಗ್ಗೆ ಪ್ರಸ್ತಾಪಿತವಾದ ವಿವರಗಳು

- ಮಾತಾಜಿ

1. ಸುಶಿಕ್ಷಿತರು ಒಂದು ಕುಟುಂಬಕ್ಕೆ ಒಂದೇ ಮಗು ಎಂಬ ನಿಯಮವನ್ನು ಅನುಸರಿಸುವರಲ್ಲ, ಇದು ಸರಿಯೇ?

ಸಾಮಾನ್ಯವಾಗಿ ಅಶಿಕ್ಷಿತರು, ಗ್ರಾಮೀಣ ಜನರು ವಿಪರೀತ ಸಂಖ್ಯೆಯಲ್ಲಿ ಮಕ್ಕಳನ್ನು ಪಡೆಯುವರು. ವಿದ್ಯಾವಂತರು ಈ ಕಾಲದಲ್ಲಿ ಶಿಕ್ಷಣ ಕೊಡಿಸುವುದು ಬಹಳ ಕಷ್ಟಕರ, ವೆಚ್ಚದಾಯಕ. ಹೆಣ್ಣು ಮಗುವಾದರೆ ಮದುವೆ ಮುಂತಾಗಿ ನಿಭಾಯಿಸುವುದು ಇನ್ನೂ ಕಷ್ಟಕರ. ಆದ್ದರಿಂದ ಒಂದು ಕುಟುಂಬಕ್ಕೆ ಒಂದು ಮಗುವಾದರೆ ಸಾಕು ಎಂದು ನಿರ್ಧರಿಸುವರು. ಇದು ನಿಜಕ್ಕೂ ಸರಿಯಲ್ಲ. ಕಾರಣಗಳು ಹೀಗಿವೆ.

ಅ) ಗಂಡ ಹೆಂಡತಿ ಇಬ್ಬರು, ಇವರಿಗೆ ಒಂದೇ ಮಗು. ಅಂದರೆ ಜನ ಸಂಖ್ಯೆ ಕುಗ್ಗಿತು. ಮುಂದೆ ಅವರಿಬ್ಬರಿಗೆ ಒಂದೇ ಮಗು. ಹೀಗೆ ಜನಸಂಖ್ಯೆ ಗಣನೀಯವಾಗಿ ಇಳಿಯುತ್ತದೆ.

ಆ) ವಿದ್ಯಾವಂತರು ಮಕ್ಕಳು ಜಾಸ್ತಿ ಬೇಡ ಎನ್ನುವರು. ಅವಿದ್ಯಾವಂತರು ಬಹಳ ಸಂಖ್ಯೆಯಲ್ಲಿ ಮಕ್ಕಳನ್ನು ಹೆರುವರು. ಅವರು ಪೌಷ್ಟಿಕ ಆಹಾರವಿಲ್ಲದೆ ಬೆಳೆಯುವರಲ್ಲದೆ ಸೂಕ್ತ ಪರಿಸರ ಸಹ ಸಿಗದೆ ಉತ್ತಮ ನಾಗರಿಕರು ಸಹ ಆಗರು. ಬಾಲಾಪರಾಧಿಗಳು, ನಿರ್ವಸಿತರೂ, ದರೋಡೆಕೋರರು ಆಗಿ ಭಯೋತ್ಪಾದಕರು, ರೌಡಿಗಳು ಆಗುವರು.

ಇ) ಒಂದೇ ಮಗು ಸಾಕು ಎಂದು ಒಂದನ್ನೇ ಹೆತ್ತು, ಬೆಳೆಸುವವರು ಆಕಸ್ಮಾತ್ ಇದ್ದೊಬ್ಬ ಮಗ/ಮಗಳು ಅಕಾಲಿಕ ಮರಣಕ್ಕೆ ತುತ್ತಾದರೆ, ಕಳೆದು ಹೋದರೆ ಮನೋರೋಗಕ್ಕೆ ತುತ್ತಾಗುವರು.

ಈ ಎಲ್ಲಾ ಕಾರಣಗಳಿಂದ ಕನಿಷ್ಠ ಎರಡು ಹೆಚ್ಚೆಂದರೆ ಮೂರು ಮಕ್ಕಳನ್ನು ಪಡೆಯುವುದು ಒಳ್ಳೆಯದು. ಒಬ್ಬರು ತಂದೆ ತಾಯಿಯರ ಸಂಗಕ್ಷಣೆಗೆ, ಇನ್ನೊಬ್ಬರು ದೇಶ ರಕ್ಷಣೆಗೆ, ಮತ್ತೊಬ್ಬರು ಧರ್ಮ ಪ್ರಚಾರಕ್ಕೆ ಎಂದು ನಿರ್ಣಯಿಸಲಾಯಿತು.

ಮುಸ್ಲಿಮರಿಗೆ ಪತ್ನಿಯರನ್ನು ಹೊಂದಲು ಸಂಖ್ಯಾ ನಿರ್ಬಂಧವಿಲ್ಲ. ಮಕ್ಕಳನ್ನು ಪಡೆಯಲೂ ನಿರ್ಬಂಧವಿಲ್ಲ. ಇದು ಬಹಳ ಅಪಾಯಕಾರಿ. 3-4 ಪತ್ನಿಯರನ್ನು ಹೊಂದಿ 10-12 ಮಕ್ಕಳನ್ನು ಹೊಂದಿ ಅವರು ಜನ ಸಂಖ್ಯೆಯನ್ನು ಬೆಳೆಸುತ್ತಾ ಹೋದರೆ ಮುಂದೆ ಮುಸ್ಲಿಮರೇ ಬಹುಸಂಖ್ಯಾತರಾಗಿ ಮುಸಲೀಮೇತರರು ಅಲ್ಪ ಸಂಖ್ಯಾತರಾಗಿ ಭಾರತ ದೇಶವೇ ಛಿದ್ರಗೊಳ್ಳುವುದಲ್ಲದೆ ಭಾರತೀಯ ಸಂಸ್ಕೃತಿಯೇ ವಿನಾಶ ಹೊಂದುವುದು. ಆದ್ದರಿಂದ ದೇಶದ ಹಿತ ದೃಷ್ಟಿಯಿಂದಲೂ ಭಾರತೀಯ ಧರ್ಮಾನುಯಾಯಿಗಳಾದ ಹಿಂದುಗಳು, ಲಿಂಗಾಯತ, ಬೌದ್ಧ, ಜೈನ್, ಸಿಖ್ಖರು ಹೆಚ್ಚು ಮಕ್ಕಳನ್ನು ಹೊಂದುವುದು ಅತ್ಯಂತ ಆಗತ್ಯ ಎಂದು ನಿರ್ಧರಿಸಲಾಯಿತು.

ಇದೇ ವಿಚಾರದ ಹಿನ್ನೆಲೆಯಲ್ಲಿ ಸಮಾನ ನಾಗರಿಕ ಕಾಯ್ದೆಯು ಜಾರಿಗೆ ಬರಬೇಕೆಂದು, ಭಾರತದ ಎಲ್ಲ ಪ್ರಜೆಗಳಿಗೂ ಹಿಂದು, ಮುಸಲೀಮ್, ಲಿಂಗಾಯತ ಎಂಬ ಭೇದವಿಲ್ಲದೆ ಸಮಾನ ನಾಗರಿಕ ಕಾಯ್ದೆಯನ್ನು ಕೇಂದ್ರ ಸರ್ಕಾರವು ಅನುಷ್ಠಾನಕ್ಕೆ ತರಬೇಕೆಂದು ಅಭಿಪ್ರಾಯ ಪಡಲಾಯಿತು.

ಈ ಬಗ್ಗೆ ಸಮಾರೋಪ ಭಾಷಣ ಮಾಡಿದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು, "ಮಕ್ಕಳನ್ನು ಸಾಕುವುದು, ಉತ್ತಮ ವಿದ್ಯಾಭ್ಯಾಸ ಕೊಡಿಸುವುದು ಕಷ್ಟಕರ ಎಂದು ಒಂದೇ ಮಗು ಸಾಕೆಂದು ದಂಪತಿಗಳು ನಿರ್ಧರಿಸುವರು. ಅತ್ಯಂತ ತುಟ್ಟಿಯಾದ ಖಾಸಗಿ ಶಾಲೆ, ಕಾನ್ವೆಂಟ್‌ಗಳ ಶಿಕ್ಷಣವೇ ಶಿಕ್ಷಣವಲ್ಲ. ಇಂದು ಸರ್ಕಾರಿ ಶಾಲೆಗಳು ಉತ್ತಮವಾಗಿ ಕೆಲಸ ಮಾಡುತ್ತಿವೆ. ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಉಚಿತ ಪುಸ್ತಕ, ಸಮವಸ್ತ್ರ ಇತ್ಯಾದಿ ಸಿಗುತ್ತವೆ. ಜೊತೆಗೆ ಸರ್ಕಾರಗಳ ಬಿಗಿ ಕ್ರಮಗಳಿಂದ ಶಿಕ್ಷಣ ಮಟ್ಟ ಸುಧಾರಿಸಿದೆ. ಆದ್ದರಿಂದ ಮಕ್ಕಳನ್ನು ವಿದ್ಯಾವಂತರು ಸರ್ಕಾರಿ ಶಾಲೆಗೆ ಅಥವಾ ಅನುದಾನಿತ ಶಾಲೆಗಳಿಗೆ ಸೇರಿಸುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು. ಸರ್ಕಾರಿ ಶಾಲೆಗಳಲ್ಲಿ ಓದಿದ ಎಷ್ಟು ಜನರು ಇಂದು ದೊಡ್ಡ ವಿಜ್ಞಾನಿಗಳು, ಸಾಹಿತಿಗಳು, ನೇತಾರರು ಇತ್ಯಾದಿ ಆಗಿಲ್ಲ? ಆಗ ಮಾತ್ರ ಶಿಕ್ಷಣ ಭಾರವನಿಸುವುದಿಲ್ಲ.

ಇನ್ನು ಹೆಣ್ಣು ಮಕ್ಕಳು ಹುಟ್ಟಿದರೆ ಬಹಳ ಜನ ಬಾಧೆ ಪಡುವರು. ಕೆಲವರಂತೂ

ಮಾನವೀಯತೆಯಿಲ್ಲದೆ ಹೆಣ್ಣು ಶಿಶುವನ್ನು ಹುಟ್ಟುತ್ತಲೇ ಕೊಲ್ಲುವರು. ಇದಕ್ಕೆ ಮುಖ್ಯ ಕಾರಣ ವರದಕ್ಷಿಣೆ, ಮದುವೆಯ ಭಾರ. ಸ್ತ್ರೀ ಭ್ರೂಣ ಹತ್ಯೆಯು ಇದೇ ರೀತಿ ಮುಂದುವರಿದರೆ ಮುಂದೆ ಸ್ತ್ರೀಯರ ಸಂಖ್ಯೆ ಕಡಿಮೆಯಾಗಿ ಹೆಣ್ಣು ಸಿಗುವುದೇ ಕಷ್ಟವಾಗಬಹುದು, ದ್ರೌಪದಿಯಂತೆ ಒಬ್ಬಳೇ ಐದು ಜನ ಗಂಡಂದಿರ ಜೊತೆ ಸಂಸಾರ ಮಾಡುವಂತೆ ಆಗಬಹುದು. ಆದ್ದರಿಂದ ಹೆಣ್ಣು ಮಕ್ಕಳನ್ನು ಗಂಡು ಮಕ್ಕಳಂತೆ ಸಮಾನವಾಗಿ ಕಾಣಬೇಕು. ಗಂಡು ಮಕ್ಕಳು ತಾಯಿ ತಂದೆಯರನ್ನು ಮುಪ್ಪಿನಲ್ಲಿ ನೋಡಿಕೊಳ್ಳುತ್ತಾರೆ ಎಂದು ಒಂದು ನಂಬಿಕೆ. ಆದರೆ ಎಷ್ಟು ಜನ ಹೆಣ್ಣು ಮಕ್ಕಳು -ಅಳಿಯಂದಿರು ಮಗ -ಸೊಸೆ ಕೈಬಿಟ್ಟ ಅತ್ತೆ -ಮಾವಂದಿರನ್ನು ಸಂರಕ್ಷಣೆ ಮಾಡುತ್ತಿಲ್ಲ?

ಇನ್ನು ವರದಕ್ಷಿಣೆ ಮತ್ತು ಮದುವೆಯ ಜವಾಬ್ದಾರಿ; ಬಾಲ್ಯದಿಂದಲೂ ಹುಡುಗಿಯರಲ್ಲಿ ಮದುವೆ, ಸಂಸಾರವೇ ಸರ್ವಸ್ವ ಎಂದು ಬಿತ್ತಲಾಗುವುದು. ಶಿಕ್ಷಣ ನೀಡಿ ಉದ್ಯೋಗ ಪಡೆದು ಸ್ವಾವಲಂಬಿಯಾಗಿ ಬದುಕುವ ಆತ್ಮ ವಿಶ್ವಾಸ ತುಂಬುವ ಬದಲು ಸಾಲಸೂಲ ಮಾಡಿಯಾದರೂ ವರದಕ್ಷಿಣೆ ನೀಡಿ ಮದುವೆ ಮಾಡಬೇಕೆಂಬ ಹಂಬಲ ಹೆತ್ತವರದು. ಸಾಲದ ಶೂಲದಲ್ಲಿ ಹೆತ್ತವರು ಬಳಲಿದರೂ ಚಿಂತೆಯಿಲ್ಲ ವರದಕ್ಷಿಣೆ ನೀಡಿ ಮದುವೆ ಮಾಡಲೆಂಬ ಆಶಯ ಹುಡುಗಿಯದು. ಈ ಮನೋಭಾವದ ಬದಲು ಮದುವೆಗಿಂತಲೂ, ಉದ್ಯೋಗ, ಸ್ವಾವಲಂಬನೆ ಮುಖ್ಯ; ವರದಕ್ಷಿಣೆ ಪಡೆಯುವ ವರ ಸ್ತ್ರೀ ಕುಲಕ್ಕೆ ಅವಮಾನ ಮಾಡುವನು ಅಂಥ ವರ ಬೇಡ." ಎಂಬ ದೃಢ ಸಂಕಲ್ಪ ಹುಡುಗಿಯರದಾದರೆ ಸಮಸ್ಯೆಗಳು ಕಡಿಮೆಯಾಗುವವು. "ಯುವತಿಯರು ಮನಸ್ಸನ್ನು ಗಟ್ಟಿಗೊಳಿಸಿ ಕೊಂಡು ಉದಾತ್ತ ಆದರ್ಶಗಳನ್ನು, ಆಧ್ಯಾತ್ಮಿಕ ಪ್ರವೃತ್ತಿಯನ್ನು ಬೆಳೆಸಿ ಹುಟ್ಟಿದ ಮಗು ಹೆಣ್ಣಿರಲಿ, ಗಂಡಿರಲಿ ಅವರಿಗೆ ಶಿಕ್ಷಣ ನೀಡಿ ಸ್ವಾವಲಂಬಿಗಳನ್ನಾಗಿ ಮಾಡಬೇಕು. ಈ ಹಿನ್ನೆಲೆಯಲ್ಲಿ ಒಂದೇ ಮಗು ಸಾಕು ಎಂಬ ಸೂತ್ರವನ್ನು ಕೈ ಬಿಟ್ಟು ಮೂವರವರೆಗೆ ಪಡೆಯುವುದು ಒಳ್ಳೆಯದು." ಎಂದು ಸಮಾರೋಪ ಮಾಡಿದರು.

2. ಶರಣ ವ್ರತಿಯ ನಿಯಮಾವಳಿ

ಕೂಡಲ ಸಂಗಮದಲ್ಲಿ ಜನವರಿ 11ರಿಂದ 15ರವರೆಗೆ ನಡೆಯುವ ಶರಣ ಮೇಳದಲ್ಲಿ ಭಾಗಿಯಾಗಲು ಬಯಸುವ ಅನೇಕರು ಶರಣ ವ್ರತಧಾರಿಗಳಾಗಿ ಬರುವ ಹಂಬಲವನ್ನು ಹೊಂದಿರುವುದುಂಟು. ಇವರುಗಳ ನಿಯಮಾವಳಿ ಏನು ಎಂಬ ಬಗ್ಗೆ ವಿಸ್ತೃತವಾಗಿ ಚರ್ಚಿಸಲಾಯಿತು.

ಇಷ್ಟಲಿಂಗಾರ್ಚನೆ, ಗುರು ಬಸವಾರ್ಚನೆ ಮತ್ತು ವಚನ ಸಾಹಿತ್ಯಾಧ್ಯಯನದ ಮುಖ್ಯ ಉದ್ದೇಶ ಹೊಂದಿ ಶರಣರು ಶರಣ ವ್ರತಧಾರಿಗಳಾಗುವ ಪರಿಪಾಠ ವೃದ್ಧಿಯಾಗಬೇಕು. ಅವರವರ ಸಮಯಕ್ಕೆ ಅನುಕೂಲವಾಗುವಂತೆ

1. ಗುರು ಸಾರಾಯ ಸಂಪತ್ ವ್ರತ (40 ದಿವಸ, ಪ್ರಾರಂಭ ಡಿಸೆಂಬರ್ 2)
2. ಲಿಂಗ ಸಾರಾಯ ಸಂಪತ್ ವ್ರತ (30 ದಿವಸ, ಪ್ರಾರಂಭ ಡಿಸೆಂಬರ್ 12)
3. ಜಂಗಮ ಸಾರಾಯ ಸಂಪತ್ ವ್ರತ (20 ದಿವಸ. ಪ್ರಾರಂಭ ಡಿಸೆಂಬರ್ 22)
4. ಪ್ರಸಾದ ಸಾರಾಯ ಸಂಪತ್ ವ್ರತ (10 ದಿವಸ, ಪ್ರಾರಂಭ ಜನವರಿ 1) ಹೀಗೆ ಆರಂಭಿಸಬೇಕು.

1. ಈಗಾಗಲೇ ಹಿಂದಿನ ವರ್ಷ ಶರಣ ವ್ರತಧಾರಿ ಆಗಿರುವವರಿಂದ ಮಂತ್ರೋಪದೇಶ ಪಡೆಯಬೇಕು ಅಥವಾ ಬಸವ ಧರ್ಮ ಪೀಠದ ಜಂಗಮ ಮೂರ್ತಿಗಳಿಂದ ಮಂತ್ರೋಪದೇಶ ಪಡೆಯಬಹುದು. ಶರಣ ಮತ್ತು ಶರಣೆ ಉಭಯತರಿಗೂ ಅವಕಾಶವಿದೆ.

2. ಲಿಂಗದೀಕ್ಷೆ ಪಡೆದವರು ಕಡ್ಡಾಯವಾಗಿ ಇಷ್ಟಲಿಂಗಧಾರಣೆ, ರುದ್ರಾಕ್ಷಿ ಧಾರಣೆ, ವಿಭೂತಿ ಧಾರಣೆ ಮಾಡಿರಬೇಕು. ಲಿಂಗಾಯತೇತರರಾದ ಶರಣ ವ್ರತಧಾರಿಗಳು ರುದ್ರಾಕ್ಷಿ ಮಾಲೆ, ವಿಭೂತಿ ಧರಿಸಬೇಕು.

3. ನಿಯಮಗಳು :

ಸುಪ್ರಭಾತದಲ್ಲಿ ಸ್ನಾನ ಮಾಡಿ ಇಷ್ಟಲಿಂಗಾರ್ಚನೆ ಮಾಡಿಕೊಂಡು, ಶ್ರೀ ಗುರು ಬಸವಣ್ಣನವರಿಗೆ 108 ಮಂತ್ರ ಪಠಿಸುತ್ತ ಪುಷ್ಪಾರ್ಚನೆ ಮಾಡಬೇಕು. ಸಂಜೆಯ ವೇಳೆಯಲ್ಲಿ ಸ್ನಾನ ಮಾಡಿ ಪುನಃ ಇಷ್ಟಲಿಂಗಾರ್ಚನೆಯನ್ನು, ಗುರು ಬಸವಣ್ಣನವರಪೂಜೆಯನ್ನು ಮಾಡಬೇಕು.

4. ನಿಬಂಧನೆಗಳು :

ಶರಣ ವ್ರತದ ಕಾಲದಲ್ಲಿ ಲಿಂಗಾಯತೇತರರಿಗೆ ಸಹ ಮಾಂಸಾಹಾರ ನಿಷಿದ್ಧ, ಮದ್ಯಪಾನ, ಸಿಗರೇಟು ಸೇವನೆ , ದಾಂಪತ್ಯ ಸುಖ ನಿಷಿದ್ಧ.

5. ಐಚ್ಛಿಕ :

1. ಅಯ್ಯಪ್ಪ ಸ್ವಾಮಿ ವ್ರತಧಾರಿಗಳಂತೆ ಚಪ್ಪಲಿ ಧರಿಸುವುದನ್ನು ಬಿಡಬಾರದು. ಆರೋಗ್ಯ ದೃಷ್ಟಿಯಿಂದ ಚಪ್ಪಲಿ ಧರಿಸುವುದು ಸೂಕ್ತ .

2. ಶರಣರು ಗಡ್ಡ, ಕೂದಲು ಬಿಡುವುದು ಕಡ್ಡಾಯವಲ್ಲ, ಐಚ್ಛಿಕ. ಅವರಿಗೆ ಇಷ್ಟವಿದ್ದರೆ ಬಿಡಬಹುದು.

3. ಶರಣ ವ್ರತ ಪೂರೈಸಿದ ನಂತರ ತಲೆ ಬೋಳಿಸಬೇಕಾಗಿಲ್ಲ; ಇಷ್ಟವಿದ್ದರೆ ಬೋಳು ಮಾಡಿಕೊಳ್ಳಬಹುದು.

4. ವಚನ ಪಠಣವನ್ನು ಅವರಿಗೆ ಸಮಯಾನುಕೂಲವಾದಂತೆ ಮಾಡಬಹುದು.

5. ಕಾಯಕವನ್ನಾಗಲಿ, ಶರಣ ಮೇಳಕ್ಕೆ ದೇಣಿಗೆ ಸಂಗ್ರಹವನ್ನಾಗಲಿ ಬಿಡಬೇಕಾಗಿಲ್ಲ. ಸುಪ್ರಭಾತದ ಪೂಜೆ ಮುಗಿಸಿ ತಮ್ಮ ಕಾಯಕ ನಿರ್ವಹಿಸಬಹುದು, ಶರಣ ಮೇಳಕ್ಕೆ ದೇಣಿಗೆ ಸಂಗ್ರಹಿಸಬಹುದು. ಸದಾ ಕಾಲ ಬಿಳಿಯ ವಸ್ತ್ರ, ಕಾವಿಯ ಸ್ಕಾರ್ಫ್ ಧರಿಸಿರಲೇಬೇಕು.

6. ಬಹಳ ಜನ ಶರಣ ವ್ರತಧಾರಿಗಳು ಸಮೀಪದಲ್ಲಿದ್ದರೆ, ಬಸವ ಮಂಟಪ ಲಭ್ಯವಿದ್ದರೆ ಸಂಜೆಯ ನೆನಹುವಿಗೆ ಸಮಾವೇಶವಾಗಬೇಕು. ಇಲ್ಲದಿದ್ದರೆ ಶರಣರ ಮನೆಗಳಲ್ಲಿ ಸೇರಬಹುದು. ಒಬ್ಬೊಬ್ಬರೇ ಇದ್ದರೆ ತಮ್ಮ ಮನೆಯಲ್ಲೇ ಮಾಡಿಕೊಳ್ಳಬೇಕು.

ಶರಣ ಮೇಳಕ್ಕೆ ಬಂದು ನಿತ್ಯವೂ ಸುಪ್ರಭಾತದಲ್ಲಿ ನಡೆಯುವ ಇಷ್ಟಲಿಂಗಾರ್ಚನೆ ಮತ್ತು ಬಸವಾರ್ಚನೆಯಲ್ಲಿ, ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸಿ, ಗಣ ಲಿಂಗ ದರ್ಶನವನ್ನು ಪಡೆದು, ಸಂಜೆಯ ಸಾಮೂಹಿಕ ಇಷ್ಟಲಿಂಗ ಪೂಜೆಯಲ್ಲಿ ಭಾಗವಹಿಸಿ ಕರುಣ ಪ್ರಸಾದ ಪಡೆಯಬೇಕು. ಪೂಜೆಯಲ್ಲಿ ಏರಿಸುವ ಅಕ್ಕಿಕಾಳನ್ನು ತೆಗೆದುಕೊಂಡು ಹೋಗಿ, ತಮ್ಮೂರಲ್ಲಿ ಶರಣರಿಗೆ ದಾಸೋಹ ಮಾಡಬೇಕು. ಅಲ್ಲಿಗೆ ಆ ವರ್ಷದ ಶರಣ ವ್ರತವು ಪೂರ್ತಿಯಾಗುತ್ತದೆ.

3. ಶುಭ ಪ್ರಸಂಗಗಳ ನಂತರ ಧರ್ಮ ಕ್ಷೇತ್ರಗಳ ಸಂದರ್ಶನ

ಮದುವೆ, ಮಗುವಿನ ಜನನ -ನಾಮಕರಣ, ಜವಳ, ಗೃಹ ಪ್ರವೇಶ -ಮುಂತಾದ ಸಂತೋಷಕರ ಪ್ರಸಂಗಗಳ ನಂತರ ಲಿಂಗಾಯತ ಧರ್ಮೀಯರ ಧರ್ಮಕ್ಷೇತ್ರಗಳಾದ ಕೂಡಲ ಸಂಗಮ ಅಥವಾ ಬಸವ ಕಲ್ಯಾಣವನ್ನು ಬಸವ ಭಕ್ತರು ಸಂದರ್ಶಿಸಬೇಕು ಎಂಬ ಬಗ್ಗೆ ವಿಸ್ತೃತವಾಗಿ ಚರ್ಚಿಸಿ, ನಿರ್ಣಯಕ್ಕೆ ಬರಲಾಯಿತು. ಸಾಮಾನ್ಯವಾಗಿ ಶುಭ ಪ್ರಸಂಗಗಳ ನಂತರ ಶರಣರ ಸ್ಥಾನಗಳನ್ನು ಸಂದರ್ಶಿಸುವ ಪರಿಪಾಠ ಜನರಲ್ಲಿ ಇದೆಯಾದರೂ ಧರ್ಮಕ್ಷೇತ್ರಗಳಾದ ಕೂಡಲ ಸಂಗಮ ಮತ್ತು ಬಸವ ಕಲ್ಯಾಣವನ್ನು ಯಾವುದು ಸಮೀಪದಲ್ಲಿದೆಯೋ ಅದನ್ನು ಸಂದರ್ಶಿಸಿ ಗುರು ಬಸವಣ್ಣನವರಿಗೆ ಪೂಜೆ ಸಲ್ಲಿಸಿ ಬರುವುದು ಒಂದು ಧಾರ್ಮಿಕ ಪರಿಪಾಠವಾಗಬೇಕು ಎಂದು ನಿರ್ಣಯಿಸಲಾಯಿತು.

ಕೇವಲ ಶುಭ ಪ್ರಸಂಗವೇ ಏಕೆ ಸಾವಿನಂತಹ ದುಃಖದ ಪ್ರಸಂಗದ ನಂತರವೂ ಧರ್ಮಕ್ಷೇತ್ರವನ್ನು ಏಕೆ ಸಂದರ್ಶಿಸಬಾರದು ಎಂದು ಒಂದು ಪ್ರಶ್ನೆ ಬಂದಿತು. ಸಾಮಾನ್ಯವಾಗಿ ಸಾವಿನ ನಂತರ ಸೂತಕ (ಮೈಲಿಗೆ) ಕಳೆದುಕೊಳ್ಳಲು ಕ್ಷೇತ್ರ ದರ್ಶನ ಮಾಡಬೇಕೆಂಬ ಮೂಢ ನಂಬಿಕೆಗೆ ಅದು ಅವಕಾಶ ಮಾಡಿಕೊಡಬಹುದು. ಲಿಂಗಾಯತ ಧರ್ಮವು ಮರಣ ಸೂತಕವನ್ನು ನಂಬುವುದಿಲ್ಲ.

4. ಗುರು ಜಂಗಮರಿಗೆ ಸಾಷ್ಟಾಂಗ ನಮಸ್ಕಾರ ಮಾಡುವಾಗ ಇಷ್ಟಲಿಂಗ ಕೆಳಗೆ ಬೀಳುತ್ತದೆ, ಅಥವಾ ಕೆಳಗೆ ಆಗುತ್ತದೆ. ಇದು ಸೂಕ್ತವೇ?

ಸ -ಅಷ್ಟಾಂಗ ಎಂದರೆ ಶರೀರದ 8 ಅಂಗಗಳು ಭೂಮಿಗೆ ತಾಗುವಂತೆ ನಮಸ್ಕರಿಸುವುದು. ತಲೆಯಿಂದ ಕಾಲಿನವರೆಗೂ ಶರೀರ ಭೂಮಿಗೆ ತಗಲುವಂತೆ ನಮಸ್ಕರಿಸುವುದು. ತಲೆಯಿಂದ ಕಾಲಿನವರೆಗೂ ಶರೀರ ಭೂಮಿಗೆ ತಗಲುವಂತೆ ಮಲಗಿ ಕೈಯನ್ನು ಕಳಸದಂತೆ ಮೇಲಕ್ಕೆ ಮಾಡಿ ನಮಸ್ಕರಿಸುವುದು. ಲಿಂಗಾಯತ ಶರಣನ ಎದೆಯ ಮೇಲೆ ಇಷ್ಟಲಿಂಗವಿದ್ದು, ಹಾಗೆ ಸಾಷ್ಟಾಂಗ ಎರಗಿದಾಗ ಅದು ನೆಲಕ್ಕೆ ಬಡಿಯುವುದು/ ತಗಲುವುದು. ಧರ್ಮಪಿತರ ಒಂದು ವಚನ ಹೀಗಿದೆ.

ಬರ ಬರ ಭಕ್ತಿ ಅರೆಯಾಯಿತ್ತು ಕಾಣಿರಣ್ಣ

ಮೊದಲ ದಿನ ಹಣೆ ಮುಟ್ಟಿ, ಎರಡನೆಯ ದಿನ ಕೈ ಮುಟ್ಟಿ; ಅಂದರೆ ಬಹಳ ನಿಷ್ಠೆ ಇದ್ದಾಗ ವ್ಯಕ್ತಿ ಮಂಡಿಯೂರಿ ತನ್ನ ಕೈಗಳೆರಡನ್ನು ಗುರು /ಜಂಗಮರ ಹೆಬ್ಬೆರಳಿನ ಕೆಳಗೆ ಇಟ್ಟು ಹಣೆಯನ್ನು ಹೆಬ್ಬೆರಳಿಗೆ ತಾಗಿಸುವಂತೆ ನಮಸ್ಕರಿಸುವುದು ಪರಿಪಾಠ. ಅತೀವ ನಿಷ್ಠೆಯಿಲ್ಲದೆ ಕೇವಲ ಭಕ್ತಿ ಇರುವಾಗ

ವ್ಯಕ್ತಿ ನಿಂತು, ಬಾಗಿ ಕಾಲ್ಬೆರಳಿಗೆ ತನ್ನ ಬೆರಳುಗಳನ್ನು ತಾಗಿಸುವುದು ರೂಢಿ. ಇನ್ನೂ ಕಮ್ಮಿ ನಿಷ್ಠೆ ಇದ್ದು ಕೇವಲ ಔಪಚಾರಿಕವಾಗಿ ನಮಸ್ಕರಿಸುವವರು ತಮ್ಮ ಕೈ ಬೆರಳುಗಳನ್ನು ಮೊಳಕಾಲವರೆಗೆ ಮಾತ್ರ ಒಯ್ಯುವುದುಂಟು. ಗುರು ಬಸವಣ್ಣನವರ ಅಭಿಪ್ರಾಯದಂತೆ ಹಣೆ ಮುಟ್ಟಿ ನಮಸ್ಕರಿಸುವುದು ಶ್ರೇಷ್ಠ. ಮಂಡಿಯೂರಿ, ಹಣೆ ಹಚ್ಚುವಾಗ ಎಡಗೈಯಲ್ಲಿ ಇಷ್ಟಲಿಂಗವನ್ನು ಹಿಡಿದಿರಬಹುದು ಅಥವಾ ತನ್ನ ಬಟ್ಟೆಯ ಒಳಗೇ ಅದಿರಬಹುದು. ಇದರಿಂದ ಇಷ್ಟಲಿಂಗವು ಕೆಳಗೆ ಬೀಳುವುದು ತಪ್ಪುತ್ತದೆ. ಆದ್ದರಿಂದ ಸಾಷ್ಟಾಂಗದ ಬದಲು ಮಂಡಿಯೂರಿ ಕೈ ಮುಟ್ಟಿ ನಮಸ್ಕರಿಸುವುದೇ ಒಳ್ಳೆಯದು. ತುಂಬಾ ದಪ್ಪ ಇರುವವರು ಸಾಷ್ಟಾಂಗ ಮಾಡುವುದು ಬಹಳ ಕಷ್ಟ; ಅವರನ್ನು ಎಬ್ಬಿಸುವುದು ಇನ್ನೂ ಕಷ್ಟ. ಆದ್ದರಿಂದ ಸಾಷ್ಟಾಂಗ ಬೇಡ ಎಂದು ನಗೆಯ ಮಧ್ಯೆಯೇ ಬಹಳ ಜನ ಅಭಿಪ್ರಾಯ ಪಟ್ಟರು.

5. ಆಹ್ವಾನ ಪತ್ರಿಕೆಯ ಚಿಂತನಗೋಷ್ಠಿಯ ವಿಭಾಗದಲ್ಲಿ ಪ್ರಕಟವಾದ 5 ಮತ್ತು 6ನೆಯ ವಿಷಯದ ಬಗ್ಗೆ ಸ್ವಾರಸ್ಯಕರ ಚರ್ಚೆ ನಡೆಯಿತು.

ಲಿಂಗಾಯತ ಧರ್ಮದ ವಿಶೇಷತೆ ಏಕದೇವೋಪಾಸನೆ

1. ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ

2. ನಂಬಿದ ಹೆಂಡತಿಗೆ ಗಂಡನೊಬ್ಬ ಕಾಣಿರೋ
ನಂಬ ಬಲ್ಲ ಭಕ್ತಂಗೆ ದೇವನೊಬ್ಬ ಕಾಣಿರೋ

3. ಹಾಲ ಹಿಡಿದು ಬೆಣ್ಣೆಯಲರಸಲುಂಟೆ ?
ಲಿಂಗವಿದ್ದಂತೆ ಪುಣ್ಯಕ್ಷೇತ್ರಕ್ಕೆ ಹೋಗಲುಂಟೆ ?

ಇಂಥ ಆದೇಶ (*Commandings*) ವಾಕ್ಯಗಳು ಸಾವಿರಾರು. ಅನ್ಯ ದೈವಂಗಳ ಗುಡಿಗಳು ಕ್ಷೇತ್ರಗಳು ಅತ್ತಲಿರಲಿ. ಅವುಗಳೊಡನೆ ಭಾವನಾತ್ಮಕ ಸಂಬಂಧ ಅಷ್ಟಿರದು. ಆದರೆ ಭಾರತೀಯ ಯೋಗ ಪರಂಪರೆಯ ಮೂಲ ಪುರುಷ ಯೋಗಿರಾಜ ಶಿವನ ಕುರುಹಾದ ಸ್ಥಾವರ ಲಿಂಗಗಳು ಅನೇಕ. ಅಂಥ ಕ್ಷೇತ್ರಗಳಿಗೆ ಹೋಗಬೇಕೇ ಬಿಡಬೇಕೆ? ಅನಿವಾರ್ಯವಾಗಿ ಹೋದಾಗ ಏಕದೇವೋಪಾಸಕ ಶರಣನು ಹೇಗೆ ವರ್ತಿಸಬೇಕು? ಬಹುಪಾಲು ಲಿಂಗದೇವಾಲಯಗಳು ಲಿಂಗಾಯತರ ಒಡೆತನದಲ್ಲಿ, ನಿಯಂತ್ರಣದಲ್ಲಿ ಇರುತ್ತವೆ. ಅವುಗಳೊಡನೆ ಹೇಗೆ ವ್ಯವಹರಿಸಬೇಕು. ಬಸವಣ್ಣನ ಗುಡಿ ಎಂದು ನಂದಿ ವಿಗ್ರಹ ಕೂಡ್ರಿಸಿರುವ ಗುಡಿಗಳಿರುತ್ತವೆ. ಇವುಗಳೊಡನೆ ಹೇಗೆ ವ್ಯವಹರಿಸಬೇಕು? ಎಲ್ಲ ಲಿಂಗಾಯತರೂ ತತ್ವ ನಿಷ್ಠೆ ಹೊಂದಿರುವವರು, ಪ್ರೌಢರೂ ಆಗಿರುವುದಿಲ್ಲ. ಅವರಿಗೆ ಬಹುದೇವತಾ ಉಪಾಸನೆ ಬಿಡುವುದು ಕಷ್ಟಸಾಧ್ಯವಾಗುವುದು. ಇದಕ್ಕೆ ಪರಿಹಾರವೇನು ? ಇಂದು ಅನೇಕ ಲಿಂಗಾಯತರು ಮನೆ ದೇವರೆಂದು ಪೂಜಿಸುವ ಉಳವಿ ಚನ್ನಬಸವೇಶ್ವರ, ಮಲೆ ಮಹದೇಶ್ವರ, ಎಡೆಯೂರು ಸಿದ್ಧಲಿಂಗೇಶ್ವರ, ನಾಯಕನ ಹಟ್ಟಿ ತಿಪ್ಪೇಸ್ವಾಮಿ ಮುಂತಾದವರ ಕ್ಷೇತ್ರಗಳು ಸ್ಥಾವರ ಲಿಂಗ/ ದೇವತೆಗಳ ಕ್ಷೇತ್ರಗಳಾಗದೆ ಶರಣರ ಸಮಾಧಿ ಸ್ಥಾನಗಳಾಗಿ ಜಂಗಮ ಕ್ಷೇತ್ರಗಳಾಗಿವೆ. ಇವುಗಳ ಸಂದರ್ಶನ ಮತ್ತು ಪೂಜೆ ಇತ್ಯಾದಿಯನ್ನು ಏಕದೇವೋಪಾಸಕ ಶರಣನು ಹೇಗೆ ಮಾಡಬೇಕು ? ಈ ಎಲ್ಲಾ ಕುರಿತು ವಿವರವಾದ ಚರ್ಚೆ ನಡೆಯಿತು.

ಲಿಂಗಾಯತ ಧರ್ಮದ ಸಿದ್ಧಾಂತದ ಪ್ರಕಾರ ಸೃಷ್ಟಿಕರ್ತ ದೇವನು ಒಬ್ಬ; ಇಬ್ಬರು ಮೂವರು ದೇವರುಗಳು ಇರುವುದಿಲ್ಲ. ಅಂಥ ದೇವರಿಗೆ ಆಕಾರವಿಲ್ಲ. ಅವನು ಹುಟ್ಟು - ಸಾವು, ಭವ -ಭಯ ಇಲ್ಲದ ನಿರಂಜನನು. ಅಂಥ ದೇವರು ಗುರು -ಲಿಂಗ-ಜಂಗಮ ರೂಪದಲ್ಲಿ ಜಗತ್ತನ್ನು ಉದ್ಧರಿಸುವನು. ಗುರು ಬಸವಣ್ಣನವರಾಗಿ ಧರ್ಮ ಮಾರ್ಗ ತೋರಿ, ಅವರು ಕೊಟ್ಟ ಇಷ್ಟಲಿಂಗವಾಗಿ ಅಂಗದ ಮೇಲಿದ್ದು ಪೂಜೆಗೊಂಡು, ಜಂಗಮವಾಗಿ ಸಮಾಜಕ್ಕೆ ಮಾರ್ಗದರ್ಶನ ಮಾಡುವನು. ಆ ಒಬ್ಬ ದೇವನನ್ನು ಇಷ್ಟಲಿಂಗ ರೂಪದಲ್ಲಿ ಪಾತಿವ್ರತ್ಯ ಭಕ್ತಿಯಿಂದ ಆರಾಧಿಸಬೇಕು. ಇದೇ ಏಕದೇವೋಪಾಸನೆ. ಸಚ್ಚಿದಾನಂದ ನಿತ್ಯ ಪರಿಪೂರ್ಣನಾದ ದೇವನ 3 ಮುಖಗಳು ಗುರು - ಬಸವಣ್ಣ, ಲಿಂಗ-ಇಷ್ಟಲಿಂಗ, ಜಂಗಮ -ಧರ್ಮ ಬೋಧಕ ಮಹಾತ್ಮರು. ಈ ಮೂರು ತತ್ವಗಳ ಹೊರತು ಇನ್ನಿತರವು ಪರದೈವ -ಅವನ್ನು ಆರಾಧಿಸಬಾರದು.

ಈ ತತ್ವವನ್ನು ಅನುಷ್ಠಾನಕ್ಕೆ ತರಬೇಕಾದುದು ಮಹೇಶ್ವರ ಸ್ಥಲ ತಲುಪಿದ ಶರಣನಿಗೆ ಕಡ್ಡಾಯವಾಗಿರುತ್ತದೆ. ಹೀಗಿದ್ದಾಗ ನಿಜ ಶರಣನು ಅನ್ಯ ದೈವ, ಸ್ಥಾವರ ಲಿಂಗ ಮುಂತಾಗಿ ಪೂಜಿಸಬಾರದು, ನಮಿಸಬಾರದು.

ಈ ದಿಶೆಯಲ್ಲಿ ಎದುರಾಗುವ ಕೆಲವು ಸಮಸ್ಯೆಗಳು ಹೀಗಿವೆ:

1. ಲಿಂಗಾಯತ ಧರ್ಮವು ಸ್ವತಂತ್ರ ಧರ್ಮವಾದರೂ ಇದರ ಸಾಂಸ್ಕೃತಿಕ ಪರಂಪರೆ ಶೈವ ಮೂಲದ್ದು. ಉದಾ: ಹೆಸರುಗಳನ್ನು ಇಡುವ ಪದ್ಧತಿ. ಶಿವ, ಪಾರ್ವತಿ, ವೃಷಭ (ನಂದಿ), ವೀರಭದ್ರ ಇತ್ಯಾದಿ ಶಿವ ಸಂಸ್ಕೃತಿಯ ಹೆಸರನ್ನು ಇಡುವುದುಂಟು. ತಾತ್ವಿಕ ಪದಗಳ ಉಪಯೋಗ ಕೂಡ ಅಷ್ಟೆ. ಪರಿಕಲ್ಪನೆ ಶೈವ ಮತ್ತು ಲಿಂಗಾಯತದಲ್ಲಿ ಬೇರೆ ಬೇರೆ ಇದ್ದರೂ ಪದ ಬಳಕೆ ಒಂದೇ ಆಗಿರುತ್ತದೆ. ಲಿಂಗ, ಶಿವ, ಶೈವ, ವಿಭೂತಿ, ರುದ್ರಾಕ್ಷಿ, ಜಂಗಮ ಇತ್ಯಾದಿ. ಯೋಗಿರಾಜ ಶಿವನೊಡನೆ ಭಾವನಾತ್ಮಕ ಸಂಬಂಧ ಅವಿನಾಭಾವವಾಗಿ ಸಾಗಿ ಬಂದಿದೆ. ಗುರು ಪ್ರಭುದೇವರ ಒಂದು ವಚನ ಹೀಗಿದೆ.

ಶಿವ, ಗುರುವೆಂದು ಬಲ್ಲಾತನೆ ಗುರು
ಶಿವ, ಲಿಂಗವೆಂದು ಬಲ್ಲಾತನೆ ಗುರು
ಶಿವ, ಜಂಗಮವೆಂದು ಬಲ್ಲಾತನೆ ಗುರು
ಶಿವ, ಪ್ರಸಾದವೆಂದು ಬಲ್ಲಾತನೆ ಗುರು
ಶಿವ, ಪಾದೋದಕವೆಂದು ಬಲ್ಲಾತನೆ ಗುರು
ಇಂತೀ ಪಂಚವಿಧವೆ ಪಂಚಬ್ರಹ್ಮವೆಂದರುಹಿದ
ಮಹಾಮಹಿಮ ಸಂಗನ ಬಸವಣ್ಣನು ಎನಗೆಯೂ ಗುರು
ನಿನಗೆಯೂ ಗುರು, ಜಗವೆಲ್ಲಕ್ಕೂ ಗುರು ಕಾಣಾ ಗುಹೇಶ್ವರ.

ಈ ವಚನವು 4 ತತ್ವಗಳನ್ನು ಸಾರಿ ಹೇಳುತ್ತದೆ

1. ಇಲ್ಲಿ ಶಿವ ಪದವು ಸಂಕೇತಿಸುವುದು ಕೈಲಾಸ ಪತಿ, ಗೌರಿ ವಲ್ಲಭ ಶಿವನನ್ನಲ್ಲ ನಿರಾಕಾರ ದೇವರನ್ನು.

2. ದೇವರು ಅರ್ಥಾತ್ ಸೃಷ್ಟಿಕರ್ತನು ಗುರು -ಲಿಂಗ-ಜಂಗಮ ಎಂಬ 3 ಉಪಾಸ್ಯ ವಸ್ತುಗಳಾಗಿ ಆರಾಧಿಸಲ್ಪಟ್ಟು, ಪಾದೋದಕ ಪ್ರಸಾದಗಳ ಮೂಲಕ ಅನುಗ್ರಹಿಸುವನು.

3. ಈ 5 ತತ್ವಗಳೂ ಗುರು ಬಸವಣ್ಣನವರ ದಾರ್ಶನಿಕ ಕೊಡುಗೆ. ಅಷ್ಟಾವರಣಗಳಲ್ಲಿ ಬರುವ ಗುರು ಲಿಂಗ ಜಂಗಮ ಪಾದೋದಕ ಪ್ರಸಾದ ಗುರು ಬಸವಣ್ಣನವರ ಚಿಂತನೆಯ ಫಲ; ವಿಭೂತಿ ರುದ್ರಾಕ್ಷಿ ಮಂತ್ರ- ಶಿವನಿಂದ ಬಂದಿರುವ ಆಸ್ತಿ.

4. ಈ 5 ತತ್ವಗಳು ಎಲ್ಲ ಮಾನವರಿಗೂ ಲಭ್ಯ. ಇಂಥ ವಿಶಾಲ ಸಿದ್ಧಾಂತ ಬೋಧಿಸಿದ ಗುರು ಬಸವಣ್ಣನವರು ನನಗೆ, ನಿನಗೆ ದೇವರಿಗೆ? ಮಾತ್ರವಲ್ಲ ಜಗತ್ತಿಗೇ ಗುರುವು. ಎನ್ನುತ್ತಾರೆ ಪ್ರಭುದೇವರು.

ಸಾಂಸ್ಕೃತಿಕವಾಗಿ ಶೈವ ಪ್ರಕ್ರಿಯಾತ್ಮಕ ಪದಗಳೊಡನೆ ವಚನ ಸಾಹಿತ್ಯವು ಸಾಮ್ಯ ಹೊಂದಿದ್ದರೆ ಲಿಂಗಾಯತ ಸಮಾಜವು ಭಾವನಾತ್ಮಕವಾಗಿ "ಗುರು ಶಿವ"ನೊಡನೆ ಸಂಬಂಧ ಹೊಂದಿದೆ. ಹೀಗಾಗಿ ಶಿವನೊಡನೆ ಭಾಕ್ತಿಕ ಸಂಬಂಧ ಕಳಚಿಕೊಳ್ಳಲು ಬಹು ಹೆಚ್ಚಿನ ಬೌದ್ಧಿಕ ಸ್ಥೈರ್ಯವನ್ನು ವ್ಯಕ್ತಿಯು ಹೊಂದಬೇಕಾಗುತ್ತದೆ. ವೈದಿಕ ಮತ್ತು ವೈಷ್ಣವ ಭಕ್ತಿಯನ್ನು ಬಿಟ್ಟಷ್ಟು ಸುಲಭವಾಗಿ ಶಿವಭಕ್ತಿಯನ್ನು ಲಿಂಗಾಯತರು ಬಿಡಲಾರರು.

ಇನ್ನೊಂದು ಸ್ವಾರಸ್ಯಕರ ಸಂಗತಿ ಎಂದರೆ ಇಂದು ಲಿಂಗಾಯತರ ಬಹಳ ಕ್ಷೇತ್ರಗಳು ವೈದಿಕೀಕರಣಗೊಂಡು, ಆಗಮೀಕರಣಗೊಂಡು ದೇವತಾ ಕ್ಷೇತ್ರಗಳೆಂಬಂತೆ ಸ್ಥಾವರಗೊಂಡಿವೆ. ಉದಾಃ ಮಾದೇಶ್ವರ. ಅವರ ದೇವಾಲಯಗಳನ್ನು ಕಟ್ಟಿ ಗೋಪುರದ ಮುಂಭಾಗದಲ್ಲಿ ಶಿವ, ಪಾರ್ವತಿ, ನಂದಿ ಕೂರಿಸಿರಲಾಗುತ್ತದೆ. ಇದರಿಂದ ಬಹುಪಾಲು ಜನರು ಮಾದೇಶ್ವರ ಎಂದರೆ ಶಿವನ ಒಂದು ರೂಪ ಅಥವಾ ಅವತಾರ ಎಂದು ತಿಳಿದಿದ್ದಾರೆ. ಆದರೆ ಅವರು ಬಸವ ಪಥದಲ್ಲಿ ನಡೆದ ಶುದ್ಧ ಶರಣ ಮಾರ್ಗಿಗಳು. ಗುಡ್ಡಗಳಲ್ಲಿ ಸಂಚರಿಸಿ ಆದಿ ವಾಸಿಗಳು, ಗಿರಿಜನರಿಗೆ ಧರ್ಮಬೋಧೆ ಮಾಡಿ, ದೀಕ್ಷೆ ನೀಡಿದ ಕ್ರಾಂತಿ ಪುರುಷರು. ಇವತ್ತು ಅವರ ಗುಡಿ ಒಂದು ಸ್ಥಾವರ ಕ್ಷೇತ್ರವಾಗಿ, ಮೂಲ ಲಿಂಗಾಯತ ಧರ್ಮಕ್ಕೆ ಹೊರತಾದ ಆಚರಣೆ, ಉತ್ಸವಗಳನ್ನು ಹೊಂದಿದೆ. ಅದೇ ರೀತಿ ಶ್ರೀ ಸಿದ್ಧಲಿಂಗೇಶ್ವರರ ಎಡೆಯೂರು. ಕ್ರಾಂತಿಪುರುಷ ಬಸವಣ್ಣನವರ ಪಥದಲ್ಲಿ ನಡೆದ ಶ್ರೀ ಸಿದ್ಧಲಿಂಗೇಶ್ವರರು 12ನೆಯ ಶತಮಾನದ ನಂತರ ಮತ್ತೊಮ್ಮೆ ಲಿಂಗಾಯತ ಧರ್ಮಕ್ಕೆ ಸುವರ್ಣಯುಗವನ್ನು ತಂದುಕೊಟ್ಟವರು. ಕರ್ನಾಟಕದ ದಕ್ಷಿಣ ಭಾಗ, ತಮಿಳು ನಾಡು, ಕೇರಳದವರೆಗೆ ಲಿಂಗಾಯತ ಧರ್ಮವನ್ನು ಹಬ್ಬಿಸಿದ ಮಹಾನ್ ವ್ಯಕ್ತಿಗಳು.

ಅವರು ಬಹಳ ಪುರಾತನ ವ್ಯಕ್ತಿಯಲ್ಲದಿದ್ದರೂ ಸಂಪೂರ್ಣ ಪುರಾಣೀಕರಣಗೊಂಡಿದ್ದಾರೆ. ಅವರ ಅಸಂಖ್ಯಾತ ಭಕ್ತರು ಸಿದ್ಧಲಿಂಗೇಶ್ವರರ ವಚನಗಳನ್ನು ಓದಿ ಅವರ ಉನ್ನತ ವ್ಯಕ್ತಿತ್ವ ತಿಳಿಯುವ ಬದಲು ಬರೀ ಅಭಿಷೇಕದಲ್ಲೇ ಸಂತೃಪ್ತಿ ಪಡುತ್ತಾರೆ. ಇಂದು ಅದು ಜಂಗಮ ಕ್ಷೇತ್ರ ಎಂಬ ಕಲ್ಪನೆಯೂ ಬರದು.

ಅದೇ ರೀತಿ ಗುರು ಸಿದ್ಧರಾಮೇಶ್ವರರ ಸೊಲ್ಲಾಪುರ. ಚನ್ನಬಸವಣ್ಣನವರ ಉಳವಿಯೂ ಅಷ್ಟೇ ಶೈವೀಕರಣ ಗೊಂಡಿದ್ದರೂ ಎಡೆಯೂರಿನಷ್ಟು ವೈಷ್ಣವೀಕರಣ, ವೈದಿಕೀಕರಣಗೊಂಡಿಲ್ಲ.

ಈ ಸಾಂಸ್ಕೃತಿಕ ಪತನಕ್ಕೆ ಕಾರಣ ಅನಿರೀಕ್ಷಿತ ಕಲ್ಯಾಣ ಕ್ರಾಂತಿ ಮತ್ತು ಅದರ ನಂತರ ಉಂಟಾದ ನಿರ್ವಾತ. ಇದನ್ನು ನಾವು ಲಿಂಗಾಯತ ಧರ್ಮದ ಕಗ್ಗತ್ತಲೆಯ ಯುಗ ಎನ್ನಬಹುದು. ಮಾರ್ಗದರ್ಶಕರಿಲ್ಲದ ಸಮಾಜ, ನಿಯಂತ್ರಣವಿಲ್ಲದ ವ್ಯವಸ್ಥೆಯಾಯಿತು. ಪುರೋಹಿತ ಶಾಹಿ ಪುನಃ ಒಳಸೇರಿ ಭದ್ರ ನೆಲೆಯನ್ನು ಕಂಡುಕೊಂಡಿತು. ಕ್ರಾಂತಿಕಾರಿ ಯುಗ ಪುರುಷ ಗುರು ಬಸವಣ್ಣನವರು "ಎತ್ತು (ನಂದಿ)" ಆದರು, ಮಹಾನುಭಾವಿ ಶರಣರು ಮನೆದೇವರಾದರು. ಲಿಂಗಾಯತ ಧರ್ಮ -ಸಮಾಜಗಳು ಜಡಗಟ್ಟಿ ನಿಂತವು. ಈ ಹಿನ್ನೆಲೆಯಲ್ಲಿ ನನ್ನನ್ನು ತೀವ್ರವಾಗಿ ಬಾಧಿಸುತ್ತಿರುವ ಚಿಂತೆ ಎಂದರೆ ಮನೆದೇವರಾಗಿ ಸ್ಥಾವರಗೊಂಡಿರುವ ಶರಣರ ಸ್ಥಾನಗಳನ್ನು, ಶರಣರನ್ನು ಕಡೆಗಣಿಸಬಹುದೆ? ಅಲ್ಲಿಯ ಆಚರಣೆ ನೋಡಿದರೆ ವಚನ ಸಾಹಿತ್ಯ ಸಂವಿಧಾನಕ್ಕೆ ತದ್ವಿರುದ್ಧ. ಇದ್ದಂತಿರಲಿ, ಆದಂತೆ ಆಗಲಿ, ಸಾಗಿದಂತೆ ಸಾಗಲಿ ಎಂಬ ಔದಾಸೀನ್ಯದಿಂದ ನಮ್ಮ ಮಠಾಧಿಪತಿಗಳು ಕೈಕಟ್ಟಿ ಕಣ್ಣಿದ್ದೂ ಕುರುಡಾಗಿ ಕಿವಿಯಿದ್ದೂ ಕಿವುಡರಾಗಿ ಬಾಯಿದ್ದು ಮೂಕರಾಗಿ ಕೂರದೆ ಕುಳಿತು, ಚರ್ಚಿಸಿ ಕೆಲವು ಬದಲಾವಣೆ ಸುಧಾರಣೆ ತಂದು ವಚನ ಸಾಹಿತ್ಯ ಸಂವಿಧಾನದ ಸಮೀಪಕ್ಕೆ ಶರಣರ ಕ್ಷೇತ್ರಗಳನ್ನು ತಂದರೆ ಬಹು ದೊಡ್ಡ ವಿದ್ಯುತ್ ಸಂಚಾರ ಸಮಾಜದಲ್ಲಿ ಆಗುವುದು.

ಆದ್ದರಿಂದ ಈ ದಿಶೆಯಲ್ಲಿ ಕೆಲವು ಸಲಹೆಗಳು :

1. ತಮ್ಮ ಊರುಗಳಲ್ಲಿ , ಲಿಂಗಾಯತ ಸಮಾಜದ ಆಡಳಿತಕ್ಕೊಳಪಟ್ಟಿರುವ ಶಿವ ದೇವಾಲಯಗಳಲ್ಲಿ ಶರಣ ಸಂಗಮ- ಸಾಮೂಹಿಕ ಪ್ರಾರ್ಥನೆ -ವಚನಧರ್ಮ ಪ್ರವಚನ ನಡೆಸುವುದು.

2. ವಚನ ಸಾಹಿತ್ಯದ ಸತತ ಅಧ್ಯಯನ ಮಾಡುತ್ತ, ಬೌದ್ಧಿಕ ಪಟುತ್ವ ಬೆಳೆಸಿಕೊಂಡು ಏಕದೇವೋಪಾಸಕರಾಗುವುದು.

ಅ) ಸಾಮಾನ್ಯ ಲಿಂಗಾಯತರು ಅತ್ಯಂತ ಅಜ್ಞಾನಿಗಳಾಗಿ ಸ್ವಧರ್ಮಕ್ಕೆ ವಿರುದ್ಧವಾಗಿ ಆಚರಣೆ ಮಾಡುತ್ತಿದ್ದರೂ ಅವರನ್ನು ಒಮ್ಮೆಗೇ ತೀವ್ರವಾಗಿ ಟೀಕಿಸದೆ ಹಂತಹಂತವಾಗಿ ಶುದ್ಧೀಕರಿಸಬೇಕು. ಏಕೆಂದರೆ ಅವರು ಯಾವ ಸ್ಥಿತಿಯಲ್ಲಿ ಇರುತ್ತಾರೆಂದರೆ ವಚನ ಸಾಹಿತ್ಯದ ಎಕ್ಸರೇ ಬಿಟ್ಟಾಗ ತಮ್ಮ ತಪ್ಪನ್ನು ಅರಿಯುವ ಬದಲು ಧರ್ಮಗುರು ಬಸವಣ್ಣನವರನ್ನು ನಿಂದಿಸುವ ಮಟ್ಟಿಗೂ ಹೋಗುತ್ತಾರೆ. ಮೊದಲು ಇಷ್ಟಲಿಂಗ ದೀಕ್ಷೆ ಪಡೆದು ಪೂಜೆ ಮಾಡಲು ಭವಿ -ಲಿಂಗಾಯತರನ್ನು ಪ್ರೇರೇಪಿಸಬೇಕು.

ಆ) ಯಾವಾಗ ಅರಿವು ಮೂಡಿ ಏಕದೇವೋಪಾಸನೆಯ ಮಹತ್ವ ತಿಳಿಯುವುದೋ ಆಗ ಇನ್ನೊಂದು ದೀಕ್ಷೆ ನೀಡಿ (ಲಿಂಗ ನಿಷ್ಠಾ ದೀಕ್ಷೆ) ಅವರನ್ನು ಏಕದೇವೋಪಾಸನೆಗೆ ಬದ್ಧರನ್ನಾಗಿ ಮಾಡುವುದು. ಇವರು ಬಹಿರಂಗದ ಕ್ಷೇತ್ರಗಳಿಗೆ ಹೋದಾಗ ಹೊರಗಿನ ವಸ್ತುವಿಗೆ ನಮಸ್ಕರಿಸದೆ, ಎದೆಯ ಮೇಲಿರುವ ಇಷ್ಟಲಿಂಗವನ್ನು ಹೊರತೆಗೆದು ಅದಕ್ಕೆ ನಮಸ್ಕರಿಸಬೇಕು.

3. ಬಸವಣ್ಣನ (ನಂದಿ) ಗುಡಿಗಳಲ್ಲಿ ನಂದಿಯ ವಿಗ್ರಹವಿರುತ್ತವೆ. ಗುರು ಬಸವಣ್ಣನವರು ವೃಷಭನ ಅವತಾರ ಎಂದು ನಂದಿಯ ರೂಪದಲ್ಲಿ ಆರಾಧಿಸುವುದು ಕಗ್ಗತ್ತಲೆಯ ಯುಗದಲ್ಲಿ ಆರಂಭವಾಗಿದೆ. ನಂದಿಯ ವಿಗ್ರಹ ತೆಗೆಯಿರಿ ಎಂದರೆ ಮೂಢಭಕ್ತರು ತೆಗೆಯರು. ಅದರ ಬದಲು ನಂದಿಯ ವಿಗ್ರಹದ ಮೇಲೆ ಪಂಚಲೋಹದ ಅಥವಾ ಹಿತ್ತಾಳೆ -ಕಂಚಿನ ಮಾನವಾಕಾರದ ಬಸವಣ್ಣನವರ ಮೂರ್ತಿಯನ್ನು ಕೂರಿಸಿದರೆ ಗುರು ಬಸವಣ್ಣನವರು ಒಬ್ಬ ಕ್ರಾಂತಿಪುರುಷರು ಎಂಬುದಾದರೂ ಎಲ್ಲರಿಗೂ ಅರ್ಥವಾಗುವುದು.

- ಮಾತಾಜಿ

(ವಿಶೇಷ ಸೂಚನೆ : ಈ ಬಗ್ಗೆ ಶರಣ ಬಂಧುಗಳು ಚಿಂತನೆ ಮಾಡಿ ತಮ್ಮ ಸಲಹೆ -ಸೂಚನೆ ಬರೆದು ಕಳಿಸಬಹುದು. - ಮಾತಾಜಿ)

ಯಾತ್ರಾರ್ಥಿಗಳಿಗೆ ನೆರವು

ಅಲ್ಲಮಗಿರಿಯ ಲಿಂಗಾಯತ ಗಣ ಮೇಳಾವಕ್ಕೆ ಬರಬೇಕೆನ್ನುವ ಶರಣ ಬಂಧುಗಳು ಮೀರಜ್‌ವರೆಗೆ ರೇಲ್ವೆ ರಿಸರ್ವೇಷನ್ ಮಾಡಿಸಿಕೊಂಡು, ಅಲ್ಲಿಂ ಹಾತ್‌ಕಣಂಗಲೆಗೆ ಪ್ಯಾಸೆಂಜರ್ ಟ್ರೇನ್ ಅಥವಾ ಬಸ್ಸಿನಲ್ಲಿ ಬಂದು ಅಲ್ಲಿಂದ ರಾಮಲಿಂಗ ಮಾರ್ಗವಾಗಿ ಅಲ್ಲಮಗಿರಿಯನ್ನು ತಲ್ಪಬಹುದು. ಅಥವಾ ಇಚಲಕರಂಜಿವರೆಗೆ ಬಸ್ಸಿನಲ್ಲಿ ಬಂದು ಅಲ್ಲಿಂದ ಬೇರೆ ವಾಹನದ ಮೂಲಕ ಅಲ್ಲಮಗಿರಿಗೆ ಬರಬಹುದು.

2011ರ ಜನಗಣತಿಗೆ ಸಿದ್ಧತೆ .

- ಮಾತಾಜಿ

ಬಹಳಷ್ಟು ಶ್ರಮವಹಿಸಿ ಪ್ರಚಾರ ಮಾಡಿದ್ದರಿಂದ Religious Community ಧಾರ್ಮಿಕ ಸಮುದಾಯ ಎಂದು 55,19,622 (ಐವತ್ತೈದು ಲಕ್ಷದ ಹತ್ತೊಂಬತ್ತು ಸಾವಿರದ ಆರು ನೂರಾ ಇಪ್ಪತ್ತೆರಡು ಜನ) Lingayats ಬಗ್ಗೆ 2001ರ ಜನಗಣತಿಯಲ್ಲಿ ದಾಖಲಾಗಿದೆ. ಇದು ನಿಖರವಾದ ಸಂಖ್ಯೆಯಲ್ಲ. ದೆಹಲಿಯಲ್ಲಿ 27 (ಇಪ್ಪತ್ತೇಳು) ಜನ ಎಂಬುದಾಗಿ ದಾಖಲಾಗಿದೆ. ನಮಗೆ ಪರಿಚಯವಿರುವ ಒಂದು ಕುಟುಂಬದಲ್ಲೇ ಅಷ್ಟು ಜನರಿದ್ದಾರೆ. ಈ ದೋಷದ ಜೊತೆ, ಲಿಂಗಾಯತ/ವೀರಶೈವ ಎಂದು ಬೇರೆ ದಾಖಲಾಗಿರುವುದು ಮತ್ತೊಂದು ಪ್ರಮಾದ; ಈ ಪ್ರಮಾದಕ್ಕೆ ಅಖಿಲ ಭಾರತ ವೀರಶೈವ ಮಹಾಸಭೆಯೇ ಮುಖ್ಯ ಕಾರಣ.

ಆದ್ದರಿಂದ ಈಗಿನಿಂದಲೇ ಜನರಲ್ಲಿ ಜಾಗೃತಿ ಉಂಟು ಮಾಡುವ ಕೆಲಸ ಆರಂಭವಾಗಬೇಕು. ಒಳಪಂಗಡಗಳು, ಸೌಲಭ್ಯ ಇದಕ್ಕೂ ಜನಗಣತಿಗೂ ಸಂಬಂಧವಿಲ್ಲ. ಆದ್ದರಿಂದ ಲಿಂಗಾಯತರು, ಹಿಂದು ಲಿಂಗಾಯತ ಎಂದಾಗಲೀ ಒಳಪಂಗಡಗಳನ್ನಾಗಲಿ ಬರೆಯದೆ, ಕೇವಲ ಲಿಂಗಾಯತ ಎಂದು ದಾಖಲಿಸಬೇಕು. ಬರೆದ ನಂತರ ತಾವು ಹೇಳಿದ್ದು ಸರಿಯಾಗಿ ದಾಖಲಿಸಲ್ಪಟ್ಟಿದೆಯೇ ಎಂಬುದನ್ನು ಪರೀಕ್ಷಿಸಬೇಕು. ಈವರೆಗಿನ ಜನಗಣತಿಯಲ್ಲಿ ಹಿಂದು, ಜೈನ, ಬೌದ್ಧ, ಮುಸಲೀಮ್, ಕ್ರೈಸ್ತ, ಸಿಖ್ ಇವರಿಗೆ H, J, B, M,C, S, ಎಂಬ ಸಂಕೇತಾಕ್ಷರ ಕೊಟ್ಟು 7ನೆಯ ಅಂಕಣ- ಮತ್ತು ಇತರರು (*and others*) ಎಂದು ದಾಖಲಿಸಲಾಗುತ್ತಿತ್ತು. ಲಿಂಗಾಯತ ಧರ್ಮೀಯರಿಗೆ ಸ್ವತಂತ್ರ ಅಂಕಣ ಇಲ್ಲದಿದ್ದರಿಂದ, ಮತ್ತು ಇತರರು ಎಂಬಲ್ಲಿ ಬರೆಯಬೇಕಾಗುತ್ತಿತ್ತು. ಆದರೆ ಬಹಳ ಜನ ಹಾಗೆ ಬರೆಸುವುದು ತಿಳಿಯದೆ ಹಿಂದು ಕಾಲಮ್‌ದಲ್ಲಿ, ಅಥವಾ 7ನೆಯ ಅಂಕಣದಲ್ಲಿ ಹಿಂದು ಲಿಂಗಾಯತ ಎಂದು ಬರೆಸಿದ್ದಾರೆ. ಹೀಗಾಗಿ ಗಣತಿದಾರರು ಹಿಂದು ಮಾತ್ರ ಉಳಿಸಿಕೊಂಡಿರುವ ಸಾಧ್ಯತೆ ಇದೆ. ಕೆಲವರು ಗಣತಿದಾರರು (ದುರ್)ಉದ್ದೇಶ ಪೂರ್ವಕವಾಗಿ ಲಿಂಗಾಯತ ಎಂದು ಹೇಳಿದರೂ ಬರೆಯದೆ ಹೋಗಿರುವ ಸಾಧ್ಯತೆ ಇದೆ.

2011ರ ಜನಗಣತಿಯಲ್ಲಿ ಧರ್ಮಗಳಿಗೆ ಸಂಕೇತಾಕ್ಷರಗಳ ಬದಲಿಗೆ 1,2,3,4,5,6 ಎಂದು ಸಂಖ್ಯೆಯನ್ನು ಕೊಡುವ ಸಂಭವವಿದೆಯಂತೆ. ಅಷ್ಟರೊಳಗೆ ಸ್ವತಂತ್ರ ಧರ್ಮದ ಮಾನ್ಯತೆ ಸಿಕ್ಕರೆ ಲಿಂಗಾಯತ ಧರ್ಮಕ್ಕೆ 7ನೆಯ ಸಂಖ್ಯೆ ಸಿಗುವುದು. ಅವರೆಗೆ ಆಗದೆ ಇದ್ದರೆ ಆಗ - ಮತ್ತು ಇತರರು 7ನೆಯ ಅಂಕಣ ಆಗುತ್ತದೆ. ಜನ ಜಾಗೃತಿಯೊಂದೇ ಇರುವ ದಾರಿ ! ಈಗಿನಿಂದಲೇ ಎಲ್ಲರೂ ತಪ್ಪದೆ ಈ ದಿಶೆಯಲ್ಲಿ ಪ್ರಯತ್ನಿಸಬೇಕು.

ಏಪ್ರಿಲ್ ತಿಂಗಳಲ್ಲಿ ಜಾತಿವಾರು ಜನಗಣತಿ

ಪತ್ರಿಕೆಗಳಲ್ಲಿ ಕರ್ನಾಟಕದ ಹಿಂದುಳಿದ ವರ್ಗಗಳ ಆಯೋಗದಿಂದ ಜಾತಿವಾರು ಜನಗಣತಿ ಮಾಡುವುದಾಗಿ ಪ್ರಕಟವಾಗಿತ್ತು. ಸರ್ಕಾರದ ಪತನವಾದ್ದರಿಂದ ಬಹುಶಃ ಮೊದಲು ಘೋಷಿಸಿದಂತೆ ಏಪ್ರಿಲ್‌ದಲ್ಲಿ ನಡೆಯುವುದೋ ಇಲ್ಲವೋ. ಒಂದು ವೇಳೆ ನಡೆದರೂ ಲಿಂಗಾಯತ ಸಮಾಜವು ಸಿದ್ಧವಾಗಿರಬೇಕು. ಲಿಂಗಾಯತವು ದೀಕ್ಷೆಯ ಮೂಲಕ ಲಭ್ಯವಾಗುವುದರಿಂದ ಅದು ಧರ್ಮವೂ ಅಹುದು; ತಾಯಿ ತಂದೆ ಲಿಂಗಾಯತರಿದ್ದು ಅಥವಾ ಇಬ್ಬರಲ್ಲಿ ಯಾರಾದರೊಬ್ಬರು ಲಿಂಗಾಯತರಿದ್ದು ಹುಟ್ಟಿನಿಂದಲೇ ಬರುವುದರಿಂದ ಇದು ಜಾತಿಯೂ ಅಹುದು. ಆದ್ದರಿಂದ ಜಾತಿವಾರು ಜನಗಣತಿ ನಡೆದರೆ ಧರ್ಮ ಎಂಬಲ್ಲಿಯೂ ಲಿಂಗಾಯತ ಎಂದು, ಜಾತಿ ಅಂಕಣದಲ್ಲಿಯೂ ಲಿಂಗಾಯತ ಎಂದು ಬರೆಸುವ ಬಗ್ಗೆ ಎಲ್ಲರೂ ಗಮನ ಹರಿಸಬೇಕು ಮತ್ತು ಜಾಗೃತಿ ಮೂಡಿಸಬೇಕು.

ಹಿಂದೂ ಧರ್ಮ -ವಿಮರ್ಶೆ ಮುಂದಿನ ಸಂಚಿಕೆಯಲ್ಲಿ

ಶ್ರೀ ಎಲ್ಲಪ್ಪ ಅವರು ಬರೆದ ಹಿಂದೂ ಧರ್ಮ ಎಂಬ ಲೇಖನದ ವಿಮರ್ಶೆಯನ್ನು ಮಾರ್ಚ್ 2008ರ ಮಾರ್ಚ್ ಸಂಚಿಕೆಯಲ್ಲಿ ಕೊಡಲಾಗುವುದು.

ಸಮಯದ ಅಭಾವವಿರುವ ಕಾರಣ ಶರಣ ಮೇಳದ ವರದಿಯನ್ನು ಮುಂದಿನ ಸಂಚಿಕೆಯಲ್ಲಿ ಹಾಕಲಾಗುವುದು

- ಸಂಪಾದಕರು

ಹಿಂದೂ ಧರ್ಮ

- ಲೇಖಕ : ಎಲ್ಲಪ್ಪ, ನಂ. 6, ಜೋಡಿ ರಸ್ತೆ
ಸರಸ್ವತಿ ಪುರಂ, ಮೈಸೂರು -570009

ಹಿಂದೂ ಧರ್ಮ (ಸನಾತನ ಧರ್ಮ, ವೈದಿಕ ಧರ್ಮ) ವು ಜಗತ್ತಿನಲ್ಲಿಯೇ ಅತ್ಯಂತ ಪುರಾತನವಾದ ಧರ್ಮವಾಗಿದ್ದು, ಇದು ಯಾವುದೇ ವ್ಯಕ್ತಿಯ ಜೀವನ ಮತ್ತು ಆತನ ಸಂದೇಶದ ಮೇಲೆ ಸ್ಥಾಪಿತವಾದ ಧರ್ಮವಲ್ಲ, ಶಾಶ್ವತವಾದ ತತ್ವಗಳ ಆಧಾರದ ಮೇಲೆ ನಿಂತ ಧರ್ಮ. ಈ ತತ್ವಗಳನ್ನು ದರ್ಶನ ಮಾಡಿ, ಈ ತತ್ವಗಳನ್ನು ತಮ್ಮ ಜೀವಿತ ಕಾಲದಲ್ಲಿಯೇ ಅನುಷ್ಠಾನ ಮಾಡಿ ಜಗತ್ತಿಗೆ ಬೋಧಿಸಿದ ಈ ಮಹಾನ್ ವ್ಯಕ್ತಿಗಳಿಗೆ ದ್ರಷ್ಟಾರರು ಎಂದು ಕರೆಯುತ್ತಾರೆ. ಜಗತ್ತಿನಲ್ಲಿ ಈಗಾಗಲೇ ಇದ್ದ ಶಾಶ್ವತವಾದ (ಎಲ್ಲ ಕಾಲಕ್ಕೂ, ಎಲ್ಲಾ ಜನಾಂಗಕ್ಕೂ ಅನ್ವಯಿಸುವ) ಮಹಾತ್ಮರೇ ಹೊರತು ಸಂಸ್ಥಾಪಕರಲ್ಲ.

ಹಿಂದೂ ಧರ್ಮದಲ್ಲಿ ವ್ಯಕ್ತಿಗಳು ಗೌಣ; ತತ್ವ ಮುಖ್ಯ:

ಎಲ್ಲಾ ಜೀವಿಗಳಲ್ಲಿ ಸಮಾನವಾದ ದಿವ್ಯ ಶಕ್ತಿಯನ್ನು ಸತ್ಯವನ್ನು ಆತ್ಮದ ಜ್ಯೋತಿಯನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದೇ ಧರ್ಮ ಎಂದು ಉಪನಿಷತ್ತುಗಳು ಸಾರಿ ಹೇಳುತ್ತಿವೆ.

ಗೀತೆಯಲ್ಲಿ ಹೇಳಿರುವಂತೆ ಯಾವುದೇ ವ್ಯಕ್ತಿಯು, ಆತನು ಯಾವುದೇ ದೇಶಕ್ಕೆ, ಮತಗಳಿಗೆ, ಜಾತಿಗೆ ಸೇರಿದವನಾಗಿದ್ದರೂ ಸಹ, ಆತನು ತನ್ನಲ್ಲಿರುವ ಅಹಂಕಾರ, ಬಲ, ದರ್ಪ, ಕ್ರೋಧ, ಇವುಗಳನ್ನು ತ್ಯಜಿಸಿ, ಸಂಗ್ರಹ, ಮೋಹವಿಲ್ಲದೆ, ಶಾಂತನಾಗಿ ಬ್ರಹ್ಮಭಾವ (ಭಗವಂತ ಸೃಷ್ಟಿಕರ್ತ) ವನ್ನು ಹೊಂದಲು ಯೋಗ್ಯನಾಗುತ್ತನೆ. ಬ್ರಹ್ಮಭಾವವನ್ನು ಹೊಂದಿದವನು ಸದಾ ಪ್ರಶಾಂತ ಚಿತ್ತನಾಗಿ, ಶೋಕಿಸದೆ, ಏನನ್ನೂ ಬಯಸದೆ, ಸಮಸ್ತ ಜೀವಿಗಳನ್ನು ಸಮಾನವಾಗಿ ಕಾಣುತ್ತಾನೆ. ಭಗವಂತನ ಭಾವವನ್ನು ಹೊಂದುತ್ತಾನೆ. ಯಾರನ್ನೂ ದ್ವೇಷಿಸುವುದಿಲ್ಲ, ಎಲ್ಲರಲ್ಲೂ ಮಿತ್ರತ್ವ ಭಾವವನ್ನು ಹೊಂದಿದ್ದು ಎಲ್ಲರ ಹಿತವನ್ನು ಬಯಸುತ್ತಾನೆ. ಕರುಣಾ ಭಾವನೆಯನ್ನು ಹೊಂದಿರುತ್ತಾನೆ. ಸಮಸ್ತ ಐಹಿಕ ಕಾಮನೆಗಳನ್ನು ತ್ಯಜಿಸಿರುತ್ತಾನೆ. ಜಗತ್ತಿನಲ್ಲಿ ಪ್ರಚೋದಿತ ಇಂದ್ರಿಯ ವಸ್ತುಗಳ ಮಧ್ಯದಲ್ಲಿದ್ದರೂ, ಯಾವ ವಿಷಯ ವಸ್ತುಗಳಲ್ಲಿಯೂ, ಮೋಹಗೊಳ್ಳುವುದಿಲ್ಲ, ತಾನು ಯಾವುದೇ ಕಾರ್ಯಕ್ಷೇತ್ರದಲ್ಲಿ ಕಾರ್ಯವನ್ನು ನಿರ್ವಹಿಸುತ್ತಿದ್ದರೂ ಸಹ ಆ ಕಾರ್ಯಗಳನ್ನು ನಿಃಸ್ವಾರ್ಥ ಭಾವದಿಂದ, ಜಗತ್ತಿನ ಕಲ್ಯಾಣದ ದೃಷ್ಟಿಯಿಂದ ಮಾಡುತ್ತಾನೆ. ಇವನೇ ನಿಜವಾದ ಜ್ಞಾನಿ ಹಾಗೂ ದೈವತ್ವಕ್ಕೆ ಏರಿದ ವ್ಯಕ್ತಿಯಾಗಿರುತ್ತಾನೆ.

ಇದರಿಂದ ನಮಗೆ ತಿಳಿದಿರುವ ಒಂದು ಅಂಶವೆಂದರೆ, ನಾಮರೂಪಗಳ ವೈವಿಧ್ಯತೆಯ ಹಿಂದೆ, ಇರುವುದು ಒಂದೇ ಶಕ್ತಿ. ಈ ಶಕ್ತಿಯನ್ನು ಅರಿತ ಜ್ಞಾನಿಗಳು ಯಾರಲ್ಲೂ ಭೇದಭಾವನೆಯನ್ನು ಹೊಂದಿರುವುದಿಲ್ಲ. ಉದಾ :ಬುದ್ಧ, ಮಹಾವೀರ, ಜೀಸಸ್, ಬಸವಣ್ಣ,ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು, ಶ್ರೀ ಮಾತೆ ಶಾರದಾ ದೇವಿಯವರು, ಅಕ್ಕಮಹಾದೇವಿಯವರು, ರಮಣ ಮಹರ್ಷಿಗಳು, ಚೈತನ್ಯ ಪ್ರಭುಗಳು, ಅರವಿಂದರು, ಸಂತ ತುಕಾರಾಮ, ಭಕ್ತ ಕನಕದಾಸ, ಪುರಂದರದಾಸರು, ಮಹಾತ್ಮ ಕಬೀರರು, ಸಂತ ಶಿಶುನಾಳ ಷರೀಫರು, ಮಾತಾ ಅಮೃತಾನಂದಮಯಿಯವರು ಹಾಗೂ ಇನ್ನೂ ಅನೇಕ ದಿವ್ಯ ಚೈತನ್ಯ ಶಕ್ತಿಗಳು.

ಈ ದಿವ್ಯ ಚೈತನ್ಯಗಳು, ತಾವು ಪೂಜಿಸುವ ಆರಾಧಿಸುವ ದೇವರೇ ಸತ್ಯ ಉಳಿದೆಲ್ಲವೂ ಮಿಥ್ಯ ಎಂದು ಎಲ್ಲೂ ಹೇಳಿಲ್ಲ. ಸಮಸ್ತ ಮಾನವರು, ಅವರವರ ಭಾವನೆ ಹಾಗೂ ಗುಣಕ್ಕೆ ಅನುಗುಣವಾಗಿ ಆರಾಧಿಸುವ ದೈವಗಳೆಲ್ಲಾ ಒಂದೇ ಸೃಷ್ಟಿಕರ್ತನ ನಾನಾ ರೂಪಗಳು ಎಂದು ಭಾವಿಸಿ ಎಲ್ಲರನ್ನೂ ಸಮಾನರಾಗಿ ಕಂಡರು.

ಸ್ವಾಮಿ ವಿವೇಕಾನಂದರು ತಾವು ಎಲ್ಲರಲ್ಲೂ ಇರುವ, ಎಲ್ಲರಿಗೂ ಅನ್ವಯಿಸುವ ಆತ್ಮವೊಂದನ್ನೇ ಬೋಧಿಸುವುದು. ಇದನ್ನು ಬಿಟ್ಟು ಬೇರೆ ಏನನ್ನೂ ಅಲ್ಲ ಎಂಬುದಾಗಿ ಹೇಳಿರುವರು. ಇವರ ಈ ನುಡಿಯು ಈಶಾವಾಸ್ಯೋಪನಿಷತ್ತಿನಲ್ಲಿನ ಒಂದು ಶ್ಲೋಕದಲ್ಲಿ ಹೇಳಿರುವ ಜಗತ್ತಿನಲ್ಲಿ ಸೃಷ್ಟಿಯಾಗಿರುವ ಎಲ್ಲಾ ಜೀವಿಗಳೂ ನಿಯಂತ್ರಿಸಲ್ಪಟ್ಟಿವೆ. ಆದುದರಿಂದ ಹೇ ಮಾನವ ಮತ್ತೊಬ್ಬರಿಗೆ ಕೊಟ್ಟು ಅನುಭವಿಸು, ಅಂದರೆ, ಸೇವಾ ಮನೋಭಾವದಿಂದ ಬದುಕು ಅನ್ಯರ ಸಂಪತ್ತಿಗೆ ಆಸೆ ಪಡಬೇಡ ಎಂಬ ವಿಶ್ವ ಮಾನವ ಸಂದೇಶವನ್ನು ಪ್ರತಿಧ್ವನಿಸುವುದು. ಈ ಸಂದೇಶವನ್ನು ನಮ್ಮ ಋಷಿಮುನಿಗಳು ಸಹಸ್ರಾರು ವರ್ಷಗಳ ಹಿಂದೆಯೇ ನೀಡಿರುವರು.

ಸ್ವಾಮಿ ವಿವೇಕಾನಂದರು, ತನ್ನ ಗುರುದೇವರ ಬಗ್ಗೆ ನೀಡಿದ ಉಪನ್ಯಾಸದಲ್ಲಿ ಹೀಗೆ ಸಾರುವರು. ಆಧುನಿಕ ಪ್ರಪಂಚಕ್ಕೆ ಶ್ರೀ ರಾಮಕೃಷ್ಣರ ಸಂದೇಶ ಇದು. ಸಿದ್ಧಾಂತಗಳನ್ನು ಲೆಕ್ಕಿಸಬೇಡಿ. ಮೂಢ ನಂಬಿಕೆಗಳನ್ನು ಲೆಕ್ಕಿಸಬೇಡಿ, ಕೋಮು, ಚರ್ಚು, ದೇವಸ್ಥಾನಗಳನ್ನು ಲೆಕ್ಕಿಸಬೇಡಿ. ಪ್ರತಿಯೊಬ್ಬ ಮಾನವ ಜೀವನದ ಸಾರವಾದ ಅಧ್ಯಾತ್ಮದೊಂದಿಗೆ ಹೋಲಿಸಿದರೆ ಅದಕ್ಕೆ ಬೆಲೆಯಿಲ್ಲ. ಯಾರನ್ನು ದೂರಬೇಡಿ, ಎಲ್ಲಾ ಮತದಲ್ಲಿಯೂ, ಕೋಮಿನಲ್ಲಿಯೂ ಸತ್ಯಾಂಶಗಳಿವೆ. ನಿಮ್ಮ ಜೀವನದಲ್ಲಿ ಧರ್ಮವೆಂದರೆ ಬರೀ ಮಾತಲ್ಲ, ಹೆಸರಲ್ಲ, ಪಂಗಡವಲ್ಲ, ಅದು ಅಧ್ಯಾತ್ಮಿಕ ಸಾಕ್ಷಾತ್ಕಾರ ಎಂಬುದನ್ನು ತೋರಿ. ಯಾರು ಇದನ್ನು ಅನುಭವಿಸಿರುವರೋ ಅವರು ಮಾತ್ರ ಇದನ್ನು ತಿಳಿದುಕೊಳ್ಳಬಲ್ಲರು. ಯಾರಲ್ಲಿ ಈ ಅಧ್ಯಾತ್ಮಿಕತೆ ಇದೆಯೋ ಅವರು ಮಾತ್ರ ಮತ್ತೊಬ್ಬರಿಗೆ ಇದನ್ನು ಕೊಡಬಲ್ಲರು. ಮಾನವ ಕೋಟಿಯ ಮಹಾ ಗುರುಗಳಾಗಬಲ್ಲರು. ಅವರೇ ಜ್ಞಾನ ಶಕ್ತಿಯ ಗಣಿ. ಇತರೆ ಗುರುಗಳು ತಮ್ಮ ಹೆಸರಿನಲ್ಲಿ ಬೇರೆ ಬೇರೆ ಧರ್ಮವನ್ನು ಬೋಧಿಸಿದರು, ಆದರೆ ಪರಮಹಂಸರು ಯಾವುದನ್ನು ತನ್ನದೆಂದು ಸಮರ್ಥಿಸಲಿಲ್ಲ. ಯಾವ ಧರ್ಮದ ಗೋಜಿಗೂ ಹೋಗಲಿಲ್ಲ. ಏಕೆಂದರೆ, ಧರ್ಮಗಳೆಲ್ಲ ಪಾರಮಾರ್ಥಿಕ ದೃಷ್ಟಿಯಿಂದ ಒಂದೆ ಸನಾತನ ತತ್ವದ ಹಲವು ದೃಶ್ಯಗಳು.

ತಮ್ಮ ಅನುಭವದ ದೃಷ್ಟಿಯಿಂದ ಪರಮಹಂಸರು, ಹೇಳಿದ ಹಾಗೆ ಪುರಾತನ ಋಷಿಗಳು ಹಾಗೂ ದೈವತ್ವಕ್ಕೆ ಏರಿದ ಎಲ್ಲಾ ದಿವ್ಯ ಚೈತನ್ಯಗಳು ತಮ್ಮ ಅಂತರಂಗದೊಳಗಿರುವ ಅವಿನಾಶಿಯಾದ ಅಧ್ಯಾತ್ಮಿಕ ಸಾಕ್ಷಾತ್ಕಾರವನ್ನು ಪಡೆದವರಾಗಿರುತ್ತಾರೆ. ಸ್ವಾಮಿ ವಿವೇಕಾನಂದರು ಹೇಳಿದ ಹಾಗೆ ಸೃಷ್ಟಿಕರ್ತನಾದ ಭಗವಂತನು ಸರ್ವವ್ಯಾಪಿ ಮತ್ತು ಸಮಾನತೆ. ಇದೇ ವೇದಾಂತದ ಸಾರ. ಸರ್ವ ವ್ಯಾಪಿ ಮತ್ತು ಸಮಾನತೆಯ ಭಗವಂತನನ್ನು ಜಗದ ಎಲ್ಲಾ ಧರ್ಮಗಳು ಬೇರೆ ಬೇರೆ ಹೆಸರಿನಿಂದ ಕರೆಯುವರು. ಸನಾತನ ಧರ್ಮದ ತತ್ವಗಳು ಜಗತ್ತಿನ ಎಲ್ಲಾ ಧರ್ಮಗಳ ತಳಹದಿಯಾಗಿದೆ.

ಜಗತ್ತಿನಲ್ಲಿ ಜನ್ಮ ತಾಳಿದ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸ್ವಭಾವ ಹಾಗೂ ಗುಣಗಳಿಗೆ ತಕ್ಕಂತೆ ವರ್ತಿಸುತ್ತಾನೆ. ಸತ್ವಗುಣ ಪ್ರಧಾನವಾಗಿರುವ ವ್ಯಕ್ತಿ ಎಲ್ಲಾ ಜೀವಿಗಳಲ್ಲಿರುವ ಚೇತನವನ್ನು ಒಂದೇ ಎಂದು ಕಾಣುತ್ತಾನೆ. ರಜೋಗುಣದವನು ವ್ಯಕ್ತಿ, ವ್ಯಕ್ತಿಗಳನ್ನು ಭಿನ್ನಭಿನ್ನವಾಗಿ ಕಾಣುತ್ತಾನೆ. ಎಲ್ಲರನ್ನೂ ಒಂದೇ ಸಮಾನವಾಗಿ ಕಂಡಾಗ ಮಾತ್ರ ಸಮಾಜದಲ್ಲಿ ಶಾಂತಿ, ಸಮನ್ವಯತೆ ಮೂಡಿ ಬರುವುದು. ಇಲ್ಲಿಯ ವರೆಗೆ ಶಾಂತಿ ಸಮನ್ವಯತೆ ಮೂಡಿಬರುವುದಿಲ್ಲ.

ಸನಾತನ ಧರ್ಮದ ತತ್ವಗಳು ಸರ್ವಕಾಲಿಕವೆ ಸರ್ವ ವ್ಯಾಪಕವಾದ ಶಾಶ್ವತವಾದ ತತ್ವಗಳು. ಎಲ್ಲಾ ಜೀವಿಗಳು ಸೃಷ್ಟಿಕರ್ತನಾದ ಭಗವಂತನಿಂದ ನಿಯಂತ್ರಿಸಲ್ಪಟ್ಟಿವೆ, ಎಂದು ಸಾರುವುದು. ಒಬ್ಬನೇ ಸೃಷ್ಟಿಕರ್ತ. ಈ ಸೃಷ್ಟಿಕರ್ತನು ಎಲ್ಲಾ ಜೀವಿಗಳಲ್ಲಿಯೂ ಇದ್ದು ಮಾನವ ರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ. ಜ್ಞಾನಿಗಳು, ದೈವೀಗುಣಗಳನ್ನು ಹೊಂದಿದ ಮಾನವ ರೂಪದಲ್ಲಿನ ಚೈತನ್ಯಗಳನ್ನು ದೇವರೆಂದು ಪೂಜಿಸುತ್ತಾರೆ. ಅಜ್ಞಾನಿಗಳು ಇವರನ್ನು ತಿರಸ್ಕರಿಸುತ್ತಾರೆ. ಹಿಂದೂ ಧರ್ಮಕ್ಕೆ ವೇದ, ಉಪನಿಷತ್ತು, ಭಗವದ್ಗೀತೆಗಳೇ ಆಧಾರ ಗ್ರಂಥಗಳು. ಈ ಗ್ರಂಥಗಳಲ್ಲಿ ಹೇಳಿರುವ ತತ್ವಗಳನ್ನೇ ಅಪ್ಪ ಬಸವಣ್ಣನವರು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತಂದವರಲ್ಲವೆ ?

ಲಿಂಗಾಯತರು ಆಚರಿಸುತ್ತಿರುವ ಸಂಪ್ರದಾಯ, ಆಚಾರ ನಿಯಮಗಳು, ಪೂಜಾ ಪದ್ಧತಿಗಳು ಸನಾತನ (ಹಿಂದೂ) ಧರ್ಮಕ್ಕೆ ಪೂರಕವಾಗಿವೆಯೆ? ಅಥವಾ ಮಾರಕವಾಗಿವೆಯೇ? ಮೇಲಿನ ಗ್ರಂಥಗಳ ತತ್ವಗಳಲ್ಲಿ ಎಲ್ಲಿಯಾದರೂ ವಿಗ್ರಹಾರಾಧನೆಯನ್ನು, ಹೋಮ, ಯಜ್ಞಗಳನ್ನು ಮಾಡಬೇಕು, ಕೇವಲ ಮಂದಿರಗಳಲ್ಲಿ ಮಾತ್ರ ಭಗವಂತನಿದ್ದಾನೆ ಎಂದು ಹೇಳಲಾಗಿದೆಯೇ?

ಸೃಷ್ಟಿಕರ್ತನಾದ ಭಗವಂತ ಎಲ್ಲಾ ಜೀವಿಗಳ ಅಂತರಾತ್ಮದಲ್ಲಿದ್ದಾನೆ. ಹೃದಯ ಮತ್ತು ಮನಸ್ಸು ಶುದ್ಧವಾದಾಗ ಮಾತ್ರ ಸೃಷ್ಟಿಕರ್ತನಾದ ಪರಮಾತ್ಮನ (ದಿವ್ಯ ಚೈತನ್ಯದ) ದರ್ಶನವಾಗುತ್ತದೆ. ಇದನ್ನೇ ಅಪ್ಪ ಬಸವಣ್ಣನವರು ಅಂತರಂಗ ಶುದ್ಧಿಯೇ ಶಿವ ಎಂದು ಹೇಳಿರುವರಲ್ಲವೆ? ಚಿತ್ತ ಶುದ್ಧಿಯಿಲ್ಲದ ವ್ಯಕ್ತಿಗಳು ಎಂತಹ ಪ್ರಕಾಂಡ ಪಂಡಿತನಾಗಿದ್ದರೂ, ಉತ್ತಮ ವಾಗ್ಮಿಯಾಗಿದ್ದರೂ ಸಹ, ಭಗವಂತನಿಂದ ದೂರವೇ.

ಭಗವಂತನ ಆರಾಧನೆಗೆ, ಅವನ ಸಾಕ್ಷಾತ್ಕಾರಕ್ಕೆ ಎಲ್ಲಾ ಜೀವಿಗಳಿಗೂ ಹಕ್ಕು ಇದೆ. ವರ್ಣ, ಜಾತಿ, ಮತ ಪಂಥವಲ್ಲ, ಭಗವಂತನ ಆರಾಧನೆಯನ್ನು ಮಾಡಲು ಸ್ತ್ರೀ -ಪುರುಷಾದಿಗಳೆಲ್ಲರಿಗೂ ಸ್ವಾತಂತ್ರ್ಯವಿದೆ. ಮೈತ್ರೇಯಿ, ಗಾರ್ಗೇಯಿ, ಮೀರಾಬಾಯಿ, ಅಹಲ್ಯ, ಶ್ರೀ ಮಾತೆ ಶಾರದಾದೇವಿ, ಮಾತಾ ಅಮೃತಾನಂದಮಯಿ ಇವರೆಲ್ಲರೂ ಭಗವಂತನ ದರ್ಶನ ಪಡೆದವರಲ್ಲವೆ? ಇದರಿಂದ ಹಿಂದೂ

ಧರ್ಮದಲ್ಲಿ ಭಗವಂತನ ಆರಾಧನೆಗೆ ಎಲ್ಲರಿಗೂ ಸಮಾನವಾದ ಅವಕಾಶವಿದೆಯೆಂದು ತಿಳಿಯುವುದಿಲ್ಲವೆ?

ಭಗವಂತನ ದರ್ಶನಕ್ಕೆ ಅಂದರೆ ಅಧ್ಯಾತ್ಮಿಕ ಸಾಕ್ಷಾತ್ಕಾರಕ್ಕೆ ಎಲ್ಲರಿಗೂ ಅವರು ಸಾಮಾಜಿಕ ದೃಷ್ಟಿಯಿಂದ ಯಾವುದೇ ವರ್ಗಕ್ಕೆ ಸೇರಿದವರಾಗಿದ್ದರೂ ಸಹ ಎಲ್ಲರಿಗೂ ಸಮಾನವಾದ ಅವಕಾಶವಿದೆಯೆಂದು ತಿಳಿಯುತ್ತದೆ. ಸನಾತನ ತತ್ವಗಳೇ ಎಲ್ಲಾ ಜೀವಿಗಳಿಗೂ ಮಾರ್ಗದರ್ಶಿ. ಬುದ್ದನು ವೇದಗಳ ಪ್ರಾಮಾಣ್ಯವನ್ನು(ಕರ್ಮಕಾಂಡ)ವನ್ನು ನಿರಾಕರಿಸಿದರೂ ಸಹ ವೇದಗಳ ಅಂತಃಸತ್ಯವನ್ನು ವಿರೋಧಿಸಲಿಲ್ಲ. ವೇದಗಳ ಅಂತಃಸತ್ಯವನ್ನು ತಾನು ಅನುಯಾಯಿಗಳಿಗೆ ಬೋಧಿಸಿ, ಸಂಸಾರ ದುಃಖದಿಂದ ಪಾರಾಗಲು ಪರಿಶುದ್ದ ಜೀವನವನ್ನು ನಡೆಸಲು ಜನರನ್ನು ಪ್ರಚೋದಿಸಿದನು. ತಾನೇ ಸ್ವತಃ ನಿರ್ವಾಣವನ್ನು ಹೊಂದಿ ಇತರರಿಗೆ ಮಾರ್ಗದರ್ಶನವಿತ್ತನು. ಈ ನಿರ್ವಾಣವೇ ವೇದಗಳು ಬೋಧಿಸುವ ಸಮಾಧಿ.

ಸನಾತನ ಧರ್ಮದ ತತ್ವಗಳಲ್ಲಿ ವಿದ್ಯಾರ್ಜನೆ ಹಾಗೂ ಜ್ಞಾನಾರ್ಜನೆಗೆ ಜಗತ್ತಿನಲ್ಲಿ ಜನ್ಮತಾಳಿದ ಪ್ರತಿಯೊಬ್ಬ ವ್ಯಕ್ತಿಗಳಿಗೂ ಸಮಾನ ಅವಕಾಶವಿದೆ. ಸ್ವಾಮಿ ವಿವೇಕಾನಂದರು ಹೇಳಿದಂತೆ, ಗೀತೆಯಲ್ಲಿ ಹೇಳಿರುವ ಗುಣಕರ್ಮಗಳಿಂದ ವಿಭಾಗಿಸಲ್ಪಟ್ಟ ವರ್ಣಗಳಾದ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ. ಈ ವರ್ಣಗಳ ಜನರನ್ನು ಜಗತ್ತಿನ ಎಲ್ಲಾ ಭಾಗದಲ್ಲಿಯೂ ಕಾಣಬಹುದು. ಈ ವರ್ಣಗಳು ಜಾತಿಯಿಂದ ನಿರ್ಮಿತವಾದುದಲ್ಲ.

ಬ್ರಹ್ಮ ಜ್ಞಾನವನ್ನು ಹೊಂದಿದವರು ಬ್ರಾಹ್ಮಣ ವರ್ಣಕ್ಕೆ ಸೇರಿದವರಾಗಿರುತ್ತಾರೆ. ಇವರುಗಳು ಎಲ್ಲರಲ್ಲೂ ಪರಬ್ರಹ್ಮನನ್ನೇ ಕಾಣುತ್ತಾರೆ. ಪ್ರತಿಯೊಬ್ಬವ್ಯಕ್ತಿಯೂ ಬ್ರಹ್ಮ ಜ್ಞಾನಿಯಾಗಬಹುದು. ಇವನೇ ನಿಜವಾದ ಬ್ರಾಹ್ಮಣ, ಜಾತಿಯಿಂದಲ್ಲ. ಶೌರ್ಯ, ಪರಾಕ್ರಮ, ದಾನ, ಪ್ರಭುತ್ವ ಗುಣಗಳಿರುವ ವ್ಯಕ್ತಿಗಳು ಕ್ಷಾತ್ರ ವರ್ಣಕ್ಕೆ ಸೇರಿದವರಾಗಿರುತ್ತಾರೆ. ಕ್ಷತ್ರಿಯನ ಮಗನೇ ಈ ಗುಣಗಳನ್ನು ಹೊಂದದೆ ಇದ್ದರೆ ಅವನು ಕ್ಷತ್ರಿಯನಾಗಲಾರ.

ವಾಣಿಜ್ಯೋದ್ಯಮಗಳಲ್ಲಿ ನಿರತರಾಗಿ ಸಂಪತ್ತನ್ನು ವೃದ್ಧಿ ಮಾಡಿಕೊಳ್ಳಬೇಕೆಂಬುವರು, ಯಾವುದೇ ವರ್ಗಕ್ಕೆ ಸೇರಿದವರಾಗಿದ್ದರೂ ಸಹ ವೈಶ್ಯ ವರ್ಣಕ್ಕೆ ಸೇರಿದವರಾಗಿರುತ್ತಾರೆ. ಇತರೆ ಕಾರ್ಯಗಳಲ್ಲಿ ನಿರತರಾದವರು ಶೂದ್ರ ವರ್ಣಕ್ಕೆ ಸೇರಿದವರಾಗಿರುತ್ತಾರೆ. ಭಗವಂತನ ದೃಷ್ಟಿಯಲ್ಲಿ ಎಲ್ಲರೂ ಪರಿಶುದ್ಧಾತ್ಮರೆ, ಯಾವ ಕ್ರಿಯೆಗಳೂ ಮೇಲಲ್ಲ ಯಾವುದೂ ಕೀಳಲ್ಲ, ಅವನ ಕಾರ್ಯದ ಹಿಂದೆ ಇರುವ ಮನೋಭಾವನೆಗಳೇ ಮುಖ್ಯ.

ಸಹಸ್ರಾರು ವರ್ಷಗಳ ಹಿಂದೆಯೇ ನಮ್ಮ ಸಂಸ್ಕೃತಿಯಲ್ಲಿ ಕಾಯಕಕ್ಕೆ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ. ನಿಯಮಿತವಾದ ಕರ್ಮವನ್ನು ಮಾಡಲೇಬೇಕು. ಕರ್ಮಮಾಡದೆ ಇದ್ದರೆ ಜಗತ್ತಿನಲ್ಲಿ ಬದುಕಿರುವುದು ಕಷ್ಟ. ಜಗತ್ತಿನಲ್ಲಿ ಎಲ್ಲಾ ಜೀವಿಗಳು ಯಾರಿಂದ ಸೃಷ್ಟಿಯಾಗಿದೆಯೊ, ಯಾವ ಶಕ್ತಿಯಿಂದ ಜಗತ್ತೆಲ್ಲವೂ ವ್ಯಾಪಿಸಲ್ಪಟ್ಟಿದೆಯೋ ಈ ಭಗವಂತನನ್ನು ತನ್ನ ಸ್ವಕರ್ಮದಿಂದಲೇ ಪೂಜಿಸಿ ಸಿದ್ಧಿಯನ್ನು ಪಡೆಯಬಹುದು. ಕರ್ಮವನ್ನು ನಿಃಸ್ವಾರ್ಥ ಭಾವದಿಂದ, ಯಜ್ಞದ ದೃಷ್ಟಿಯಿಂದ ಅಂದರೆ ಭಗವದರ್ಪಣಾ ಮನೋಭಾವದಿಂದ ಮಾಡಿದರೆ, ಚಿತ್ತಶುದ್ಧಿಯಾಗಿ ತನ್ನ ನೈಜ ಸ್ವರೂಪವನ್ನು ತಿಳಿದುಕೊಳ್ಳಲು ಸಹಾಯಕವಾಗುವುದು. ಯಾವಾಗ ತನ್ನ ನೈಜ ಸ್ವರೂಪವನ್ನು ಅರಿತುಕೊಳ್ಳುವಮೋ ಮನಸ್ಸು ಸಹಜವಾಗಿಯೇ ಪ್ರಶಾಂತವಾಗುವುದು. ಇದರಿಂದ ಪರಮಶಾಂತಿಯನ್ನು ಪಡೆಯುತ್ತಾನೆ.

ಕರ್ಮಯೋಗಿಯೇ ಸನ್ಯಾಸಿಗಳಿಗಿಂತಲೂ ಶ್ರೇಷ್ಠ ಎಂದು ಗೀತೆಯಲ್ಲಿ ಹೇಳಲಾಗಿದೆ. ಕರ್ಮಫಲಗಳನ್ನು ಆಶ್ರಯಿಸದೆ ಯಾರು ಕರ್ಮವನ್ನು ಮಾಡುತ್ತಾರೋ ಅವನೇ ಸನ್ಯಾಸಿ ಅವನೇ ಯೋಗಿ. ಬಾಹ್ಯ ಇಂದ್ರಿಯಗಳನ್ನು ನಿಗ್ರಹಿಸಿ, ಮನಸ್ಸಿನಲ್ಲಿ ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಂಡಿರುವವನು ಮಿಥ್ಯಾಚಾರಿ ಹಾಗೂ ಕಪಟ ಸನ್ಯಾಸಿ. ಮನಸ್ಸಿನಲ್ಲಿ ಎಲ್ಲಾ ಇಂದ್ರಿಯಗಳನ್ನು ನಿಗ್ರಹಿಸಿ, ಕರ್ಮೇಂದ್ರಿಯಗಳ ಮೂಲಕ ಕರ್ಮವನ್ನು ಫಲಗಳಲ್ಲಿ ಅನಾಸಕ್ತನಾಗಿ ಮಾಡುತ್ತಾನೋ ಅವನೇ ಶ್ರೇಷ್ಠನು ಇಂತಹ ವ್ಯಕ್ತಿಗಳು ಸಮಾಜದಲ್ಲಿ ಯಾವುದೇ ಕಾರ್ಯ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ರು ಸಹ ಲೋಕ ಕಲ್ಯಾಣದ ದೃಷ್ಟಿಯಿಂದ ಮಾಡುವರು. ಈ ತತ್ವಗಳು ಜಗತ್ತಿನಲ್ಲಿ ಜನ್ಮ ತಾಳಿದ ಎಲ್ಲಾ ವ್ಯಕ್ತಿಗಳಿಗೂ ಅನ್ವಯಿಸುತ್ತದೆಯಲ್ಲವೇ ?

ಅತ್ಯಂತ ಪರಮ ಪವಿತ್ರವಾದ ಗೋವಿನಿಂದ ಮಾನವನಿಗೆ ನೂರಾರು ಉಪಯೋಗಗಳಿರುವದರಿಂದ ಗೋವನ್ನು, ಗೋಮಾತೆಯೆಂದು ಪೂಜಿಸುತ್ತಾರೆ. ಪೂಜ್ಯ ಭಾವನೆಯಿದ್ದರೆ, ನಾವು ಯಾವ

ವಸ್ತುಗಳನ್ನು ಸಹ ನಾಶಪಡಿಸುವುದಿಲ್ಲ. ಗೋಹತ್ಯೆ ನಿರಂತರವಾಗಿ ನಡೆಯುತ್ತಿದ್ದು ಒಂದು ಕಾಲಕ್ಕೆ ಅಮೃತ ಪ್ರಧಾನವಾದ ಹಾಲೇ ದೊರಕದೆ ಹೋಗಬಹುದು. ಗಿಡ ಮರಗಳಲ್ಲಿ ಅನೇಕ ಸಸ್ಯಗಳಲ್ಲಿ ರೋಗ ನಿವಾರಕ ಔಷಧಿಗಳಿವೆ ಹಾಗೂ ಪ್ರಕೃತಿಯಲ್ಲಿ ವಾಯು ಮಂಡಲದಲ್ಲಿ ಸಮತೋಲನವನ್ನು ಕಾಪಾಡುವ ಗುಣಗಳಿವೆ. ಉದಾ: ತುಳಸಿ, ಅರಳಿ, ಬಿಲ್ವ, ಎಕ್ಕೆ, ಬೇವು, ಬನ್ನಿಗಿಡ, ಇತ್ಯಾದಿ. ತುಳಸಿ ಗಿಡದಲ್ಲಿ ಅತ್ಯಧಿಕ ವಿದ್ಯುತ್ ಶಕ್ತಿ ಇದೆ ಎಂದು ಹಾಗೂ ಅನೇಕ ಗಿಡಮರಗಳಲ್ಲಿ ರೋಗನಿವಾರಕ ಔಷಧಿಗಳಿವೆ ಎಂದು ವೈಜ್ಞಾನಿಕವಾಗಿ ಸಾಬೀತಾಗಿದೆ. ಇಂತಹ ಹಾಗೂ ಅನೇಕ ಗಿಡಮರಗಳಲ್ಲಿ ಸತ್ವಗಳನ್ನು ಆಯುರ್ವೇದದ ಔಷಧಿಗಳಲ್ಲಿ ಉಪಯೋಗಿಸುತ್ತಿಲ್ಲವೇ? ಬೇವಿನ ಗಿಡದ ಎಲೆಗಳಲ್ಲಿ ವಾಯು ಮಂಡಲವನ್ನು ಶುದ್ಧಿಗೊಳಿಸುವ ಶಕ್ತಿ ಇದೆ. ಅದರ ಎಲೆಗಳ ಸೇವನೆಯಿಂದ ಅನೇಕ ರೋಗಗಳು ನಿವಾರಣೆಯಾಗುತ್ತವೆ ಎಂದು ವೈಜ್ಞಾನಿಕವಾಗಿ ಹೇಳಲಾಗಿದೆ. ಎಕ್ಕದ ಹಾಲು ಅನೇಕ ರೋಗಗಳ ನಿವಾರಣ ಶಕ್ತಿಯನ್ನು ಹೊಂದಿದೆ. ಆದ್ದರಿಂದ ಈ ಗಿಡಮರಗಳನ್ನು ಪೂಜ್ಯ ದೃಷ್ಟಿಯಿಂದ ನೋಡಿದರೆ ನಾವು ಅವನ್ನು ನಾಶ ಪಡಿಸುವುದಿಲ್ಲ. ಯಾವುದೇ ವ್ಯಕ್ತಿ, ವಸ್ತುಗಳಲ್ಲಿ ಪೂಜ್ಯ ಭಾವನೆಯಿಲ್ಲದಿದ್ದರೆ ಅವುಗಳ ಬಗ್ಗೆ ತಿರಸ್ಕಾರ ಭಾವನೆ ಇರುತ್ತದೆ. ಅವುಗಳನ್ನು ನಾಶಪಡಿಸಲು ಸಹ ಹಿಂಜರಿಯುವುದಿಲ್ಲ. ಇಂತಹ ಗಿಡಮರಗಳನ್ನು ಪೂಜಿಸಲೇಬೇಕು ಎಂದು ಧರ್ಮದ ಗ್ರಂಥಗಳಲ್ಲಿ ಹೇಳಿಲ್ಲ.

ಗುರು ಪೂಜೆ, ದೇವತಾ ಪೂಜೆ, ಇವುಗಳನ್ನು ಮಾಡುವುದರಿಂದ ನಮಗೆ ಸೃಷ್ಟಿಕರ್ತನಾದ ಪರಮಾತ್ಮನನ್ನು ನಮ್ಮ ಅಜ್ಞಾನ ಅಂಧಕಾರವನ್ನು ನಿವಾರಣೆ ಮಾಡಿ, ಜ್ಞಾನ ಮಾರ್ಗವನ್ನು ಬೋಧಿಸಿದ ಗುರುಗಳನ್ನು ಪೂಜ್ಯ ಭಾವನೆಯಿಂದ ನೋಡುವುದರಿಂದ ನಾವುಗಳು ಅವರ ಋಣ ತೀರಿಸಿದಂತಾಗುವುದಿಲ್ಲವೇ ? ಸಮಾಜದಲ್ಲಿ ಸಾಮರಸ್ಯ ಭಾವನೆಗಳು ಮೂಡಲು ಸಹಾಯಕವಾಗುವು-ದಿಲ್ಲವೆ?

ಪಿತೃಪೂಜೆಗಳನ್ನು ಮಾಡುವುದರಿಂದ ನಮಗೆ ಜನ್ಮಕೊಟ್ಟ ಮಾತಾಪಿತರುಗಳನ್ನು ಹಾಗೂ ಪೂರ್ವಜರನ್ನು ಸ್ಮರಿಸಿಕೊಳ್ಳುವ ಅವಕಾಶವುಂಟಾಗುವುದಲ್ಲವೆ? ಪಿತೃಪಕ್ಷವನ್ನು ಮಾಡುವುದರಿಂದ ಒಂದು ಕುಟುಂಬದ ರಕ್ತ ಸಂಬಂಧಿಗಳೆಲ್ಲರೂ ಒಂದು ಕಡೆ ಸೇರಿ ತಮ್ಮ ವಂಶದ ಪೂರ್ವ ಜನರನ್ನು ಸ್ಮರಿಸಿಕೊಳ್ಳಲು ಒಂದು ಅವಕಾಶವಲ್ಲವೇ? ಇದರ ನೆಪದಲ್ಲಾದರೂ ಕುಟುಂಬದ ರಕ್ತ ಸಂಬಂಧಿಗಳು ಒಂದು ಕಡೆ ಸೇರಲು ಹಾಗೂ ಆ ಕುಟುಂಬದಲ್ಲಿ ಸೌಹಾರ್ದಯುತವಾದ ವಾತಾವರಣ ಉಂಟಾಗಲು ಸಹಾಯಕವಾಗುತ್ತಿದೆಯಲ್ಲವೇ? ಭಾವನೆಗಳಿಲ್ಲದ ಕಾರಣ ಕುಟುಂಬಗಳಲ್ಲಿ ಸಮಾಜದಲ್ಲಿ ಸೌಹಾರ್ದಯುತವಾದ ವಾತಾವರಣ ನಾಶವಾಗಿದೆ.

ಭಗವಂತ ಸರ್ವವ್ಯಾಪಿ ಎಂದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಎಲ್ಲಾ ನೀರು ಸೇವಿಸಲು ಯೋಗ್ಯವಲ್ಲ. ಹಾಗೆಯೇ ಸರ್ವ ವ್ಯಾಪಿಯಾದ ಭಗವಂತ ಎಲ್ಲೆಲ್ಲೂ ಇದ್ದರೂ ತೀರ್ಥಕ್ಷೇತ್ರಗಳಲ್ಲಿ ಸಾಧು, ಸಂತರು, ಭಕ್ತರ ನಿರಂತರವಾಗಿ ಭಗವಂತನ ಸ್ಮರಣೆಯನ್ನೇ ಮಾಡುತ್ತಿದ್ದು, ಆ ಕ್ಷೇತ್ರಗಳಲ್ಲಿ ಅಧ್ಯಾತ್ಮಿಕ ತರಂಗ ಹೆಚ್ಚಾಗಿರುತ್ತವೆ. ಆ ಕ್ಷೇತ್ರಗಳಿಗೆ ಭೇಟಿಯಿತ್ತಾಗ, ಮನುಷ್ಯ ಸಹಜವಾಗಿಯೇ, ಆತನೂ ಸಹ ಪರಮಭಕ್ತಿಯಿಂದ ಭಗವಂತನ್ನು ಸ್ಮರಿಸುತ್ತಾನೆ ಹಾಗೂ ಮನಸ್ಸಿಗೆ ಶಾಂತಿ ಸಮಾಧಾನವನ್ನು ತಂದುಕೊಳ್ಳುತ್ತಾನೆ. ಇದರಿಂದ ಅವನಿಗೇ ಹೆಚ್ಚು ಪ್ರಯೋಜನ.

ಕೆಲವು ನದಿಗಳಲ್ಲಿ ಸ್ನಾನ ಮಾಡಿದರೆ ಪಾಪ ಕ್ಷಯವಾಗಿ ಪುಣ್ಯ ಪ್ರಾಪ್ತಿಯಾಗುವುದು ಎಂಬುದು ಒಂದು ನಂಬಿಕೆ. ಹಿಂದೆ ಭಾರತದಲ್ಲಿ ಹರಿಯುವ ಗಂಗಾ, ಯಮುನ, ಕಾವೇರಿ, ತುಂಗಭದ್ರ ಇವುಗಳು ಪರಿಶುದ್ಧವಾಗಿದ್ದವು. ಈ ನೀರನ್ನು ಸೇವಿಸುವುದರಿಂದ ನಮ್ಮ ಆರೋಗ್ಯ ಉತ್ತಮವಾಗುತ್ತಿತ್ತು. ಎಲ್ಲೆಲ್ಲೂ ನೀರಿದ್ದರೂ ಎಲ್ಲಾ ನೀರು ಕುಡಿಯಲು ಹಾಗೂ ಸ್ನಾನ ಮಾಡಲು ಯೋಗ್ಯವಲ್ಲ. ಪರಿಶುದ್ಧವಾದ ಕಲ್ಮಷ ರಹಿತವಾದ ನೀರು ಸೇವನೆಗೆ, ಸ್ನಾನಕ್ಕೆ ಯೋಗ್ಯ ಅಲ್ಲವೆ? ನಮ್ಮ ಸಂಸ್ಕೃತಿಯಲ್ಲಿ ಗಂಗೆಯನ್ನು ನಿರ್ಮಲ ಮನಸ್ಸಿಗೆ, ವ್ಯಕ್ತಿಯು ಚಾರಿತ್ರ್ಯಕ್ಕೆ ಉದಾಹರಣೆಯಾಗಿ ಕೊಡುತ್ತೇವೆಯಲ್ಲವೆ? ಪರಿಶುದ್ಧ ಮನಸ್ಸುಳ್ಳ ವ್ಯಕ್ತಿ ಯಾವ ತೀರ್ಥಯಾತ್ರೆಯನ್ನು ಮಾಡಬೇಕಾಗಿರುವ ಅವಶ್ಯಕತೆ ಇರುವುದಿಲ್ಲ. ತೀರ್ಥಯಾತ್ರೆ ಮಾಡುವುದರಿಂದ ಆ ಕ್ಷೇತ್ರದ ಮಹತ್ವವನ್ನು ಅಲ್ಲಿನ ಪರಿಸರವನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ.

ಮಂದಿರ - ಮಂಟಪ :

ಸರ್ವ ವ್ಯಾಪಿಯಾದ ಭಗವಂತ ಕೇವಲ ಮಂದಿರ, ಮಂಟಪಗಳಲ್ಲಿ ಮಾತ್ರವೇ ಇಲ್ಲ, ಎಲ್ಲರ ಅಂತರಂಗದಲ್ಲೂ ಇದ್ದಾನೆ. ತನ್ನ ಅಂತರಂಗದಲ್ಲೇ ಇರುವ ಭಗವಂತನನ್ನು ನಿರಂತರವಾಗಿ ಸ್ಮರಿಸುತ್ತಾ, ಆತನ ದರ್ಶನ ಪಡೆಯಬಹುದು. ಗೀತೆಯಲ್ಲಿ ಹೇಳಿರುವಂತೆ, ಆಸಕ್ತಿ ಭಯ, ಕ್ರೋಧ ರಹಿತನಾಗಿ,

ಮನಸ್ಸಿನಲ್ಲಿ ಭಗವಂತನನ್ನೇ ಸ್ಮರಿಸುತ್ತಾ, ಆತನೇ ಪರಮಗತಿಯೆಂದು, ಆತನಲ್ಲಿ ಪೂರ್ಣ ಶರಣನಾಗಿ, ಜ್ಞಾನ ರೂಪ ತಪಸ್ಸಿನಿಂದ ಮನಸ್ಸಿನಲ್ಲಿ ಕಲ್ಮಷಗಳನ್ನು ತೊಳೆದುಕೊಂಡಿರುವನು, ಭಗವಂತನ ಭಾವವನ್ನೇ ಹೊಂದಿರುತ್ತಾನೆ. ಇಂತಹ ವ್ಯಕ್ತಿಗಳು ವಾಸಿಸುವ ಸ್ಥಳ ಪುಣ್ಯ ಕ್ಷೇತ್ರಗಳು, ಈ ಕ್ಷೇತ್ರಗಳನ್ನು ದರ್ಶನ ಮಾಡಲು, ಮಾನವ ಜನಾಂಗದ ಎಲ್ಲಾ ಭಕ್ತಾದಿಗಳಿಗೂ ಅವಕಾಶ ಉಂಟು.

ಹಿಂದೂ ಧರ್ಮದಲ್ಲಿ ಸಸ್ಯಾಹಾರ -ಮಾಂಸಾಹಾರ ಎರಡೂ ಇದೆ ಎಂದು ಹೇಳಿರುವಿರಿ. ಈ ಆಹಾರ ಪದ್ಧತಿಯನ್ನು ಮನುಷ್ಯ ತನ್ನ ನಾಲಿಗೆ ರುಚಿಗೆ ಅನುಗುಣವಾಗಿ ಮಾಡಿಕೊಂಡಿರುವನೇ ಹೊರತು ಯಾವುದೇ ತತ್ವಗಳಲ್ಲಿಲ್ಲ. ಸಸ್ಯಾಹಾರಿಗಳು ಎಂದೆನಿಸಿಕೊಳ್ಳುವವರು ಎಷ್ಟು ಜನ ಮಾಂಸಾಹಾರಿಗಳಾಗಿಲ್ಲ?

ನಾಸ್ತಿಕರು, ನಿರೀಶ್ವರವಾದಿಗಳು

ಜಗತ್ತಿನಲ್ಲಿ ಜನ್ಮತಾಳಿದ ವ್ಯಕ್ತಿಗಳಲ್ಲಿ ಪ್ರತಿಯೊಬ್ಬರೂ ಅವನ ಸ್ವಭಾವಕ್ಕೆ ಗುಣಗಳಿಗೆ ಅನ್ವಯವಾಗಿ ವರ್ತಿಸುತ್ತಾನೆ. ಈ ಪಂಚಭೂತದಿಂದಾದ ದೇಹದೊಳಗೆ ಯಾವುದೇ ದಿವ್ಯ ಚೈತನ್ಯ ಶಕ್ತಿ ಇದೆ ಎಂದು ತಿಳಿದ ವ್ಯಕ್ತಿ ಆಸ್ತಿಕನಾಗಿರುತ್ತಾನೆ. ಅದನ್ನು ಬಿಟ್ಟು ಈ ದೇಹವೇ ನಾನು, ಯಾವ ಒಂದು ದಿವ್ಯಶಕ್ತಿಯೂ ಇಲ್ಲ ಎಂಬುವನು ನಾಸ್ತಿಕವಾಗಿರುತ್ತಾನೆ. ಎಲ್ಲರಿಗೂ ಸಮಾನ ಅವಕಾಶವಿದೆ. ನಾಸ್ತಿಕನನ್ನು ಹಿಂದೂ ಧರ್ಮ ತಿರಸ್ಕರಿಸಿಲ್ಲ.

ಬಹುದೇವತೋಪಾಸನೆ:

ಮಹಾತ್ಮರು, ಸೃಷ್ಟಿಕರ್ತನಾದ ಪರಮಾತ್ಮನು ಜಗತ್ತಿನಲ್ಲಿ ನಾನಾ ರೂಪಗಳನ್ನು ತಾಳಿರುವುದರಿಂದ, ದೈವೀಗುಣಗಳಿರುವ ಈ ವ್ಯಕ್ತಿಗಳನ್ನು ಭಗವಂತನ ಸ್ವರೂಪ ಎಂದೇ ಭಾವಿಸುತ್ತಾರೆ. ನಾನಾ ದೇವತೆಗಳೆಲ್ಲರೂ ಒಂದೇ ಶಕ್ತಿಯ ನಾನಾ ರೂಪಗಳು ಎಂದು ಭಾವಿಸುತ್ತಾರೆ.

ಹೋಮ -ಹವನ, ಯಜ್ಞ -ಯಾಗ, ಪ್ರಾಣಿ ಬಲಿ :

ವಿಗ್ರಹಾರಾಧನೆಗೆ ಮುನ್ನ ಋಷಿಮುನಿಗಳು, ಪ್ರಕೃತಿಯನ್ನೇ ದೇವರೆಂದು ಭಾವಿಸಿ, ಯಜ್ಞಗಳ ಮೂಲಕ ಆರಾಧಿಸುತ್ತಿದ್ದು. ಪ್ರಕೃತಿಯನ್ನು ಸಮತೋಲನದಲ್ಲಿಡಲು ಹಾಗೂ ಪರಿಸರ ಶುದ್ಧವಾಗಿರಲು ನಡೆಸುತ್ತಿದ್ದ ಕ್ರಿಯೆಗಳು. ಅವುಗಳನ್ನು ಮಾಡಲೇ ಬೇಕೆಂಬುದಾಗಿ ಯಾವುದೇ ಕಡ್ಡಾಯವಿಲ್ಲ, ಪ್ರಾಣಬಲಿಯನ್ನು ಕೊಡಬೇಕೆಂಬುದಾಗಿಯೂ ಸಹ ತತ್ವಗಳಲ್ಲಿ ಹೇಳಿಲ್ಲ.

ವ್ರತ, ನೇಮ, ಉಪವಾಸಗಳಿವೆ

ದೈಹಿಕ ಮಾನಸಿಕ ಆರೋಗ್ಯದ ದೃಷ್ಟಿಯಿಂದ ಆಚರಿಸುವ ಕ್ರಿಯೆಗಳಾಗಿರುತ್ತವೆಯೇ ಹೊರತು ಇವುಗಳನ್ನು ಕಡ್ಡಾಯವಾಗಿ ಆಚರಿಸಲೇಬೇಕೆಂಬ ನಿಯಮಗಳಿಲ್ಲ.

ಉದ್ಯೋಗದಲ್ಲಿ ಮೇಲು ಕೀಳು

ಮನುಷ್ಯನ ಸ್ವಭಾವ ಗುಣಗಳಿಗೆ ಅನುಗುಣವಾಗಿ ಉದ್ಯೋಗವನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವಿದೆ. ಮೇಲು ಕೀಳೆಂಬ ಭಾವನೆಗಳಿಲ್ಲ. ಇವೆಲ್ಲಾ ತಪ್ಪು ಕಲ್ಪನೆ. ಯಜ್ಞಗಳಲ್ಲಿ ವಿಶೇಷವಾಗಿ ತುಪ್ಪವನ್ನು ಅಗ್ನಿಗೆ ಅರ್ಪಿಸುವುದರಿಂದ ಅದು ಸುಟ್ಟು ಅದರಲ್ಲಿರುವ ಕ್ರಿಮಿನಾಶಕ ರಾಸಾಯನಿಕ ವಸ್ತುಗಳು ವಾಯು ಮಂಡಲದಲ್ಲಿರುವ ಕಲ್ಮಷಗಳನ್ನು ನಾಶಪಡಿಸಿ ಪರಿಸರವನ್ನು ಶುಚಿಯಾಗಿಡಲು ಸಹಕಾರಿಯಾಗಿರುತ್ತದೆ. ಅಗ್ನಿಗೆ ಮಾತ್ರ ತುಪ್ಪವನ್ನು ಸುಟ್ಟು ಭಸ್ಮ ಮಾಡುವ ಶಕ್ತಿ ಇರುವುದರಿಂದ ಯಜ್ಞಗಳಲ್ಲಿ ಅನೇಕ ಸವಿತ್ತುಗಳ ಅರ್ಪಣೆ ಜತೆಗೆ ತುಪ್ಪವನ್ನು ಸಹ ಅರ್ಪಿಸುತ್ತಾರೆ.

ಹೋಮ, ಹವನಗಳಿಂದ ಹೊರಟ ಹೊಗೆಯು ಪ್ರಕೃತಿಯನ್ನು ಶುಚಿ ಮಾಡುವುದು ಹಾಗೂ ಹೋಮ ನಡೆಯುವ ಸ್ಥಳದ ಸಮೀಪದಲ್ಲಿ ಇರುವ ಗಿಡಗಳು ಹೋಮದಿಂದ 120ಮೀ. ದೂರದಲ್ಲಿರುವ ಗಿಡಗಳಿಗಿಂತ ಶೇ.200 ಭಾಗ ಹೆಚ್ಚಿಗೆ ಬೆಳೆಯುವುದೆಂದು ವೈಜ್ಞಾನಿಕ ಸಾಬೀತುಪಡಿಸಲಾಗಿದೆಯೆಂದು ದಿನಾಂಕ: 05/01/08ರ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಹಿಂದೂ ಧರ್ಮದ ಗ್ರಂಥಗಳಲ್ಲಿ ಪ್ರಾಣಿ ಬಲಿಯನ್ನು ಕೊಡಬೇಕು, ಮಾಂಸಾಹಾರಿಯಾಗಬೇಕು. ಇಂತಹವರೇ ನನ್ನನ್ನು ಪೂಜಿಸಬೇಕು, ಯಾಗ ಯಜ್ಞಗಳನ್ನು ಮಾಡಬೇಕು, ಮಂದಿರ, ಮಂಟಪಗಳಲ್ಲಿ ಮಾತ್ರ ಭಗವಂತನಿದ್ದಾನೆ. ಸ್ತ್ರೀಯರಿಗೆ ಪೂಜೆಯ ಹಕ್ಕಿಲ್ಲ, ಉದ್ಯೋಗಗಳಲ್ಲಿ ಮೇಲು, ಕೀಳೆಂಬ ಭಾವನೆಗಳನ್ನು, ವಿವಾಹಗಳನ್ನು ಪೌರೋಹಿತ್ಯರ ನೇತೃತ್ವದಲ್ಲಿಯೇ ನಡೆಸಬೇಕು ಎಂಬಿತ್ಯಾದಿ ನಿಯಮಗಳನ್ನೇನಾದರು ರೂಪಿಸಲಾಗಿದೆಯೇ?

ಯಾವುದೇ ಧರ್ಮದಲ್ಲಿ ಮತ್ತೊಬ್ಬರನ್ನು ದ್ವೇಷಿಸಿ ಹಾಗೂ ಅವರ ಸಂಪ್ರದಾಯಗಳನ್ನು ಟೀಕಿಸಬೇಕೆಂಬುದಾಗಿ ಹಾಗೂ ನಮ್ಮ ಧರ್ಮವೊಂದೇ ಶ್ರೇಷ್ಠ ಎಂದು ಹೇಳಲಾಗಿದೆಯೆ? ಇವೆಲ್ಲವನ್ನೂ ಅವರ ಅನುಯಾಯಿಗಳು ರೂಢಿಸಿಕೊಂಡ ನಿಯಮಗಳಲ್ಲವೇ ? ಜ್ಞಾನದ ನೈಜ ಅರ್ಥವನ್ನು ತಿಳಿದುಕೊಳ್ಳದ ಅಜ್ಞಾನಿಗಳು (ಅವರುಗಳು ಎಂತಹ ಪ್ರಕಾಂಡ ಪಂಡಿತರಾಗಿರಬಹುದು, ವಿದ್ವತ್ ಇರಬಹುದು, ಉತ್ತಮ ವಾಗ್ಮಿಗಳಾಗಿರಬಹುದು) ಮಾತ್ರ ನಮ್ಮ ಧರ್ಮವೇ ಶ್ರೇಷ್ಠ, ನಮ್ಮ ದೇವತೆ ಸತ್ಯ ಎಂದು ಮತ್ತೊಬ್ಬರಲ್ಲಿ ಭಿನ್ನಾಭಿಪ್ರಾಯಗಳನ್ನು ತಾಳುವರು.

ಸ್ವಾಮಿ ವಿವೇಕಾನಂದರು ಹೇಳಿದಂತೆ ಧರ್ಮಗಳೆಲ್ಲ, ಮನುಷ್ಯನನ್ನು ಪವಿತ್ರನಾಗುವುದಕ್ಕೆ ಮಾಡುವ ಸನ್ನಾಹಗಳು, ಆದ ಕಾರಣ ಎಲ್ಲಾ ಧರ್ಮಗಳನ್ನು ಗೌರವಿಸಬೇಕು. ಇದನ್ನು ಒಂದು ವೇದೋಕ್ತಿಯಿಂದ ಉದಾಹರಿಸಿರುವರು, ಅದೇನೆಂದರೆ, "ಧರ್ಮಗಳೆಲ್ಲಾ ಒಂದು ಚಿಲುಮೆಯಿಂದ ನೀರನ್ನು ತರುವುದಕ್ಕೆ ಉಪಯೋಗಿಸುವ ಹಲವು ಆಕಾರಗಳುಳ್ಳ ಪಾತ್ರೆಗಳು. ಪಾತ್ರೆಗಳ ಆಕಾರ ವಿಧ ವಿಧವಾಗಿ ಇರಬಹುದು. ಆದರೆ ಅದರೊಳಗೆ ಎಲ್ಲರೂ ತುಂಬಿಸುವುದಕ್ಕೆ ಬಂದಿರುವುದು ಒಂದೇ ಸತ್ಯವೆಂಬ ನೀರನ್ನೇ, ಸೃಷ್ಟಿಕರ್ತನಿಗೆ ಎಲ್ಲಾ ಧರ್ಮಗಳು ಗೊತ್ತಿವೆ. ಯಾವ ರೀತಿ ಪ್ರಾರ್ಥಿಸಿದರೂ, ಯಾವುದೇ ಮಾರ್ಗದಲ್ಲಿ ಹೋದರೂ, ತನಗಾಗಿ ಮಾಡಿದ ಪ್ರಾರ್ಥನೆ ಹಾಗೂ ಅಂತಿಮವಾಗಿ ತನ್ನನ್ನೇ ಸೇರಲು ಅನುಸರಿಸಿದ ಮಾರ್ಗಗಳು ಎಂಬುದು ಅವನಿಗೆ ಗೊತ್ತಿದೆ. ವೇದದಲ್ಲಿ ಹೇಳಿರುವಂತೆ ಒಂದೇ ಸತ್ಯವನ್ನು ತಿಳಿದವರು ಬೇರೆ ಬೇರೆ ಹೆಸರಿನಿಂದ ಕರೆಯುವರು.

ಸೃಷ್ಟಿಕರ್ತನಾದ ಭಗವಂತನು ಒಬ್ಬನೇ ಎಂಬ ಭಾವನೆ ನಮ್ಮ ಸನಾತನ ಸಂಸ್ಕೃತಿಯಲ್ಲಿ (ಭಗವಂತನ) ಸ್ಪಷ್ಟವಾಗಿರುವಷ್ಟು ಅನ್ಯದೇಶಗಳಲ್ಲಿಲ್ಲ. ಇತರರ ಕಡೆ ಇರುವ ದೇವರ ಭಾವನೆ, ಅವನು ಯಾವುದೋ ಒಂದು ವರ್ಗಕ್ಕೆ, ದೇಶಕ್ಕೆ ಮತಕ್ಕೆ ಸೇರಿದವನಾಗಿರುವನು. ನಮ್ಮ ಸಂಸ್ಕೃತಿಯಲ್ಲಿ ಈಶ್ವರ ಭಾವನೆ ಭೂಮವಾದುದು. ಯಾರು ಶೈವನ ಶಿವನೋ ವೈಷ್ಣವರ ವಿಷ್ಣುವೋ, ಮೀಮಾಂಸಕರ ಕರ್ಮವೋ, ಬೌದ್ಧರ ಬುದ್ಧನೋ, ಜೈನರ ಜಿನನೋ, ಕ್ರೈಸ್ತರ ಕ್ರಿಸ್ತನೋ,ಮಹಮದ್ದೀಯರ ಅಲ್ಲಹನೋ, ಯಾರು ಪ್ರತಿಯೊಂದು ಧರ್ಮದ ದೇವರಾಗಿರುವರೋ, ವೇದಾಂತಿಗಳ ಬ್ರಹ್ಮನಾಗಿರುವನೋ ಅವನು ಸರ್ವವ್ಯಾಪಿಯಾಗಿರುವನು. ಅವನ ಮಹಾತ್ಮೆಯನ್ನು ಈ ದೇಶ ಮಾತ್ರ ತಿಳಿದಿರುವುದು.

ಹಿಂದೂ ಧರ್ಮದ ಶ್ರೇಷ್ಠವಾದ ತತ್ವಗಳೇ ಔದಾರ್ಯ ಮತ್ತು ಪ್ರೀತಿಯ ಮನೋಭಾವ. ಎಲ್ಲರಲ್ಲೂ ಪರಮಾತ್ಮನಿದ್ದಾನೆ. ಯಾರನ್ನೂ ದ್ವೇಷಿಸಬೇಡ. ಎಲ್ಲರನ್ನೂ ಪ್ರೀತಿಸು ಎಂದು ಹೇಳುವುದು. ಗೀತೆಯಲ್ಲಿ ಹೇಳಿರುವಂತೆ, ಭಗವಂತನು ಒಲಿಯುವುದು ಪಾಂಡಿತ್ಯಕ್ಕಲ್ಲ, ವಿದ್ವತ್ತಿಗಲ್ಲ, ಅಧಿಕಾರಕ್ಕಲ್ಲ, ಪ್ರೀತಿಗೆ ಮಾತ್ರ. ಯಾರು ಯಾವುದೇ ವರ್ಗ ಪಂಗಡಕ್ಕೆ ಸೇರಿದವರಾಗಿದ್ದರೂ ಸಹ, ಸೃಷ್ಟಿಕರ್ತನಾದ ಭಗವಂತನಲ್ಲಿ ಮನಸ್ಸಿಟ್ಟು, ಆತನ ಭಕ್ತನಾಗಿ ಆತನನ್ನೇ ಪೂಜಿಸುತ್ತಾ, ಆತನೇ ಪರಮಗತಿಯೆಂದು ತಿಳಿದು, ಆತನಲ್ಲೇ ಪೂರ್ಣ ಶರಣಾಗತರಾಗುವರೋ ಅವರು ಭಗವಂತನ ದರ್ಶನ ಪಡೆಯುತ್ತಾರೆ. ಈ ನಿಯಮಗಳನ್ನು ನಮ್ಮ ಜೀವಿತ ಕಾಲದಲ್ಲಿಯೇ ಸತ್ಯದ ಸಾಕ್ಷಾತ್ಕಾರ ಮಾಡಿಕೊಂಡಿರುವ ಮಾತೃ ಶಕ್ತಿಯಾದ ಶ್ರೀ ಮಾತಾ ಅಮೃತಾನಂದಮಯಿಯವರು, ಜಾತಿಯ ಭಾವನೆಯಿಂದ ನೋಡುವ ವ್ಯಕ್ತಿಗಳ ದೃಷ್ಟಿಯಲ್ಲಿ, ಸಮಾಜದ ಕೆಳಸ್ತರದ ವರ್ಗವಾದ ಬೆಸ್ತರ ಕುಟುಂಬಕ್ಕೆ ಸೇರಿದವರಾಗಿದ್ದು, ಗುಣಗಳಿಂದ ದೈವತ್ವಕ್ಕೆ ಏರಿದ ಮಾತೃಶಕ್ತಿ.

ಇಡೀ ಜಗತ್ತಿನಾದ್ಯಂತ, ಎಲ್ಲಾ ವರ್ಗಗಳ ಜನರಿಂದಲೂ ಪೂಜಿಸಲ್ಪಡುತ್ತಿರುವ ಶ್ರೀ ಮಾತಾ ಅಮೃತಾನಂದ ಮಯಿಯವರು ಹಿಂದೂ ಧರ್ಮದ ತತ್ವಗಳನ್ನು ಅನುಷ್ಠಾನಕ್ಕೆ ತರುತ್ತಿರುವುದನ್ನು ಗಮನಿಸಿದಾಗ ವಿಶ್ವವ್ಯಾಪಿಯಾದ ಹಿಂದೂ ಧರ್ಮದ ಶ್ರೇಷ್ಠತೆಯನ್ನು ಅರ್ಥೈಸಿಕೊಳ್ಳಬಹುದು. ಹಿಂದೂ ಧರ್ಮದ ತತ್ವಗಳ ಶ್ರೇಷ್ಠತೆಯನ್ನು ಅರ್ಥೈಸಿಕೊಳ್ಳದೆ, ಕೇವಲ ಸಾಮಾಜಿಕ ದೃಷ್ಟಿಯಿಂದ ತಮ್ಮ ಅನುಕೂಲಕ್ಕನುಗುಣವಾಗಿ ಮಾಡಿದ ಕೆಲವು ಸಂಪ್ರದಾಯಗಳನ್ನೇ ಧರ್ಮ ಎಂದು ತಿಳಿದು ಧರ್ಮವನ್ನು ಟೀಕಿಸಿ, ತಮ್ಮ ಸಂಪ್ರದಾಯಗಳೇ ಶ್ರೇಷ್ಠ ಎಂದು ಭಾವಿಸಿರುವ ವ್ಯಕ್ತಿಗಳು, ಈ ಕೆಳಗಿನ ವಾಕ್ಯಗಳನ್ನು ತಿಳಿದುಕೊಳ್ಳಬೇಕಾಗಿದೆ.

ಭಾರತೀಯ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಹಿಂದೂ ಧರ್ಮದ ವೈಶಾಲ್ಯತೆಯನ್ನು ಸರಿಯಾಗಿ ಅರ್ಥೈಸಿಕೊಳ್ಳಬೇಕಾದರೆ ರಾಷ್ಟ್ರಕವಿ ಕುವೆಂಪು ಅವರು ಹೇಳಿರುವಂತೆ ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯನ್ನು ಅಧ್ಯಯನ ಮಾಡಬೇಕು.

ಕುವೆಂಪು ಅವರು ಹೇಳಿರುವಂತೆ ಆ ದ್ರಷ್ಟಾರ ವಿಭೂತಿಯ ಮಹೋನ್ನತ ಚಿತ್ತಪಸ್ಸಿನ ಶಕ್ತಿಗಂಗೆ ಎಲ್ಲ ಭಾಷೆಗಳ ಆಲವಾಲಗಳಲ್ಲಿಯೂ ಪ್ರವಹಿಸಿ, ಸಪ್ತ ನರಕೋಟಿಯ ಹೃದಯ ಹೃದಯವನ್ನೂ ಪ್ರವೇಶಿಸಿದರೆ ಜೀವ ಜೀವದ, ಚೇತನ ಚೇತನದಲ್ಲಿರುವ, ಅಜ್ಞಾನ ಅಂಧಕಾರ ನಿರಾಶೆಗಳೆಲ್ಲ ತೊಲಗಿ, ವಿಶ್ವ ಮಾನವನವ ಪ್ರತಿಷ್ಠಾಪನೆಯಾಗುತ್ತದೆ. ಏಕೆಂದರೆ ಹಿಂದೂ ಧರ್ಮದ ವೈಶಾಲ್ಯದ ಮತ್ತು ವೇದಾಂತ

ತತ್ವದ ಗಂಭೀರತೆಯ ಪರಿಚಯ ಸರ್ವಮಾನ್ಯವೂ ಸರ್ವ ಸುಲಭಗ್ರಾಹ್ಯವೂ ಆಗಬೇಕಾದರೆ, ಸ್ವಾಮೀಜಿಯ ಉಪನ್ಯಾಸಗಳನ್ನು ಬಿಟ್ಟರೆ ಬೇರಾವುದೂ ಇಲ್ಲ. ಸಂಕುಚಿತ ಮತ ಭಾವನೆಗಳನ್ನು ಕತ್ತರಿಸಿ ಕೆಡಹಿ ಮನಸ್ಸಿನಲ್ಲಿ ಉದಾತ್ತವಾದ ಸಮನ್ವಯ ದೃಷ್ಟಿಯನ್ನು ಪ್ರಜ್ವಲಿಸುವ ಶಕ್ತಿ ಈ ಉಪನ್ಯಾಸಗಳಲ್ಲಿರುವಂತೆ ಬೇರೆಲ್ಲಿಯೂ ಇಲ್ಲ. ಸ್ವಾಮಿ ಪುರುಷೋತ್ತಮಾನಂದರು ಹೇಳಿದಂತೆ, ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯನ್ನು ಅಧ್ಯಯನ ಮಾಡಿದರೆ, ಸಮಗ್ರ ಭಾರತವನ್ನು ಒಳಹೊಕ್ಕು ವೀಕ್ಷಿಸಿದಂತೆ, ಹಿಂದೂ ಧರ್ಮವನ್ನು ಅರಿತು ಮೈಗೂಡಿಸಿದಂತೆ, ವಿಶ್ವಭ್ರಾತೃತ್ವದ ವಿಶಾಲ ಭಾವನೆಯನ್ನು ಅಭ್ಯಸಿಸಿದಂತೆ. ಪರಿಪೂರ್ಣ ಮಾನವತೆಯ ಮರ್ಮವನ್ನು ಮಥಿಸಿ ಮನನ ಮಾಡಿದಂತೆ.

ಡಾ|| ಅನಿಬೆಸೆಂಟ್ ಅವರು ಹಿಂದೂ ಧರ್ಮದ ಶ್ರೇಷ್ಠತೆಯನ್ನು ಕುರಿತು ಈ ರೀತಿ ಹೇಳಿರುವರು, "ತನ್ನ ನಲವತ್ತಕ್ಕೂ ಹೆಚ್ಚಿನ ವರ್ಷಗಳಲ್ಲಿ ಜಗತ್ತಿನಲ್ಲಿರುವ ಶ್ರೇಷ್ಠವಾದ ಧರ್ಮಗಳನ್ನೆಲ್ಲಾ ಅಧ್ಯಯನ ಮಾಡಿದ ನಂತರ ಹಿಂದೂ ಧರ್ಮ ಎಂದು ಕರೆಯುವ ಅತ್ಯಂತ ಶ್ರೇಷ್ಠವಾದ ಧರ್ಮ ಎಂದು ಕರೆಯುವ ಅತ್ಯಂತ ಶ್ರೇಷ್ಠವಾದ ಧರ್ಮದಲ್ಲಿರುವಂತೆ, ಪರಿಪೂರ್ಣತೆ, ಪರಾಕಾಷ್ಠತೆ, ವೈಜ್ಞಾನಿಕತೆ, ತಾತ್ವಿಕತೆ ಹಾಗೂ ಅಧ್ಯಾತ್ಮಿಕತೆಯನ್ನು ತಾನು ಬೇರೆ ಯಾವ ಧರ್ಮದಲ್ಲಿಯೂ ಕಾಣಲಿಲ್ಲವೆಂದು, ನೀವು ಅದನ್ನು ಚೆನ್ನಾಗಿ ತಿಳಿದಷ್ಟು ಅದನ್ನು ಚೆನ್ನಾಗಿ ಪ್ರೀತಿಸುವಿರಿ; ಅದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದಷ್ಟು ನೀವು ಅದನ್ನು ಅಧಿಕವಾಗಿ ಗೌರವಿಸುವಿರಿ." ಎಂದು.

ರಾಮಕೃಷ್ಣ ಮಠ ಮತ್ತು ಮಿಷನ್ ಸಂಸ್ಥೆಯೂ ಸಹ ಸಂತ್ರಸ್ತರಿಗೆ ಜಾತಿ ಮತಗಳ ಭೇದ ಭಾವನೆಯಿಲ್ಲದೆ, ಎಲ್ಲರಿಗೂ ಪರಿಹಾರ ನೀಡುವಲ್ಲಿ ಕಾರ್ಯದಲ್ಲಿ ತೊಡಗಿದೆ. ಎಲ್ಲರಿಗೂ ಜಾತಿ ಮತ, ವರ್ಗಗಳ ಭೇದ ಭಾವನೆಯಿಲ್ಲದೆ ದೀಕ್ಷೆಯನ್ನು ನೀಡಲಾಗುತ್ತಿದೆ. ಎಲ್ಲರನ್ನು ಸಮಾನವಾಗಿ ಕಾಣುತ್ತಿದ್ದು ಹಿಂದೂ ಧರ್ಮದ ಶ್ರೇಷ್ಠತೆಯನ್ನು ತನ್ನ ಕಾರ್ಯಗಳಲ್ಲಿ ಜಗತ್ತಿಗೆ ತೋರಿಸುತ್ತಿದೆ.

ಸಕಲಟ್ಟಿಯಲ್ಲಿ ಬಸವ ಮಂಟಪ ಉದ್ಘಾಟನೆ

ತಮಿಳುನಾಡಿನ, ನೀಲಗಿರಿ ಜಿಲ್ಲೆಯ ಊಟಿ-ಕೂನ್ನೂರು ಸಮೀಪದಲ್ಲಿರುವ ಸಕಲಟ್ಟಿಯಲ್ಲಿ ನೂತನವಾಗಿ ಬಸವ ಮಂಟಪವನ್ನು ನಿರ್ಮಿಸಿದ್ದು ಅದರ ಉದ್ಘಾಟನೆಯನ್ನು ಮತ್ತು ವಿಶ್ವಗುರು ಬಸವಣ್ಣನವರ ಅಮೃತ ಶಿಲಾ ಪುತ್ಥಳಿಯ ಪ್ರತಿಷ್ಠಾಪನೆಯನ್ನು ಭಾನು(ದೇವ)ವಾರ ದಿ.20-4-2008 ರಂದು ಬೆಳಿಗ್ಗೆ 10-30ಕ್ಕೆ ಏರ್ಪಡಿಸಲಾಗಿದೆ. ನೀಲಗಿರಿ ಮತ್ತು ಸುತ್ತಲಿನ ಹಟ್ಟಿ, ಜಿಲ್ಲೆಗಳಲ್ಲಿರುವ ಲಿಂಗಾಯತ ಸಮಾಜ ಬಾಂಧವರ ಸಮಾವೇಶವು ಜರುಗಲಿದೆ. ಭಾಗವಹಿಸಲು ಆಸಕ್ತಿ ಇರುವವರು ಊಟಿಯಲ್ಲಿ ವಸತಿ ಗೃಹಗಳಲ್ಲಿ ಉಳಿಯಬಹುದು. ಅಗತ್ಯವಿರುವ ವಿವರಗಳನ್ನು ಕೆಳಗೆ ಕಾಣಿಸುವ ಶರಣ ಬಂಧುಗಳಿಂದ ಪಡೆಯಬಹುದು.

ಕೇವಲ ಒಂದೇ ದಿವಸದ ಕಾರ್ಯಕ್ರಮವಾದುದರಿಂದ ಸ್ಥಳೀಯರು ಬೆಳಿಗ್ಗೆ ಬಂದು ಸಂಜೆಗೆಲ್ಲ ವಾಪಸ್ಸು ಹೋಗುವರು. ಪರ ಊರಿನಿಂದ ಬರುವವರು ಸಹ ಊಟಿಗೆ ಸಾರಿಗೆ ಸಂಸ್ಥೆ ವಾಹನಗಳಲ್ಲಿ ಬಂದು ಸಂಜೆಗೆ ಹಿಂತಿರುಗಬಹುದು. ಬೇರೆ, ಸ್ವಂತ ವಾಹನಗಳಲ್ಲಿ ಬರುವವರು ಸಕಲಟ್ಟಿಗೆ ಬಂದು ಬೆಳಗಿನ ಉಪಾಹಾರ, ಮಧ್ಯಾಹ್ನದ ಪ್ರಸಾದ ಸ್ವೀಕರಿಸಿ, ಕಾರ್ಯಕ್ರಮದಲ್ಲಿ ಭಾಗಿಯಾಗಿ ಸಂಜೆಗೆ ವಾಪಸ್ಸಾಗಬಹುದು. ಊಟಿ ಕುನ್ನೂರು ಮುಂತಾದ ಸ್ಥಳಗಳ ಸಂದರ್ಶನ ಮಾಡಬೇಕು ಎನ್ನುವವರು ಊಟಿಯಲ್ಲಿ ವಸತಿ ಗೃಹಗಳಲ್ಲಿ ಉಳಿದುಕೊಂಡು ತಮ್ಮ ಇಷ್ಟಾನುಸಾರ ಸ್ಥಳ ಸಂದರ್ಶನ ಮಾಡಬಹುದು. ಬೆಂಗಳೂರು ಬಸವ ಮಂಟಪದಿಂದ ಹೊರಡಬೇಕು ಎನ್ನುವವರು ಬಸವ ಮಂಟಪಕ್ಕೆ ಫೋನ್ ಮಾಡಬೇಕು. ಪ್ರತಿನಿಧಿ ಶುಲ್ಕ ರೂ.200-00(ಒಂದು ದಿನಕ್ಕೆ ಮಾತ್ರ) ಕಾರ್ಯಕ್ರಮದ ವ್ಯವಸ್ಥೆ ಭರದಿಂದ ನಡೆದಿದ್ದು ಏಪ್ರಿಲ್‌ನಿಂದ 4 ತಿಂಗಳವರೆಗೆ ಊಟಿ ಪ್ರದೇಶದಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಾಗುವುದರಿಂದ ವಸತಿ ಗೃಹಗಳು ಭರ್ತಿಯಾಗಿರುತ್ತವೆ. ಆದರಿಂದ ಮುಂಗಡವಾಗಿ ಕಾಯ್ದಿರಿಸುವುದು ಅತ್ಯಗತ್ಯ. ಕಾರಣ ಫೆಬ್ರವರಿ 29ರ ಒಳಗಾಗಿ ತಮ್ಮ ಹೆಸರನ್ನು ನೊಂದಾಯಿಸಿದವರಿಗೆ ಮಾತ್ರ ಅವಕಾಶ. ಡಿ.ಡಿ / ಆನ್ ಲೈನ್ ಮೂಲಕ SRI BASAVESHWARA VISHWA SHANTHI BHAVAN, COONOOR (Karnataka Bank) ಹಣವನ್ನು ಪಾವತಿಸಬಹುದು.

ಸಂಪರ್ಕಿಸುವ ವಿಳಾಸ :

ಶರಣ. ಆರ್. ಚಂದ್ರಶೇಖರ್
ಸಕಲಟ್ಟಿ ಗ್ರಾಮ, ಸೊಗತೊರ್ರೈ ಪೋಸ್ಟ್
ಕೂನೂರು-ತಾ, ನೀಲಗಿರಿ- ಜಿಲ್ಲೆ,
ದೂ: ಆರ್. ಚಂದ್ರಶೇಖರ್ - 09787137430
ಆರ್. ಸಂಪತ್ - 09994461070

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಮಂಟಪ, 2035,
20ನೇ ಮುಖ್ಯ ರಸ್ತೆ, 2ನೇ ಬ್ಲಾಕ್
ಬೆಂಗಳೂರು-560010
ದೂ: 080-22923736, 9972253651

☹ ಸಮಸ್ಯೆ ? - ಸಮಾಧಾನ ! ☺

ಪಾರ್ವತಿ ರಜನೀಶ ಪಾಟೀಲ, ಬೆಂಗಳೂರು

? ಲಿಂಗಾಯತ ಸಮಾಜದಲ್ಲಿ ಹುಟ್ಟುವ ಮಗುವಿಗೆ ಹುಟ್ಟಿದ ಬಳಿಕ ಲಿಂಗಧಾರಣೆ ಮಾಡಲಾಗುವುದು. ನಂತರ ಲಿಂಗದೀಕ್ಷೆ ತೆಗೆದುಕೊಳ್ಳಬೇಕು ಎನ್ನುತ್ತಾರೆ. ಇದು ಯಾವ ವಯಸ್ಸಿಗೆ ಸೂಕ್ತ? ಕೆಲವರು ಮದುವೆಗೆ ಮೊದಲು ಲಿಂಗದೀಕ್ಷೆ ಮಾಡಿಸುತ್ತಾರೆ.

★ ಲಿಂಗಧಾರಣೆಯಂತೆ ಲಿಂಗದೀಕ್ಷೆಯೂ ಕಡ್ಡಾಯ. ಲಿಂಗಧಾರಣೆ ನಿಶ್ಚಯ ಕಾರ್ಯದಂತೆ ಲಿಂಗದೀಕ್ಷೆ ಮದುವೆಯಂತೆ. ಮಗುವಿನ ಪರವಾಗಿ ತಾಯಿ ತಂದೆ ಪ್ರತಿಜ್ಞಾಬದ್ಧರಾಗುವಂತೆ, ಲಿಂಗದೀಕ್ಷೆಯಲ್ಲಿ ವ್ಯಕ್ತಿಯು ಪ್ರೌಢಾವಸ್ಥೆಗೆ ಬಂದ ಕಾರಣ ಸ್ವತಃ ಪ್ರತಿಜ್ಞಾ ಬದ್ಧನಾಗುತ್ತಾನೆ. ಕ್ರೈಸ್ತರಲ್ಲಿ ದೀಕ್ಷಾ ಸ್ನಾನ ಮತ್ತು ನಂತರ ಸ್ಥಿರೀಕರಣ ಇರುವಂತೆ, ಲಿಂಗಾಯತ ಧರ್ಮದಲ್ಲಿ ಲಿಂಗದೀಕ್ಷೆ ಮಾಡಿಸಲೇಬೇಕು. ಮದುವೆಯವರೆಗೂ ಭವಿಗಳಾಗಿ ಕಾಲ ಕಳೆಯದೆ ಬಾಲ್ಯಾವಸ್ಥೆ ದಾಟಿ ಯೌವನಕ್ಕೆ ರೂಪಾಂತರಗೊಳ್ಳುವ ವಯಸ್ಸಿನಲ್ಲಿ ಲಿಂಗದೀಕ್ಷೆ ಆಗಬೇಕು. ಇದನ್ನು ಅಕ್ಕಮಹಾದೇವಿ ತಾಯಿಯವರು ಸ್ವಾರಸ್ಯಕರವಾಗಿ ಹೇಳುವರು.

ಉರಕ್ಕೆ ಜವ್ವನಗಳು ಬಾರದ ಮುನ್ನ
ಮನಕ್ಕೆ ನಾಚಿಕೆಗಳು ತೋರದ ಮುನ್ನ
ನಮ್ಮವರಂದೇ ಮದುವೆಯ ಮಾಡಿದರು
ಚೆನ್ನಮಲ್ಲಿಕಾರ್ಜುನಂಗೆ, ಹೆಂಗೂಸೆಂಬ ಭಾವ ತೋರದ ಮುನ್ನ
ನಮ್ಮವರಂದೇ ಮದುವೆಯ ಮಾಡಿದರು.

ಬಾಲ್ಯ ಕಳೆದು ಯೌವನವು ಶರೀರವನ್ನು ಆವರಿಸುವಾಗ ದೇಹದ ಅಂಗಾಂಗಳಲ್ಲಿ ಬದಲಾವಣೆ ಮೂಡುವುದು. ಬಾಲಕಿಯರಲ್ಲಿ ತಾನು ಹೆಣ್ಣೆಂಬ, ಬಾಲಕರಲ್ಲಿ ತಾನು ಗಂಡೆಂಬ ಭಾವ ಮೂಡಿ ನಾಚಿಕೆ ಸ್ಫುರಣವಾಗಲು ತೊಡಗುವುದು. ಇಂಥ ಶಾರೀರಿಕ, ಮಾನಸಿಕ ಸ್ಥಿತಿಯಲ್ಲೇ ದೀಕ್ಷೆ ಮಾಡಿಸಬೇಕು. ಬಾಲ್ಯದಿಂದಲೇ ಉತ್ತಮ ಸಂಸ್ಕಾರಗಳು ಮೈಗೂಡಲು ದೀಕ್ಷೆಯು ಬಹಳ ಸಹಕಾರಿಯಾಗುವುದು.

ಬಾಣೂರು ಚನ್ನಪ್ಪ, ಚಿಕ್ಕಮಗಳೂರು

? ಶಿಕಾರಿಪುರದಲ್ಲಿ ಶ್ರೀ ಗುರು ಸಿದ್ಧರಾಮೇಶ್ವರರ ಜಯಂತಿ ಉತ್ಸವವು ಜನವರಿ 14 ಮತ್ತು 15ರಂದು ನಡೆಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಸಾರ್ಣೇಹಳ್ಳಿ ಮಠದ ಶ್ರೀ ಪಂಡಿತಾರಾಧ್ಯ ಸ್ವಾಮಿಗಳು ಕಾರ್ಯಕ್ರಮದ ಔಚಿತ್ಯ ಕುರಿತು ಮಾತನಾಡದೆ ನೀವು ವಚನಾಂಕಿತ ಬದಲಿಸಿದ್ದನ್ನು ಪ್ರಸ್ತಾಪಿಸಿ, ಟೀಕಿಸಿದರು. (ವಿಜಯ ಕರ್ನಾಟಕ; ಜನವರಿ 15) ಕೇಳಿ ಸೋಜಿಗವಾಯಿತು. ಅರವಿಂದ ಜತ್ತಿಯವರು ಜಮಖಂಡಿಯಲ್ಲಿ ಇದೇ ರೀತಿ ಟೀಕಿಸಿದರು. ತಿಳಿದು, ಮನಸ್ಸಿಗೆ ತಾಪವಾಯಿತು.

★ ಆಯಾ ಕಾರ್ಯಕ್ರಮಗಳಲ್ಲಿ ಸಮಯೋಚಿತವಾಗಿ ಮಾತನಾಡುವ ಕಲೆ, ಪ್ರೌಢಿಮೆಯನ್ನು ನೀವು ಎಲ್ಲರಲ್ಲೂ ನಿರೀಕ್ಷಿಸಿದರೆ ಹೇಗೆ? ಗುರು ಸಿದ್ಧರಾಮೇಶ್ವರರ ವಚನಗಳ ಅಧ್ಯಯನ ಮಾಡಿದ್ದರೆ ತಾನೆ ಆ ಕಾರ್ಯಕ್ರಮದ ವಿಶೇಷತೆ ಕುರಿತು ಮಾತನಾಡಲು ಸಾಧ್ಯ. ಅವರ ಬಳಿ ರೆಡಿ ಇರುವುದು ಇದೇ ಕೆಸೆಟ್ ವಚನಾಂಕಿತ ಬದಲಾವಣೆಗೆ ವಿರೋಧ, ಅದನ್ನೇ ಇಲ್ಲೂ ರೀಪ್ಲೇ ಮಾಡಿದ್ದಾರೆ. ಅಥವಾ ಅನೇಕ ಮಠಾಧೀಶರಿಗೆ ಮತ್ತು ಸಾಹಿತಿಗಳಿಗೆ ಲಿಂಗದೇವ, ಮತ್ತು ನಾನು ಸಿಂಹಸ್ವಪ್ನವಾದಂತೆ ತೋರುತ್ತದೆ. ಪಾಪ, ಕನಸಿನಲ್ಲೂ ಕನವರಿಸುವಷ್ಟು ಹೆದರಿಬಿಟ್ಟಿದ್ದಾರೆ. ಹೀಗೆ ಎಲ್ಲಾ ವೇದಿಕೆಗಳಲ್ಲೂ ನಾನು "ಸರ್ವವ್ಯಾಪಿ"ಯಾಗಿದ್ದೇನೆ. ನಿಮಗೆ ತಾಪವೇಕೆ ? ಹೆಮ್ಮೆಪಡಿ......!

ಪಂಚರತ್ನ, ತುಮಕೂರು

? ನಮ್ಮಲ್ಲಿ ಹಿರಿಯರು ಮೊದಲು ನಾವು ಪಂಚಾಚಾರದವರು ಎಂದು ಹೇಳುತ್ತಿದ್ದರು. ಆದರೆ ಬರು ಬರುತ್ತ ಆ ಪದ ಬಿಟ್ಟು ಪಂಚಪೀಠದವರು ಎಂದು ಹೇಳತೊಡಗಿದರು. ಹೀಗೇಕೆ?

★ ತಾತ್ವಿಕವಾದ ಪದಗಳನ್ನು ಬದಲಾಯಿಸಿ ಕೆಲವು ಪದಗಳ ಮೂಲಕ ಭ್ರಮಾತ್ಮಕವಾದ ನಂಬಿಕೆಯನ್ನು ಹುಟ್ಟಿಸಲು ಪಂಚಪೀಠಾಧೀಶರು 20ನೆಯ ಶತಮಾನದಲ್ಲಿ ದೊಡ್ಡ ಸಂಚನ್ನೇ ಹೂಡಿದರು. ಲಿಂಗಾಯತರನ್ನು ವೀರಶೈವ ಪದದಿಂದ ಕರದುದೇ ಅಲ್ಲದೆ ವೀರಶೈವರೆಂಬ ಭ್ರಮೆ ಹುಟ್ಟಿಸಿದರು. ಪಂಚಾಚಾರದವರು ಗುರು ಬಸವಣ್ಣನವರು ಕೊಟ್ಟ 5 ಆಚಾರಗಳ ನಿಷ್ಠಾವಂತ

ಅನುಯಾಯಿಗಳಾಗಿದ್ದವರು. ಸದಾಚಾರದವರು (ಅಂದರೆ ಸಾದರು, ಕಾಯಕ ಪ್ರಧಾನ ಜನ)ಸಿರಿಗೆರೆಯವರಿಗೆ ನಡೆದುಕೊಂಡಂತೆ ಪಂಚಾಚಾರದವರು ಪಂಚಪೀಠದ ಅನುಯಾಯಿಗಳು ಪಂಚಪೀಠದವರಿಗೇ ನಡೆದುಕೊಳ್ಳಬೇಕು ಎಂಬ ಭ್ರಮೆ ತುಂಬಿದರು. ವಿಷಯವೇ ತಿಳಿಯದ ಅನೇಕರು ನೀವು ಯಾರು ಎಂದರೆ ನಾವು ಪಂಚಪೀಠದವರು ಎನ್ನುತ್ತಾರೆ.

ಎಸ್.ಬಿ.ಗೌಡರು, ಧಾರವಾಡ

? ಪಂಚಮಸಾಲಿ ಜನಾಂಗಕ್ಕೆ ಒಂದು ಗುರು ಪೀಠ ಮಾಡಲು ಕೆಲವರು ಯತ್ನಿಸಿದರು. ಈಗ ಅವು ಮೂರು ಆಗುವ ಸೂಚನೆ ಕಾಣುತ್ತಿದೆಯಲ್ಲ? ಪಂಚ ಪೀಠಾಧೀಶರ ನೆರಳಿನಿಂದ ಅರ್ಥಾತ್ ದಾಸ್ಯದಿಂದ ಹೊರಬರಲು ಗುರು ಪೀಠ ಮಾಡಲಾಯಿತು. ಉದ್ದೇಶ ನೆರವೇರಬಹುದೆ?

★ ಪಂಚಮಸಾಲಿಯವರು ಪಂಚಪೀಠದ ಅನುಯಾಯಿಗಳು ಎಂಬ ನಂಬಿಕೆ ತುಂಬಿದ್ದರಿಂದ ಆ ಶ್ರೀಮಂತ ಜನಾಂಗ ಅಡ್ಡ ಪಲ್ಲಕ್ಕಿ ಹೊತ್ತು ಅದರ ಹೆಗಲು ಸವೆಯಿತು. ಪಂಚಮಸಾಲಿ ಯುವಕನೊಬ್ಬನನ್ನು ಐದು ಪೀಠಗಳಲ್ಲಿ ಒಂದಕ್ಕೆ ಆಯ್ಕೆ ಮಾಡುವಿರಾ'ಎಂದು ಜಾಗೃತಗೊಂಡ ಜನರು ಕೇಳಿದಾಗ ಪೀಠಾಧೀಶರು ಬೆಪ್ಪಾದರು. ಜೊತೆಗೆ ಒಂದು ವಿಶಿಷ್ಟ ಪಂಗಡದವರನ್ನು ಪರಿಶಿಷ್ಟ ಜಾತಿಗೆ ಸೇರಿಸಿ ಮೀಸಲಾತಿ ನೀಡಬೇಕೆಂದು ಪಂಚಪೀಠಾಧೀಶರು ಪ್ರಧಾನಿಯವರಿಗೆ ಮನವಿ ನೀಡಿದುದು ಪಲ್ಲಕ್ಕಿ ಹೊತ್ತು ದಣಿದವರನ್ನು ಮತ್ತಷ್ಟು ಸುಸ್ತುಗೊಳಿಸಿತು. ಅದಕ್ಕಾಗಿ ಈ ಪೀಠ ಸ್ಥಾಪನೆಯ ಪ್ರಯತ್ನ. ಲಿಂಗಾಯತ ಪದ ಬಳಸದೆ, ಧರ್ಮಪಿತ ಬಸವಣ್ಣನವರನ್ನು ಆದ್ಯರೆಂದು ಮನ್ನಿಸದೆ ವೀರಶೈವದ ಸೆರಗು ಹಿಡಿದು ಹೋದರೆ ಯಾವ ಪ್ರಯೋಜನವೂ ಆಗದು. ಅದು ಬಾಣಲೆಯಿಂದ ಬೆಂಕಿಗೆ ಹಾರಿದಂತೆ ಅಷ್ಟೆ !

ಚಂದ್ರಕಾಂತ ಹುರುಕಡ್ಲಿ, ಹುಬ್ಬಳ್ಳಿ

? ಸಿ.ಎನ್. ಕೃಷ್ಣಮಾಚಾರ್ ಎಂಬ ಒಬ್ಬರು ಪ್ರಜಾವಾಣಿಯ ವಾಚಕರ ವಿಭಾಗದಲ್ಲಿ ದಿ. 6-2-2008 ಹಿಮಾಲಯದಿಂದ ಹಿಂದು ಮಹಾಸಾಗರದವರೆಗೆ ಇರುವ ಭಾರತೀಯ ನಿವಾಸಿಗಳೆಲ್ಲರೂ ಹಿಂದುಗಳೆ. ಹಿಂದುತ್ವದ ತೆಕ್ಕೆಯೊಳಗೆ ಬೌದ್ಧ, ಜೈನ್, ಸಿಖ್ಖ, ಪಾರಸಿಕ ಎಲ್ಲರೂ ಬರುತ್ತಾರೆ. ಲಿಂಗಾಯತವೂ ಇದೇ ಕಕ್ಷೆಯಲ್ಲಿ ಬರುತ್ತದೆ ಎಂದಿದ್ದಾರೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?

★ ಕೆಲವು ವ್ಯಾಖ್ಯಾನಗಳು ಭ್ರಮಾತ್ಮಕವಾಗಿರುತ್ತವೆ. ಮತ್ತೆ ಕೆಲವು ಒಂದು ಕಾಲದಲ್ಲಿ ಅನ್ವಯವಾಗಿ ನಂತರ ಅರ್ಥಕಳೆದುಕೊಳ್ಳುತ್ತವೆ. "ಇಡೀ ವಿಶ್ವವನ್ನು ಒಂದು ಕುಟುಂಬದಂತೆ ಭಾವಿಸುವವ ಹಿಂದು"-ಇದು ಭ್ರಮಾತ್ಮಕ. ತನ್ನ ಸಮಾಜದ ಅವಿಭಾಜ್ಯ ಅಂಗವಾದ ದಲಿತರನ್ನು ಅಮಾನುಷವಾಗಿ ದೂರವಿಡುವ, ಶೋಷಿಸುವ ಶಾಸ್ತ್ರಗಳಿಂದ ಕೂಡಿದ ಧರ್ಮವಿದು. ಒಂದು ಕಾಲದಲ್ಲಿ ವಿದೇಶೀಯರು ಯಾರೂ ಈ ದೇಶದೊಳಕ್ಕೆ ಪ್ರವೇಶಿಸದಿದ್ದಾಗ ಹಿಮಾಲಯದಿಂದ ಹಿಂದೂ ಮಹಾಸಾಗರದವರೆಗೆ ಇರುವವರೆಲ್ಲ ಹಿಂದು ಎಂದರೆ ಅದಕ್ಕೆ ಅರ್ಥವಿದೆ. ಹೊರಗಿನ ಎಲ್ಲ ಧರ್ಮಗಳವರು ಒಳಗೆ ಇದ್ದಾರೆ, ಬೆಳೆಯುತ್ತಿದ್ದಾರೆ. ಹಿಂದುಗಳು ಈ ಎಲ್ಲೆ ದಾಟಿ ಹೊರ ರಾಷ್ಟ್ರಗಳಲ್ಲಿ ಇದ್ದಾರೆ. ಗುರುವಾಯೂರಪ್ಪನ್ ದೇವಾಲಯದೊಳಕ್ಕೆ ದಲಿತರು ಬಂದು ಹೋದರು, ಕ್ರೈಸ್ತರು (ಜೇಸುದಾಸ್)ಬಂದು ಹೋದರು ಎಂದು ಹಾಲು ಹಾಕಿ ತೊಳೆಯುವ, ವಿದೇಶ ಪ್ರವಾಸ ಮಾಡಿದ್ದರಿಂದ ಕೃಷ್ಣ ವಿಗ್ರಹವನ್ನು ಮುಟ್ಟಿ ಪೂಜಿಸಬಾರದೆಂಬ ಮೌಢ್ಯತೆ ಇರುವ ಹಿಂದು ಧರ್ಮದಿಂದ ಇವೆಲ್ಲ ಸ್ಪೃಶ್ಯಾಸ್ಪೃಶ್ಯತೆ ಆಚರಿಸಬಾರದೆಂಬ ಲಿಂಗಾಯತ ಧರ್ಮ ಖಂಡಿತಾ ಬೇರೆಯಲ್ಲವೆ?

ಹೆಸರು ಬೇಡಾ, ಊರು ಬೇಡಾ

?ಮೌಂಟ್ ಎವರೆಸ್ಟ್ ಏರಿದ ತೇನ್‌ಸಿಂಗ್ ಬಾಲ್ಯದಲ್ಲಿದ್ದಾಗ ಆಕಾಶದಲ್ಲಿ ಹಾರಾಡಿದಂತೆ ಕನಸು ಬೀಳುತ್ತಿತ್ತಂತೆ. ಬಡತನದಲ್ಲಿದ್ದರೂ ಪರ್ವತವನ್ನೇರುವ ಅದಮ್ಯ ಬಯಕೆಯನ್ನು ಆತ ಹೊಂದಿದ್ದ. ಮುಂದೆ ಅದು ಸಿದ್ಧಿಸಿತು. ನನಗೂ ಅದೇ ರೀತಿ ಎತ್ತರಕ್ಕೆ ಹೋದಂತೆ ಆಕಾಶದಲ್ಲಿ ಹಾರಾಡಿದಂತೆ ಕನಸು ಬೀಳುತ್ತವೆ. ಈ ಕನಸಿನ ಮರ್ಮವೇನು ?

★ ಮಹತ್ವಾಕಾಂಕ್ಷೆ ಇರುವವರಿಗೆ ಆಕಾಶದಲ್ಲಿ ಹಾರಾಡಿದಂತೆ ಕನಸು ಬೀಳುತ್ತವಂತೆ. ಕೇವಲ ಮಹತ್ವಾಕಾಂಕ್ಷೆ ಉನ್ನತ ಗುರಿ ಇದ್ದರೆ ಸಾಲದು. ಗುರಿ ಮುಟ್ಟಲು ಸರಿಯಾದ ಪ್ರಯತ್ನ ಮಾಡಬೇಕು. ತೇನ್‌ಸಿಂಗ್ ಬಡತನದ ಕುಟುಂಬದವನಾದರೂ ಮೌಂಟ್ ಎವರೆಸ್ಟ್ ಏರುವ ಛಲದಿಂದ ಸಾಧಿಸಬೇಕು. ಬರೀ ಮನಸ್ಸಿನಲ್ಲಿ ಮಂಡಿಗೆ ತಿಂದರೆ ಸಾಲದು.

ಲಿಂಗಾಯತ ಧರ್ಮ ಮತ್ತು ಸಿಖ್ ಧರ್ಮದಲ್ಲಿರುವ ಕೆಲವೊಂದು ಸಾಮಾನ್ಯ ಅಂಶಗಳು

	ಧಾರ್ಮಿಕ ಅಂಶಗಳು	ಲಿಂಗಾಯತ ಧರ್ಮ	ಸಿಖ್ ಧರ್ಮ
1	ಧರ್ಮಗುರು	ಗುರು ಬಸವಣ್ಣನವರು	ಗುರು ನಾನಕದೇವರು
2	ಧರ್ಮದ ಪರಿಭಾಷೆಯಲ್ಲಿ ದೇವರ ಹೆಸರು	ಲಿಂಗದೇವ	ಸತ್‌ನಾಮ
3	ಧರ್ಮ ಗ್ರಂಥ	ವಚನ ಸಾಹಿತ್ಯ	ಗುರುಗ್ರಂಥ ಸಾಹೇಬ
4	ಧರ್ಮ ಕ್ಷೇತ್ರ	ಕೂಡಲ ಸಂಗಮ	ಅಮೃತ ಸರ
5	ಧರ್ಮ ಧ್ವಜ	ಷಟ್ಕೋನ, ಇಷ್ಟಲಿಂಗ ಸಹಿತ ಕಾವಿ ಬಸವಧ್ವಜ	'ಖಂದಾ' (ಎರಡೂ ಕಡೆ ಹರಿತವಾದ ಒಂದು ವಿಶೇಷ ಆಯುಧ), ಒಂದು ವೃತ್ತ ಮತ್ತು ಎರಡು ಖಡ್ಗಗಳ ಚಿತ್ರವಿರುವ ಕಾವಿಧ್ವಜ
6	ದೇವ ಮಂತ್ರ	'ಓಂ ಲಿಂಗಾಯ ನಮಃ'	'ಏಕ್ ಓಂಕಾರ ಸತ್‌ನಾಮ್ ಕರ್ತಾಪುರಖ ನಿರ್ಭವ್ ನಿರ್ವೈರ್, ಅಕಲ ಮೂರ್ತಿ, ಅಜೋನಿ ಸೈಭಂ, ಗುರು ಪ್ರಸಾದ'
7	ಸಾಮೂಹಿಕ ಪ್ರಾರ್ಥನೆ	ಶರಣ ಸಂಗಮ	ಸಂಗತ್
8	ಧರ್ಮಕ್ಕೆ ಪ್ರವೇಶ ನೀಡುವ ಸಂಸ್ಕಾರ	ಇಷ್ಟಲಿಂಗ ದೀಕ್ಷೆ, ಮಂತ್ರ ದೀಕ್ಷೆ	'ಪಾಹುಲ'
9	ಧರ್ಮದ ಮಂದಿರ/ ಶ್ರದ್ಧಾ ಕೇಂದ್ರಗಳು	ಬಸವ ಮಂಟಪ	ಗುರು ದ್ವಾರ
10	ಧರ್ಮದ ಅನುಯಾಯಿಗೆ ಕರೆಯುವ ಹೆಸರು	ಶರಣ (ಪರಮಾತ್ಮನಿಗೆ ಶರಣಾದವನು)	ಸಿಖ್ (ದೇವರಿಗೆ ಶಿಷ್ಯನಾದವನು)
11	ಸಾಮೂಹಿಕ ಹಾಗೂ ಸಹಪಂಕ್ತಿ ಭೋಜನ	ದಾಸೋಹ	ಲಂಗರ್
12	ಧರ್ಮದ ಜಯಕಾರ 'ಜಯವಾಗಲಿ'	ವಿಶ್ವಗುರು ಬಸವಣ್ಣನವರಿಗೆ ಜಯವಾಗಲಿ	ವಾಹಿ ಗುರೂಕಿ ಫತೆ ವಾಹಿ ಖಾಲ್ಸಾ
13	ಶರಣ ಸಮುದಾಯದಲ್ಲಿ ಬೆರೆತಾಗ ಸಿಗುವ ಪದವಿ	ಗಣ ಪದವಿ	ಖಾಲ್ಸಾ
14	ಶರೀರದ ಮೇಲೆ ಧರಿಸುವ/ ಶರೀರಕ್ಕೆ ಸಂಬಂಧಿಸಿಕೊಳ್ಳುವ ಲಾಂಛನಗಳು	ಅಷ್ಟಾವರಣಗಳು : ಗುರು, ಲಿಂಗ, ಜಂಗಮ, ವಿಭೂತಿ ರುದ್ರಾಕ್ಷಿ, ಮಂತ್ರ, ಕರುಣೋದಕ, ಕರುಣ ಪ್ರಸಾದ	ಪಂಚ -'ಕ'ಕಾರಗಳು : ಕೇಶ, ಕಾಂಘ (ಬಾಚಣಿಕೆ), ಕಚ್ಛ, ಕಂಗನ್, ಕಿರಪಾನ್

ಕ್ರ.ಸಂ	ಧಾರ್ಮಿಕ ಅಂಶಗಳು	ಲಿಂಗಾಯತ ಧರ್ಮ	ಸಿಖ್ ಧರ್ಮ
15	ತೀರ್ಥ	ಕರುಣೋದಕ	ಕಿರಪಾನ
16	ಗುರು ಪರಂಪರೆ	ಆದಿಗುರು ಬಸವಣ್ಣನವರು, ಹಾಗೂ ಶೂನ್ಯಪೀಠದ ಗುರು ಪರಂಪರೆ. ಗುರು ಅಲ್ಲಮಪ್ರಭುದೇವರು, ಗುರು ಚೆನ್ನಬಸವಣ್ಣನವರು, ಗುರು ಸಿದ್ಧರಾಮೇಶ್ವರರು, ಗುರು ಮಲ್ಲೆ ಮಹದೇವ್ವರು ಯಡೆಯೂರು ಸಿದ್ಧಲಿಂಗೇಶ್ವರರು ಷಣ್ಮುಖ ಶಿವಯೋಗಿಗಳು ಗುರು ಲಿಂಗಾನಂದರು ಗುರು ಮಾತೆ ಮಹಾದೇವಿಯವರು	ದಶಗುರು ಪರಂಪರೆ ಗುರು ನಾನಕರು ಗುರು ಅಂಗದ್ ಗುರು ಅಮರದಾಸ, ಗುರು ರಾಮದಾಸ್ ಗುರು ಅರ್ಜುನ್ ಸಿಂಗ್ ಗುರು ಹರಗೋವಿಂದ ಗುರು ಹರರಾಯ್ ಗುರು ಹರ ಕೃಷ್ಣ, ಗುರು ತೇಗ ಬಹಾದ್ದೂರ್ ಗುರು ಗೋವಿಂದ್ ಸಿಂಗ್
17	ಧರ್ಮದ ಅನುಯಾಯಿಯ ಧರ್ಮಸೇವೆ	ಭೃತ್ಯಾಚಾರ	ಕರ ಸೇವೆ
18	ಧರ್ಮದ ಭಾಷೆ	ಶರಣ ವಾಣಿ (ಕನ್ನಡ)	ಗುರು ಮುಖಿ (ಪಂಜಾಬಿ)
19	ಧರ್ಮಗುರು ಹಾಗೂ ಶರಣರು ಬೋಧಿಸಿದ, ತತ್ವವನ್ನೊಳಗೊಂಡ ಪದ್ಯಗಳು	'ವಚನ'ಗಳು	ಜಪಜಿ'ಗಳು
20	ಅರ್ಥಶಾಸ್ತ್ರ	ಕಾಯಕ - ದಾಸೋಹ	ದುಡಿಮೆ ಮತ್ತು ಲಂಗರ್
21	ಸಮಾಜ ಶಾಸ್ತ್ರ	ದೇವನೊಬ್ಬನೇ ತಂದೆ, ಮನುಜರೆಲ್ಲರೂ ಒಂದೇ	ದೇವನ ಸಾರ್ವಭೌಮತ್ವ ಮಾನವರ ಸಹೋದರತ್ವ
22	ಆರಾಧಿಸುವ/ಪೂಜಿಸುವ ವಸ್ತು	ಸೃಷ್ಟಿಕರ್ತ ಲಿಂಗದೇವನ ಕುರುಹಾದ ಇಷ್ಟಲಿಂಗ	ಇಂಥ ಯಾವುದೇ ಪೂಜಿಸುವ ವಸ್ತು ಇಲ್ಲ ಧರ್ಮಗ್ರಂಥಕ್ಕೆ ಅತ್ಯುನ್ನತ ಸ್ಥಾನ

ಇಲ್ಲಿ ಎರಡೂ ಧರ್ಮಗಳಲ್ಲಿಯೂ ಇರುವ ಕೆಲವು ಸಾಮಾನ್ಯ ಅಂಶಗಳನ್ನು ಪಟ್ಟಿ ಮಾಡಲಾಗಿದೆಯೇ ಹೊರತು ಎಲ್ಲಾ ಅಂಶಗಳನ್ನಲ್ಲ. ಲಿಂಗಾಯತ ಧರ್ಮದಲ್ಲಿ ಇನ್ನು ಅನೇಕ ಅಂಶಗಳು ಎದ್ದು ಕಾಣುತ್ತವೆ. ಪಂಚಾಚಾರಗಳಾದ ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರಗಳಂಥ ತತ್ತ್ವವು ಸಿಖ್ ಧರ್ಮದಲ್ಲಿ ಲಿಂಗಾಯತ ಧರ್ಮದಲ್ಲಿರುವಷ್ಟು ಶಾಸ್ತ್ರೋಕ್ತವಾಗಿ ಇಲ್ಲ. ಆದರೆ ಅವರಲ್ಲಿ ಈ ಎಲ್ಲಾ ಗುಣಗಳು, ಸಾಂಪ್ರದಾಯಿಕವಾಗಿ ಬಂದು ಬಿಟ್ಟಿವೆ.

-ಸಚ್ಚಿದಾನಂದ ಚಟನಳ್ಳಿ

ವಚನ ಮರುಚಿಂತನೆ

- ಸಚ್ಚಿದಾನಂದ ಚಟನಳ್ಳಿ

ಎಲವದ ಮರ ಹೂತು ಫಲವಾದ ತೆರನಂತೆ
ಸಿರಿಯಾದಡೇನು ಶಿವಭಕ್ತಿಯಿಲ್ಲದನ್ನಕ್ಕ?
ಫಲವಾದಡೇನು ಹೇಳಾ ಹಾವು ಮೆಕ್ಕೆಯ ಕಾಯಿ?
ಕುಲವಿಲ್ಲದ ರೂಹು ಎಲ್ಲಿದ್ದರೇನು?
ಬಚ್ಚಲ ನೀರು ತಿಳಿಯಾದಲ್ಲಿ ಫಲವೇನು?
ಅವಗುಣಿಗಳ ಮೆಚ್ಚ ನಮ್ಮ ಲಿಂಗದೇವರು. (ಬ.ವ.ದೀ-123)

ಈ ವಚನದ ನಾಲ್ಕನೆ ಸಾಲಿನಲ್ಲಿ ದೋಷವಿದೆ ಎಂದು ನನಗನಿಸುತ್ತದೆ. ಕಾರಣ, ಮೇಲಿನಿಂದ ಕೆಳಕ್ಕೆ ವಚನಗಳ ಸಾಲನ್ನು ಓದುತ್ತಾ ಹೋದರೆ ಒಂದು ತತ್ವವನ್ನು ಉದಾಹರಣೆಗಳ ಮೂಲಕ ಗುರು ಬಸವಣ್ಣನವರು ಹೇಳುತ್ತಿದ್ದಾರೆ.

ಎಲವದ ಮರ ಎಂದರೆ ಬೂರಲ ಗಿಡ ಎಂದು ಅರ್ಥ; ಎಲವದ ಮರವನ್ನು ಇಂಗ್ಲೀಷ್‌ನಲ್ಲಿ 'ಸಿಲ್ಕ್-ಕಾಟನ್‌ಟ್ರೀ' (*Silk Cotton Tree*) ಎನ್ನುತ್ತಾರೆ. ಹೂತು ಎಂದರೆ ಹೂವು ಬಿಟ್ಟು, ಫಲವಾದ ತೆರನಂತೆ- ಆ ಗಿಡಕ್ಕೆ ಹಣ್ಣುಗಳು ಆದ ಹಾಗೆ ಎಂದು ಮೊದಲ ಸಾಲಿನ ಅರ್ಥ.ಬೂರಲ ಗಿಡದ ಹಣ್ಣು ಯಾರೂ ತಿನ್ನಲಾರರು. ಆ ಹಣ್ಣಿನಿಂದ ಯಾರಿಗೂ ಯಾವ ಪ್ರಯೋಜನವು ಇಲ್ಲ.ತನ್ನ ಪಾಡಿಗೆ ತಾನು ಹೂವು ಬಿಡುತ್ತೆ ಕಾಯಾಗುತ್ತೆ ಹಣ್ಣಾಗುತ್ತೆ. ಆ ಹಣ್ಣು ಬಿದ್ದು ಹೋಗುತ್ತವೆಯೇ ಹೊರತು ಮನುಷ್ಯರಾಗಲಿ ಪಶುಪಕ್ಷಿಗಳಾಗಲೀ ತಿನ್ನಲಿಕ್ಕೆ ಯೋಗ್ಯವಲ್ಲದ ಹಣ್ಣು ಅದು. ಅದೇ ರೀತಿ, ಇನ್ನೊಬ್ಬರಿಗೆ ಉಪಕಾರ ಮಾಡದ, ಇನ್ನೊಬ್ಬರ ಕಷ್ಟದಲ್ಲಿ ಸಹಾಯ ಹಸ್ತ ಚಾಚದ ಸಿರಿವಂತಿಕೆಯಿಂದ ಯಾವ ಪ್ರಯೋಜನ? ಭಕ್ತಿಯಿಲ್ಲದ, ದೇವರ ಪೂಜೆ ಪ್ರಾರ್ಥನೆ ಮತ್ತು ದಾಸೋಹಕ್ಕೆ ಧನ ಸವೆಸದ ಸಿರಿವಂತಿಕೆ, ಆ ಬೂರಲ ಗಿಡದ ಹಣ್ಣಿನಂತೆ ನಿಷ್ಪ್ರಯೋಜಕವಾದುದು ಎಂದು ಧರ್ಮಪಿತರು ಈ ವಚನದ ಮೊದಲೆರಡು ಸಾಲಿನಲ್ಲಿ ಹೇಳುತ್ತಾರೆ.

"ಫಲವಾದಡೇನು ಹೇಳಾ ಹಾವು ಮೆಕ್ಕೆಯ ಕಾಯಿ?" ಇಲ್ಲಿ "ಹಾವು ಮೆಕ್ಕೆಯ ಕಾಯಿ" ಎಂದರೆ ಒಂದು ಬಗೆಯ ಮೆಕ್ಕೆಯ ಬಳ್ಳಿಯ ಕಾಯಿ, ಇದು ಅತ್ಯಂತ ಕಹಿಯಾಗಿರುತ್ತದೆ. 'ಇಂದ್ರವಾರುಣಿ' ಎನ್ನುವುದು ಇದರ ಮತ್ತೊಂದು ಹೆಸರು. ಈ ಹಣ್ಣು ತಿನ್ನಲಿಕ್ಕೆ ಯೋಗ್ಯವಲ್ಲದುದು. ಇಂಥ ಕಾಯಿ ಹಣ್ಣಾದರೇನು ಪ್ರಯೋಜನ? ಎನ್ನುತ್ತಾರೆ. ಇದು ಸರಿಯಾಗಿಯೇ ಇದೆ.

ಐದನೇ ಸಾಲಿನಲ್ಲಿ "ಬಚ್ಚಲ ನೀರು ತಿಳಿಯಾದಲ್ಲಿ ಫಲವೇನು?" ಎನ್ನುವುದೂ ಸರಿಯಾಗಿಯೇ ಇದೆ. ಕಾರಣ ಬಚ್ಚಲಿನಿಂದ ಬರುವ ನೀರು ಎಷ್ಟೇ ತಿಳಿಯಾಗಿದ್ದರೂ ಯಾವುದಕ್ಕೂ ಉಪಯೋಗಿಸುವುದಕ್ಕೆ ಆಗುವುದಿಲ್ಲ.

ನಾಲ್ಕನೇ ಸಾಲನ್ನು ನೋಡಿದಾಗ ಮಾತ್ರ ಸ್ವಲ್ಪ ವ್ಯತ್ಯಾಸವೆನಿಸುತ್ತಿದೆ. "ಕುಲವಿಲ್ಲದ ರೂಹು ಎಲ್ಲಿದ್ದರೇನು?" ಅಂದರೆ ಒಬ್ಬ ವ್ಯಕ್ತಿಯು ಸುಂದರವಾಗಿದ್ದಾನೆ/ಳೆ ಎಂದುಕೊಳ್ಳಿ, ಆದರೆ ಅವನು/ಅವಳು ಒಳ್ಳೆಯ ಕುಲದಲ್ಲಿ ಹುಟ್ಟಿಲ್ಲ. ಅದಕ್ಕಾಗಿ ಅವರ ರೂಪದಿಂದ ಪ್ರಯೋಜನವಿಲ್ಲ ಎಂದಾಗುತ್ತದೆ ಇದರ ಅರ್ಥ! ಕುಲಜಾತಿಗಳನ್ನು ಖಂಡಿಸಿದ ಗುರು ಬಸವಣ್ಣನವರು ಹೀಗೆ ಹೇಳಲಿಕ್ಕೆ ಸಾಧ್ಯವೇ ಇಲ್ಲ. ಇದು ಪಾಠಾಂತರ ದೋಷವಾಗಿರಬಹುದು ಅಥವಾ ಯಾರಾದರೂ ಸೇರಿಸಿರಬಹುದು ಎಂದು ನನಗನಿಸುತ್ತಿದೆ. ಕಾರಣ ಕೊನೆಯ ಸಾಲನ್ನು ನೋಡಿದಾಗ 'ಅವಗುಣಿಗಳ ಮೆಚ್ಚ ನಮ್ಮ ಲಿಂಗದೇವಾ' ಎನ್ನುತ್ತಾರೆ. ಇಲ್ಲಿ 4ನೇ ಸಾಲಿಗೂ ಕೊನೆಯ ಸಾಲಿಗೂ ಸಂಬಂಧವಿದೆ. ಅದಕ್ಕಾಗಿ 4ನೇ ಸಾಲಿನಲ್ಲಿ "ಕುಲವಿಲ್ಲದ ರೂಹು ಎಲ್ಲಿದ್ದರೇನು?" ಎನ್ನುವ ಬದಲಿಗೆ "ಗುಣವಿಲ್ಲದ ರೂಹು ಎಲ್ಲಿದ್ದರೇನು?" ಎಂದಾಗಬೇಕು. ಏಕೆಂದರೆ ಅಕ್ಕಮಹಾದೇವಿ ತಾಯಿಯವರ ವಚನದಲ್ಲಿ ಒಂದು ಕಡೆ ಬಂದಿದೆ "ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ?" ಎಂದು. ಆಗ ನಾಲ್ಕನೇ ಸಾಲಿನ ಅರ್ಥ ಉಳಿದ ಸಾಲುಗಳಂತೆಯೇ ಅರ್ಥ ಪೂರ್ಣವಾಗುತ್ತದೆ.

"ಗುಣವಿಲ್ಲದ ರೂಹು, ಎಲ್ಲಿದ್ದರೇನು?" ಒಬ್ಬನು/ಒಬ್ಬಳು ತುಂಬಾ ರೂಪವಂತ/ರೂಪವತಿಯಾಗಿದ್ದು ಒಳ್ಳೆಯ ಗುಣವಿಲ್ಲದಿದ್ದರೆ ಏನು ಪ್ರಯೋಜನ? ಅದು ಬೂರಲ ಹಣ್ಣಿನಂತೆ, ಹಾವು ಮೆಕ್ಕೆಯ ಕಾಯಿಯಂತೆ, ಬಚ್ಚಲ ತಿಳಿನೀರಿನಂತೆ ನಿಷ್ಪ್ರಯೋಜಕವಾದುದು" ಎಂದು ಈ ವಚನದ ಸಾಲುಗಳ ಅರ್ಥ. ಅದಕ್ಕಾಗಿ ಬ.ವ.ದೀ.-123ನೇ ವಚನದ ನಾಲ್ಕನೇ ಸಾಲನ್ನು 'ಗುಣವಿಲ್ಲದ ರೂಹು ಎಲ್ಲಿದ್ದರೇನು?' ಎಂದು ಬದಲಿಸಿ ಕೊಂಡರೆ ವಚನವು ಹೆಚ್ಚು ಅರ್ಥಪೂರ್ಣವಾಗುತ್ತದೆ ಎಂದು ನನಗನಿಸುತ್ತದೆ. ನೀವೇನಂತೀರಾ? (ಕರ್ನಾಟಕ ಸರಕಾರದ ವಚನ ಸಂಪುಟದಲ್ಲಿ ಈ ವಚನದ ಸಂಖ್ಯೆ-121 ಇದೆ.)

ಗುಣ/ ಕುಲವಿಲ್ಲದ ರೂಹು

- ಮಾತಾಜಿ

ಎಲವದ ಮರ ಎಂದರೆ ಬೂಗಲ, ಬೂರುಗದ ಗಿಡ. ಅದು ಕಾಯಿ ತಳೆಯುತ್ತದೆ. ಕಾಯಿ ಒಣಗಿ ಸಿಡಿಯುತವೆ. ಆಗ ಇಡೀ ಗಿಡವು ಬಣ್ಣಬಣ್ಣದ ಬೂರುಗದ ಅರಳೆಯಿಂದ ನೋಡಲು ವಿಶೇಷವಾಗಿ ಕಾಣುತ್ತದೆ. ಆದರೆ ಅದು ಕೈಗೆ ಸಿಗದಂತೆ ಗಾಳಿಗೆ ಹಾರಿ ಹೋಗಿಬಿಡುತ್ತದೆ. ಬೂರುಗದ ಅರಳೆಯನ್ನು ಸಂಗ್ರಹಿಸಿ ದಿಂಬು, ಹಾಸಿಗೆ ತಯಾರಿಸುತ್ತಾರೆ. ಬಹಳ ಮೃದುವಾಗಿರುತ್ತದೆ.

ಕೆಲವರ ಮನೆ, ಸಂಪತ್ತು, ಆಳುಕಾಳು ಎಲ್ಲ ನೋಡಲಿಕ್ಕೆ ಬೂರುಗದ ಸಿಡಿದ ಕಾಯಿಯಿಂದ ತುಂಬಿದ ಮರದಂತೆ ಬಹಳ ಚಂದವಾಗಿ, ವೈಭವದಿಂದ ಕಾಣುತ್ತದೆ. ಆದರೆ ಆ ಸಂಪತ್ತಿನ ಪ್ರಯೋಜನ ಯಾರಿಗೂ ಆಗದು. ಏಕೆಂದರೆ ಅಲ್ಲಿ ಸಿರಿಯುಂಟು ಅದನ್ನು ಸದ್ಬಳಕೆ ಮಾಡಬೇಕೆಂಬ ದಾಸೋಹ ಭಾವವಿಲ್ಲ. ಅದೇ ಸಾಮಾನ್ಯ ಅರಳೆಯಂತೆ ಬಡವನಾದರೂ ಭಕ್ತನ ಸಂಪತ್ತು ಜನರಿಗೆ ಉಪಯೋಗವಾಗುತ್ತದೆ.

ಕುಲವಿಲ್ಲದ ರೂಪು / ಗುಣವಿಲ್ಲದ ರೂಪು

ಗುರು ಬಸವಣ್ಣನವರಾಗಲೀ, ಜಗನ್ಮಾತಾ ಅಕ್ಕಮಹಾದೇವಿಯಾಗಲಿ ಗುಣವಿಲ್ಲದ ರೂಹು ಎಂದಿರಲೇ ಬೇಕು ಎನ್ನಿಸುತ್ತದೆ. ಏಕೆಂದರೆ ಅವರುಗಳು ಕುಲದ ಆಧಾರದ ಮೇಲೆ ಯಾರನ್ನೂ ಅಳೆಯುವುದಿಲ್ಲ.

ಆದರೆ, ಕುಲವಿಲ್ಲದ ರೂಹು ಎಲ್ಲಿದ್ದರೇನು ? ಎಂದು ಸಹ ಚಿಂತಸಬಹುದು. ಒಬ್ಬ ಹುಡುಗಿ ಇರುತ್ತಾಳೆ. ಅತ್ಯಂತ ಸುಂದರಿ. ಅವಳ ರೂಪಕ್ಕೆ ರಾಜನಂತಹವನೇ ಮನ ಸೋಲುತ್ತಾನೆ. ಆಕೆಯ ಪೂರ್ವಾಶ್ರಯ ವಿಚಾರಿಸಿದಾಗ ಕೀಳು ಕುಲದ ಕನ್ಯೆ ಎಂದು ತಿಳಿದು ಬರುತ್ತದೆ. ಆಗ ರಾಜ, ಮಂತ್ರಿ ಮುಂತಾದವರೆಲ್ಲರು ಅಯ್ಯೋ, ಕೀಳು ಕುಲದವಳು; ಎಂತಹ ರೂಪವಿದ್ದರೆ ಏನು ? ಎಂದು ಮದುವೆ ಮಾಡಿಕೊಳ್ಳಲು ಹಿಂಜರಿಯಬಹುದು. ಶರಣರಿಗೆ ಇಂಥ ಸಂದರ್ಭದಲ್ಲಿ ಕುಲದ ಬಗ್ಗೆ ತಿರಸ್ಕಾರ ಇರದು, ಅನುಕಂಪವಿರುತ್ತದೆ. ಇಂಥ ವ್ಯಕ್ತಿ ಪಟ್ಟದ ರಾಣಿಯಾಗಬೇಕು. ಏನು ಮಾಡುವುದು ಈ ಕುಲದ ನಿರ್ಬಂಧ ಆಕೆಯ ಅವಕಾಶವನ್ನು ಕಿತ್ತುಕೊಂಡಿದೆ ಎಂದು ವಿಷಾದಿಸಿರಲೂಬಹುದು. ಆದರೂ ಗುಣವಿಲ್ಲದ ರೂಪು ಎಲ್ಲಿದ್ದರೇನು ? ಎಂಬುದೇ ನಮ್ಮ ಚಿಂತನ ಧಾರೆಗೆ ಸಮ್ಮತವಾಗುವ ಪಾಠಾಂತರ.

ಬೆಂಗಳೂರಿನಲ್ಲಿ ಪೂಜ್ಯ ಮಾತಾಜಿಯವರ 63ನೆಯ ವರ್ಧಂತಿಯ ಆಚರಣೆ

ಜೈ ಮಾತೆ ಜಗದ್ಗುರು ಮಾತೆ ಮಹಾದೇವಿ ಜೈ ಜೈ ॥

ಅನುಭವ ಮಂಟಪಕೆ ಅಕ್ಕಮಹಾದೇವಿ
ಬಸವ ಮಂಟಪಕಿಂದು ಮಾತೆ ಮಹಾದೇವಿ
ಮೂಡಿ ನಿಂತಿತು ಆ ಬಸವ ಕಲ್ಯಾಣ
ಕೂಡಲ ಸಂಗಮವಾಯ್ತು ನವ ಕಲ್ಯಾಣ

ಬಸವ ಮಹಾಮನೆ ಕಟ್ಟಿದಿರಿ ತಾವು
ಬಸವ ಭಕ್ತರಿಗೆಲ್ಲ ದೊರಕಿತು ತಾವು
ನಾವೆಲ್ಲ ಕೂಡಿ ಜಯಘೋಷ ಮಾಡಿ
ನಲಿವೆವು ನಿಮ್ಮನ್ನು ಹಾಡಿ ಕೊಂಡಾಡಿ

ಪ್ರಥಮ ಮಹಿಳಾ ಜಗದುರುಗಳು, ಬಸವ ಧರ್ಮ ಪೀಠಾಧ್ಯಕ್ಷೆಯೂ ಆದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು ದಿ.13-3-2008ರಂದು 62 ವರ್ಷಗಳನ್ನು ಪೂರೈಸಿ 63ಕ್ಕೆ ಪಾದಾರ್ಪಣ ಮಾಡುತ್ತಿರುವ ಸನ್ನಿವೇಶದಲ್ಲಿ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

1. ಬೆಂಗಳೂರಿನ ಬಸವ ಮಂಟಪದಲ್ಲಿ ಬೆಳಿಗ್ಗೆ 8ರಿಂದ ವಿಶೇಷ ಪೂಜೆ. ದಿ. 13-3-2008 ರಂದು. 10ರಿಂದ ಸಹಸ್ರ ಬಸವ ಮಂತ್ರ ಪಠಣ ಹಾಗೂ ಪುಷ್ಪಾರ್ಚನೆ ಪೂಜ್ಯ ಮಾತಾಜಿಯವರಿಗೆ ಆಯುರಾರೋಗ್ಯ ಭಾಗ್ಯಕ್ಕಾಗಿ ಹಾರೈಸಿ ಮಾಡುವ ಈ ಮಂತ್ರ ಪಠಣ /ಪುಷ್ಪಾರ್ಚನೆಯಲ್ಲಿ ಶರಣ ಬಂಧುಗಳು ಭಾಗವಹಿಸಬಹುದು. ನೇತೃತ್ವ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ.

2. ದಿ.16-3-2008 ದೇವ (ಭಾನು)ವಾರದಂದು ಬೆಳಿಗ್ಗೆ 10-30ರಿಂದ ಸಾರ್ವಜನಿಕ ಅಭಿನಂದನ ಸಮಾರಂಭ. ಕಾರ್ಯಕ್ರಮ ನಡೆಯುವ ಸ್ಥಳದ ಬಗ್ಗೆ ಮುಂದಿನ ಕಲ್ಯಾಣ ಕಿರಣದಲ್ಲಿ ತಿಳಿಸಲಾಗುವುದು . ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ : 080-23325335, 9449588669, 9740357467, 9880458160

ರಾಷ್ಟ್ರೀಯ ಬಸವ ದಳ/ ಗಣಾಚಾರ ದಳ
ಬೆಂಗಳೂರು

ವಚನ ದುಂದುಭಿ -12

- ಶರಣ ಸಚ್ಚಿದಾನಂದ ಚಟನಳ್ಳಿ

1. 21ನೇ ಶರಣ ಮೇಳವನ್ನು ಯಾರು ಉದ್ಘಾಟಿಸಿದರು?
2. ನೆನಪಿನಾಳದಿಂದ ಎನ್ನುವ ಪುಸ್ತಕ ಯಾರಿಗೆ ಸಂಬಂಧಪಟ್ಟಿದೆ? ಮತ್ತು ಇದರ ಲೇಖಕರು ಯಾರು?
3. 21ನೇ ಶರಣ ಮೇಳದಲ್ಲಿ ಬಿಡುಗಡೆಯಾದ ಹೊಸ ಪುಸ್ತಕಗಳು ಯಾವುವು? ಮತ್ತು ಇವುಗಳ ಲೇಖಕರು ಯಾರು?
4. **"ಮನೆಯ ನೋಡಿದೊಡೆ ಮನ ಹೋಗುವಂತಾಗಬೇಕು.**
   ಜನ ನೋಡಿದೊಡೆ ಕೀರ್ತಿವಂತರಾಗಿರಬೇಕು. ನಮ್ಮ ಶರಣರ ಮನೆ ಹೊಕ್ಕರೆ
   ಮನವಳಿದು ಮನೋರಥ ಬಸವಣ್ಣನಂತಾಗಬೇಕು ಕಾಣಾ"
   ಇದು ಯಾರ ವಚನ?
5. "ಮಾಡುವ ನೀಡುವ ಭಕ್ತನ ಕಂಡರೆ ನಿಧಿ ನಿಧಾನವ ಕಂಡಂತಾಯಿತ್ತು" ಎನ್ನುವ ಗುರು ಬಸವಣ್ಣನವರ ವಚನದಲ್ಲಿ ಮಾಡುವ ನೀಡುವ ಭಕ್ತ ಎಂದರೆ ಯಾರು?
6. ಮಾರ್ಚ್ 13 ರ ವಿಶೇಷತೆಯೇನು?
7. ಪೂಜ್ಯ ಮಾತಾಜಿಯವರ ಪೂರ್ವಾಶ್ರಮದ ತಾಯಿ ತಂದೆಯರ ಹೆಸರೇನು?
8. '**ಅನುಭಾವದಡಿಗೆ**'ಗೆ ಬಳಸಿದ ಅಗ್ನಿ ಯಾವುದು?
9. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ; ಇದು ಯಾರ ವಚನಾಂಕಿತ?
10. ಘನಲಿಂಗಿದೇವರ ವಚನಾಂಕಿತವೇನು?
11. ಗುರು ಬಸವಣ್ಣನವರ ನಂತರದ ವಚನಕಾರರಲ್ಲಿ ಶರಣ-ಸತಿ ಲಿಂಗ-ಪತಿ ಭಾವದ ಹೆಚ್ಚಿನ ವಚನಗಳನ್ನು ಯಾರು ಬರೆದಿದ್ದಾರೆ
12. "ಆನು ಮಾಡಿಹ ತಪ್ಪನೆಣಿಸಿಹೆನೆಂದಡೆ ಗಣನೆಯಿಲ್ಲ, ನಡೆದು ತಪ್ಪುವೆನು, ನುಡಿದು ತಪ್ಪುವೆನು, ನೀಡಿ ತಪ್ಪುವೆ ಎನ್ನ ತಪ್ಪನೊಪ್ಪಮಾಡಿಕೊಂಬುದಲ್ಲದೆ ಚಿತ್ತಕ್ಕೆ ತರಲಾಗದು" ಎಂದು ಯಾರು ಯಾರಿಗೆ ಹೇಳಿದರು?
13. "ನಾನಾರ ಸಾರುವೆನೆಂದು ಚಿಂತಿಸಲೇಕಯ್ಯಾ, ನಾನಾರ ಹೊದ್ದುವೆನೆಂದು ಭ್ರಮೆ ಪಡಲೇಕಯ್ಯ ನಾನಾರ ಇರವನರಿಬೆನೆಂದು ಪ್ರಳಾಪಿಸಲೇಕಯ್ಯ"ಎಂದು ಯಾರು ಯಾರಿಗೆ ಹೇಳಿದರು?
14. ಒಬ್ಬರು ಶರಣರಿಗೆ ಅಪಘಾತವಾದಾಗ ಗುರು ಬಸವಣ್ಣನವರು ಯಾವುದೋ ದೊಡ್ಡ ಅಪಘಾತವನ್ನು ಸಣ್ಣದಾಗಿ ಮಾಡಿ ಕಾಪಾಡಿದ್ದಾರೆ ಎಂದು ತಿಳಿದುಕೊಂಡರು. ಇನ್ನೊಬ್ಬರಿಗೆ ಅಪಘಾತವಾದಾಗ, ನಾವು ಗುರು ಬಸವಣ್ಣನವರನ್ನು ನಂಬಿರುವುದಕ್ಕೆ ಈ ರೀತಿ ಮಾಡಿದ್ದಾರೆ. ನಾವು ಅವರ ಪೂಜೆ ಏಕೆ ಮಾಡಬೇಕು? ಎಂದರು. ಇವರಲ್ಲಿ ಯಾರ ಭಕ್ತಿ ಶ್ರೇಷ್ಠ?
15. "ಜಾತಿ ಹೀನನ ಮನೆಯ ಜ್ಯೋತಿ ತಾ ಹೀನವೇ? ಜಾತಿ ವಿಜಾತಿ ಎನಬೇಡ ದೇವನೊಲಿದಾತನೆ ಜಾತ" ಇದು ಯಾರ ಹಿತನುಡಿ?

ವಚನ ದುಂದುಭಿ -11ರ ಸರಿ ಉತ್ತರಗಳು

1. ಆಚಾರ, ಅರಿವು, ಲಿಂಗ, ಜಂಗಮ, ಪ್ರಸಾದ, ದಾಸೋಹ.
2. ಷಟಸ್ಥಲ ದರ್ಶನ. 3. ನಿರುಪಾಧಿಕ ಅಷ್ಟಾವರಣಗಳು.
4. ಗುರು ದ್ರೋಹ, ಲಿಂಗದ್ರೋಹ, ಜಂಗಮ ದ್ರೋಹ, ಆಚಾರ ದ್ರೋಹ, ಪ್ರಸಾದ ದ್ರೋಹ.
5. ಸಮ್ಯಕ್ ದೃಷ್ಟಿ. 6. ಶರಣರೊಡನೆ ಸರಸವಾಡಿದರೆ.
7. ಗುರು ಬಸವಣ್ಣನವರ ವಚನ. 8. ಬಂಕೇಶ್ವರಲಿಂಗ. 9. ನಾಗಪ್ರಿಯ ಚೆನ್ನರಾಮೇಶ್ವರ.
10. ನಿಂಬೇಶ್ವರ. 11. ಒಗೆತನ ಎಂದರೆ ಬಾಳುವೆ. 12. ಜಂಗಮ ಮೆಚ್ಚಬೇಕು (ಜನರು ಒಬ್ಬರು ಹೊಗಳಿದರೆ ಹೊಗಳುವರು ತೆಗಳಿದರೆ ತೆಗಳುವರು ಆದರೆ ಜಂಗಮ ಹಾಗಲ್ಲ!)
13. ಲಿಂಗಧಾರಣೆ 14. ವಚನಸಾಹಿತ್ಯದಲ್ಲಿದೆ. 15. ತೋಂಟದ ಸಿದ್ದಲಿಂಗೇಶ್ವರರ ವಚನ

ವಚನ ದುಂದುಭಿ -11ರ ಸರಿ ಉತ್ತರ ಕೊಟ್ಟವರು

1. ಸುನಿತಾ ಜೋಡಳ್ಳಿ, ಹುಬ್ಬಳ್ಳಿ.
2. ನಿರ್ಮಲಾ ಜಯದೇವ, ಬೆಂಗಳೂರು
3. ಎಚ್.ಚಂದ್ರಿಕಾ, ಭದ್ರಾವತಿ
4. ಸರೋಜಿನಿ ಅಲ್ಲಯನವರ ಮಠ
5. ಶೀಲ ಆನಂದ ಗುಡಸ್ ಬೆಳಗಾವಿ
6. ಸುವರ್ಣಮ್ಮ ಪಂಚಾಕ್ಷರಪ್ಪ ಭದ್ರಾವತಿ
7. ಎಚ್.ಶಾಂತಮ್ಮ, ಎಸ್.ನಾಗಮ್ಮ, ಭದ್ರಾವತಿ
8. ಇಂದುಮತಿ, ಖಟಕ ಚಿಂಚೋಳಿ
9. ಮಲ್ಲನಗೌಡ ಪೋ.ಪಾಟೀಲ,ರಾಯಚೂರು
10. ಪ್ರತಿಭಾ ಸಂತೋಷ್ ಗುಡಸ್
11. ವಿಜಯರಾಜು ಭದ್ರಾವತಿ
12. ಸರ್ವಮಂಗಳಾ ಗಂಗಾಧರ,ಬೆಂಗಳೂರು
13. ಸುಮರಾಜು ಭದ್ರಾವತಿ
14. ಸಂಧ್ಯಾ ಗಣೇಶ ಬೆಂಗಳೂರು
15. ಮಮತಾ ಪ್ರವೀಣ ಭದ್ರಾವತಿ
16. ನೀಲಮ್ಮ ದೊಡ್ಡಮನಿ, ಬಿಜ್ಜರಗಿ

21ನೆಯ ಶರಣ ಮೇಳದ ಸಮಾರೋಪ ಸಮಾರಂಭದಲ್ಲಿ ತೆಗೆದುಕೊಂಡ ನಿರ್ಣಯಗಳು

- ಮಾತಾಜಿ

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಲಿಂಗೈಕ್ಯ ಕ್ಷೇತ್ರ ಕೂಡಲ ಸಂಗಮದಲ್ಲಿ ಜನವರಿ 11ರಿಂದ 15ರವರೆಗೆ ನಡೆದ ಶರಣ ಮೇಳದ ಚಿಂತನ ಗೋಷ್ಠಿಯಲ್ಲಿ ಚರ್ಚಿಸಲ್ಪಟ್ಟ ವಿಷಯಗಳ ಕುರಿತು ಸಮಾರೋಪ ಸಮಾರಂಭದಲ್ಲಿ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

1. ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ

ಜಗದ್ಗುರು ಮಾತೆ ಮಹಾದೇವಿಯವರು ಬರೆದ ಲಿಂಗಾಯತರು ಹಿಂದುಗಳಲ್ಲ ಎಂಬ ಪುಸ್ತಕದ ಬಗ್ಗೆ ಸಮಗ್ರ ಚರ್ಚೆಯಾಯಿತಲ್ಲದೆ, ಲಿಂಗಾಯತವು ಒಂದು ಜಾತಿ ಮತ ಪಂಥವಲ್ಲ ಇದು ಸ್ವತಂತ್ರ ಧರ್ಮ. ಆದ್ದರಿಂದ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಸಂವಿಧಾನಾತ್ಮಕ ಮಾನ್ಯತೆಗಾಗಿ ಕೇಂದ್ರ ಸರ್ಕಾರವನ್ನು ಆಗ್ರಹಿಸಬೇಕೆಂದು ನಿರ್ಣಯಿಸಲಾಯಿತು.

2. ಜನಗಣತಿಯಲ್ಲಿ ಪ್ರತ್ಯೇಕ ಅಂಕಣಕ್ಕೆ ಆಗ್ರಹ

2001ರ ಜನಗಣತಿಯಲ್ಲಿ ಪ್ರತ್ಯೇಕ ಧಾರ್ಮಿಕ ಸಮುದಾಯ ಎಂದು ದಾಖಲೆ ಮಾಡಲಾಗಿದೆ. ಕೇವಲ 55 ಲಕ್ಷ ಜನರನ್ನು ಮಾತ್ರ ದಾಖಲಿಸಿರುವುದರಿಂದ ಈ ಅಂಕಿಯು ನಿಖರವಾಗಿಲ್ಲ. ಆದ್ದರಿಂದ 2011ನೆಯ ಇಸವಿಯ ಜನಗಣತಿಯಲ್ಲಾದರೂ ಕೇಂದ್ರ ಸರ್ಕಾರವು ಪ್ರತ್ಯೇಕ ಅಂಕಣ ಅಥವಾ ಸಂಕೇತಾಕ್ಷರ ಅಥವಾ ಕ್ರಮ ಸಂಖ್ಯೆ ನೀಡಿ ಲಿಂಗಾಯತ ಧರ್ಮೀಯರ ನಿಖರವಾದ ಜನ ಸಂಖ್ಯೆ ಪಡೆಯುವಂತೆ ಆಗಲು ಕೇಂದ್ರ ಸರ್ಕಾರದ ಗಮನ ಸೆಳೆಯಲು ನಿರ್ಣಯಿಸಲಾಯಿತು.

3. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ

ಶ್ರೀ ತಿರುವಳ್ಳುವರ್, ಮಾಣಿಕ್ಯ ವಾಚಕರ್ ಮುಂತಾದ ಮಹಾನುಭಾವರ ಸಂದೇಶ ಉಳ್ಳ ತಮಿಳೂ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನ ಸಿಕ್ಕಿದಕ್ಕೆ ನಮಗೆ ಬೇಸರವಿಲ್ಲ, ಮಾತ್ಸರ್ಯವಿಲ್ಲ. ಏಕೆಂದರೆ ದ್ರಾವಿಡ ಭಾಷೆಗಳಲ್ಲಿ ತಮಿಳು ಹಿರಿಯಕ್ಕ. ಆದರೆ ವಚನ ಸಾಹಿತ್ಯದಂತಹ ವಿಶ್ವ ಸಾಹಿತ್ಯವ-ನ್ನುಳ್ಳ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ ನೀಡಬೇಕೆಂದು ಒತ್ತಾಯಿಸಲಾಯಿತಲ್ಲದೆ ಕೇಂದ್ರ ಸಚಿವ ಎಂ.ವಿ.ರಾಜಶೇಖರನ್ ಅವರಿಗೆ ಈ ಬಗ್ಗೆ ಪ್ರಯತ್ನಿಸಲು ವಿನಂತಿಸಲಾಯಿತು.

4. ಪ್ರವಾಹ ಪೀಡಿತರಿಗೆ ನೆರವು ನೀಡಲು ಆಗ್ರಹ

ಉತ್ತರ ಕರ್ನಾಟಕದ ಹಲವಾರು ಜಿಲ್ಲೆಗಳ ಊರುಗಳು ಪ್ರವಾಹದಿಂದ ಮತ್ತು ಅಧಿಕ ಮಳೆಯಿಂದ ಬಹಳ ಸಂಕಷ್ಟಕ್ಕೆ ಒಳಗಾಗಿವೆ. ಬೆಳೆಯ ನಷ್ಟ, ಮನೆಗಳ ಬೀಳುವಿಕೆ, ಮಕ್ಕಳು ಬಂಧು ಬಳಗವನ್ನು ಕಳೆದುಕೊಂಡ ಜನರು ಅಕ್ಷರಶಃ ಬೀದಿ ಪಾಲಾಗಿದ್ದಾರೆ. ಕೇಂದ್ರ ಸರ್ಕಾರದಿಂದ 807 ಕೋಟಿ ರೂಪಾಯಿಗಳ ಪರಿಹಾರ ಧನ ಬಾಯಿ ಮಾತಿನಲ್ಲಿ ಬಿಡುಗಡೆಯಾಗಿದ್ದರೂ ಅದು ಜನತೆಯ ಕೈ ಸೇರಿಲ್ಲ. ಆದ್ದರಿಂದ ಕೇಂದ್ರ ಸರ್ಕಾರವು ಕನಿಷ್ಠ 1500 ಕೋಟಿ ಪರಿಹಾರವನ್ನು ನೀಡಲು ನಿರ್ಧರಿಸುವುದೇ ಅಲ್ಲದೆ ಆದಷ್ಟು ಬೇಗನೆ ನಿರಾಶ್ರಿತರ, ಸಂತ್ರಸ್ತರ ಪುನರ್ವಸತಿ ಕಾರ್ಯ ಆಗುವಂತೆ ಕಾಳಜಿ ವಹಿಸಲು ಶ್ರೀ ಎಂ.ವಿ.ರಾಜಶೇಖರ್ ಪ್ರಭಾವ ಬೀರಬೇಕೆಂದು ವಿನಂತಿ ಮಾಡಲಾಯಿತು.

5. ಕೂಡಲ ಸಂಗಮ, ಬಸವ ಕಲ್ಯಾಣಕ್ಕೆ ರೇಲ್ವೆ ಸೌಕರ್ಯ

ಆಲಮಟ್ಟಿ-ಕೊಪ್ಪಳಗಳ ಮಧ್ಯೆ ರೇಲ್ವೆ ಸಂಪರ್ಕ ಕಲ್ಪಿಸುವ ಯೋಜನೆಯನ್ನು ಮುಂಬರುವ ಬಡ್ಜೆಟ್‌ನಲ್ಲಿ ತೆಗೆದುಕೊಂಡು, ಈ ರೇಲ್ವೆ ಮಾರ್ಗವು ಕೂಡಲ ಸಂಗಮದ ಮೂಲಕ ಹಾಯ್ದು ಹೋಗುವಂತೆ ಮತ್ತು ಬಸವ ಕಲ್ಯಾಣಕ್ಕೆ ಭಾಲ್ಕಿಯಿಂದ ಸಂಪರ್ಕ ಕಲ್ಪಿಸುವಂತೆ ಆಗಲು ಕೇಂದ್ರ ಸರ್ಕಾರದಲ್ಲಿ ಪ್ರಯತ್ನಿಸಬೇಕೆಂದು ಸಚಿವ ಎಂ.ವಿ.ರಾಜಶೇಖರನ್ ಅವರನ್ನು ಆಗ್ರಹಿಸಿಲಾಯಿತು. ಅವರು ಪ್ರಯತ್ನಿಸುವ ಭರವಸೆಯನ್ನೂ ಕೊಟ್ಟರು.

6. ಲಿಂಗಾಯತ ಸಮಾಜದ ಒಳ ಪಂಗಡಗಳ ಒಕ್ಕೂಟ

ಗುರು ಬಸವಣ್ಣನವರು ಸಂಸ್ಥಾಪಿಸಿಕೊಟ್ಟ ಲಿಂಗಾಯತ ಧರ್ಮವನ್ನು ಸ್ವೀಕಾರ ಮಾಡಿ ಹಲವಾರು ಜಾತಿ ಮತಗಳವರು ವಿವಿಧ ಶತಮಾನಗಳಲ್ಲಿ ಒಳಗೆ ಬಂದರು. ಆದರೆ ಆ ಒಳಜಾತಿಗಳ ಪ್ರತ್ಯೇಕ ಸಂಘಟನೆ ಮಾಡುತ್ತ ಹಲವರು ಸಮಾಜದ ವಿಭಜನೆಗೆ ಕಾರಣರಾಗುತ್ತಿದ್ದಾರೆ. ತಮ್ಮ ಪಂಗಡಗಳ ಅಭಿವೃದ್ಧಿಯ ದೃಷ್ಟಿಯಿಂದ ಈ ಸಂಘಟನೆಗಳನ್ನು ಅವರು ಪ್ರತಿನಿಧಿಸಿದರೂ ಇಡೀ ಸಮಾಜದ

ಹಿತದೃಷ್ಟಿಯಿಂದ ಲಿಂಗಾಯತ ಸಮಾಜದ ಒಳಪಂಗಡಗಳ ಒಕ್ಕೂಟವನ್ನು ರಚಿಸಿ ಸಮಾಜದ ಸಮಸ್ಯೆಗಳನ್ನು ಒಟ್ಟಾಗಿ ಎದುರಿಸಬೇಕೆಂದು ನಿರ್ಣಯಿಸಲಾಯಿತು.

7. ಲಿಂಗಾಯತ ಸಮಾಜದ ಆಸ್ತಿ ರಕ್ಷಣೆಗಾಗಿ ಸಂಸ್ಥೆ .

ಲಿಂಗಾಯತ ಸಮಾಜದ ಮತ್ತು ಧಾರ್ಮಿಕ ಸಂಸ್ಥೆಗಳ ಆಸ್ತಿ ಪಾಸ್ತಿಗಳನ್ನು ಅನೇಕರು ಅಕ್ರಮವಾಗಿ ಕಬಳಿಸುವ ಪ್ರಯತ್ನ ನಡೆದಾಗ ಅಂಥ ಆಸ್ತಿಗಳನ್ನು ಉಳಿಸುವ ಒಂದು ಸಂಸ್ಥೆಯನ್ನು ರೂಪಿಸಬೇಕೆಂದು, ಆಯಾ ಮಠದ ಸ್ವಾಮಿಗಳು ಸಮಸ್ಯೆಯನ್ನು ಎದುರಿಸಲು ಅಸಮರ್ಥರಾದಾಗ ಅವರಿಗೆ ಪ್ರಸ್ತುತ ಸಮಸ್ಯೆಯು ಕಾನೂನಿನ ಮತ್ತು ಆರ್ಥಿಕ ನೆರವನ್ನು ನೀಡಬೇಕೆಂದು ನಿರ್ಣಯಿಸಲಾಯಿತು.

8. ಕೊಡಗಿನ ಕನ್ನಡ ಮಠದ ರಕ್ಷಣೆಗೆ ನಿರ್ಧಾರ

ಕೇರಳದ ಗಡಿಯಲ್ಲಿ ಕನ್ನಡದ ಪ್ರದೇಶದಲ್ಲಿ ಇರುವ ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೋಕಿನ ಬೆಟಗೇರಿ ಗ್ರಾಮದಲ್ಲಿ ದೊರೆ ವೀರ ರಾಜೇಂದ್ರ ಒಡೆಯರ್ 1809ರಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಉಳಿವಿಗಾಗಿ ಕನ್ನಡ ಮಠವನ್ನು ಸ್ಥಾಪಿಸಿ 197 ಎಕರೆ ಭೂಮಿಯನ್ನು ಇನಾಮಾಗಿ ಕೊಟ್ಟರು. ಇದು ಮಠಕ್ಕೆ ಸಂಬಂಧಿಸಿದ್ದೆಂದು ಸುಪ್ರೀಂ ಕೋರ್ಟ್ ಸಹ ತೀರ್ಪಿತ್ತಿದ್ದರೂ ಕೆಲವು ಜನರು ಮಠದ ಆಸ್ತಿಯನ್ನು ಕಬಳಿಸಲು ಸ್ವಾಮಿಗಳ ಮೇಲೆ ದೌರ್ಜನ್ಯ ಮಾಡುವುದನ್ನು ಖಂಡಿಸಿ ಪೂಜ್ಯ ಬೆಟ್ಟದಪುರ ಮಠಾಧೀಶರಾದ ಚನ್ನಬಸವ ಸ್ವಾಮಿಗಳ ಬೆಂಬಲಕ್ಕೆ ನಿಲ್ಲಲು ಶರಣರ ಸಭೆ ನಿರ್ಣಯ ತೆಗೆದುಕೊಂಡಿತು.

ಮಹಾರಾಷ್ಟ್ರದಲ್ಲಿ ಬಂಧು ಮಿತ್ರರಿರುವವರು ಗಮನಿಸಿರಿ

ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಆಳತೆ ಗ್ರಾಮ ವ್ಯಾಪ್ತಿಯಲ್ಲಿ ಬರುವ ಅಲ್ಲಮ ಗಿರಿಯಲ್ಲಿ ಇದೇ 2008ರ ಏಪ್ರಿಲ್ 6,7,8ರಂದು ಮೂರನೆಯ ಲಿಂಗಾಯತ ಗಣ ಮೇಳಾವ ನಡೆಯುವುದಷ್ಟೆ. ಇದರ ವಿವರಗಳನ್ನು ತಿಳಿಸಲು, ಆಹ್ವಾನ ನೀಡಲು ಬಯಸಿದ್ದೇವೆ. ಆದ್ದರಿಂದ ಮಹಾರಾಷ್ಟ್ರದ ವಿವಿಧ ಭಾಗಗಳಲ್ಲಿ ನೆಲೆಸಿರುವ ನಿಮ್ಮ ಬಂಧು -ಮಿತ್ರರ ವಿಳಾಸವನ್ನು ಬೆಂಗಳೂರು ಬಸವ ಮಂಟಪದ ವಿಳಾಸಕ್ಕೆ ಕಳಿಸಿರಿ. ಅವರಿಗೆ ಆಹ್ವಾನ ಕಳಿಸಲಾಗುವುದು.

- ಪೂಜ್ಯ ಶ್ರೀ ಮಾತೆ ಜ್ಞಾನೇಶ್ವರಿ

ಮಾತಾ ನಮನ

ವಿವಿಧ ರಾಷ್ಟ್ರೀಯ ಬಸವ ದಳಗಳ ಶರಣ ಬಂಧುಗಳು ಪೂಜ್ಯ ಮಾತಾಜಿಯವರ ಬಗ್ಗೆ ಸಾಕಷ್ಟು ಕವನಗಳನ್ನು ಬರೆಯುತ್ತಿರುತ್ತಾರೆ. ಕಲ್ಯಾಣ ಕಿರಣದಲ್ಲಿ ಮುದ್ರಿಸಲು ಸ್ಥಳದ ಅಭಾವವಿರುತ್ತದೆ. ಹಾಗೆ ಬರೆದು ಇಟ್ಟುಕೊಂಡ ಅಥವಾ ಬರೆದುಕೊಡುವ ಕವನಗಳನ್ನು / ಲೇಖನಗಳನ್ನು ಸಂಗ್ರಹಿಸಿ ಮಾತಾಜಿಯವರ 63ನೇ ವರ್ಧಂತಿಯ ನಿಮಿತ್ತ ಪೂಜ್ಯರಿಗೆ ಅಭಿನಂದನ ಗ್ರಂಥವಾಗಿ ಒಂದು ಕಿರು ಹೊತ್ತಿಗೆಯನ್ನು ಹೊರ ತರುವ ವಿಚಾರವಿದೆ. ಅಂಥ ಕವನಗಳನ್ನು, ಈಗಾಗಲೇ ಕಲ್ಯಾಣ ಕಿರಣದಲ್ಲಿ ಪ್ರಕಟವಾಗಿದ್ದರೂ ಮತ್ತೊಮ್ಮೆ ಈ ಕೆಳಗಿನ ವಿಳಾಸಕ್ಕೆ ದಿನಾಂಕ 1.3.08ರ ಒಳಗಾಗಿ ಬರೆದು ಕಳಿಸಬೇಕಾಗಿ ಕೋರಿಕೆ.

- ಸಚ್ಚಿದಾನಂದ, ಸಂಪಾದಕರು, ''ಮಾತಾ ನಮನ'', ಬಸವ ಮಂಟಪ, 2035, 20ನೇಮೇನ್, 2ನೇಬ್ಲಾಕ್ , ರಾಜಾಜಿನಗರ, ಬೆಂಗಳೂರು

ಫೆಬ್ರವರಿ -ಮಾರ್ಚ್‌ದಲ್ಲಿ ಬರುವ ಹಬ್ಬ ಹುಣ್ಣಿಮೆಗಳು

1. ಚನ್ನ ಹುಣ್ಣಿಮ (ಉಳಿವೆಯಲ್ಲಿ ರಥೋತ್ಸವ)	ಫೆಬ್ರವರಿ - 21
ಬೆಳದಿಂಗಳ ಊಟ (ಗಣ ಭೋಜನ)	ಫೆಬ್ರವರಿ - 21
2. ಗಣ ಮೇಳ (ಶಿವರಾತ್ರಿಯಂದು)	ಮಾರ್ಚ್ -05
3. ಪೂಜ್ಯ ಮಾತಾಜಿಯವರ 63ನೆಯ ವರ್ಧಂತಿ	ಮಾರ್ಚ್ -13
4. ಕಲ್ಯಾಣ ಕ್ರಾಂತಿಯ ಸಂಸ್ಮರಣೆ	ಮಾರ್ಚ್ - 21

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥



866666



ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಆಳತೆ ಗ್ರಾಮದ ಅಲ್ಲಮ ಪ್ರಭು ಗಿರಿಯಲ್ಲಿ 2008 ಏಪ್ರಿಲ್ 6, 7 ಮತ್ತು 8 ರಂದು

ತೃತೀಯ ಲಿಂಗಾಯತ ಗಣ ಮೇಳ

ಶರಣ ಬಂಧುಗಳಲ್ಲಿ ಶರಣು ಶರಣಾರ್ಥಿ,

ವಿಶ್ವಗುರು ಬಸವಣ್ಣನವರು 12ನೆಯ ಶತಮಾನದಲ್ಲಿ ಅನುಭವ ಮಂಟಪ ಎಂಬ ಅಧ್ಯಾತ್ಮಿಕ ಸಂಸ್ಥೆಯನ್ನು ಕಟ್ಟಿ, ಅದರಲ್ಲಿ ಶೂನ್ಯಪೀಠ ಎಂಬ ಧರ್ಮಪೀಠವನ್ನು ಸ್ಥಾಪಿಸಿ ಅದಕ್ಕೆ ವ್ಯೋಮಕಾಯ ಸಿದ್ಧರಾದ ಅಲ್ಲಮ ಪ್ರಭುದೇವರನ್ನು ಮೊದಲನೆಯ ಅಧಿಕಾರಿಯನ್ನಾಗಿ ಪೀಠಾರೋಹಣ ಮಾಡಿಸಿದರು. ಶ್ರೀ ಅಲ್ಲಮ ಪ್ರಭುದೇವರು ಮತ್ತು ಸೊಲ್ಲಾಪುರದ ಶ್ರೀ ಸಿದ್ಧರಾಮೇಶ್ವರರು ಧರ್ಮ ಪ್ರಚಾರಾರ್ಥ ಇಂದಿನ ಕರ್ನಾಟಕ, ಮಹಾರಾಷ್ಟ್ರದ ವಿವಿಧ ಸ್ಥಳಗಳಲ್ಲೆಲ್ಲ ಗಂಗೆ-ಯಮುನೆಯರಂತೆ ಸಂಚರಿಸಿ ಭಕ್ತರನ್ನು ಉದ್ಧರಿಸಿದ್ದಾರೆ. ಜೊತೆಗೂಡಿ ಸಂಚರಿಸಿದ ಉಭಯತರೂ ಒಂದು ವಿಶಿಷ್ಟ ಸ್ಥಳದಿಂದ ಪರಸ್ಪರ ಬೀಳ್ಕೊಟ್ಟು ಸಾಭಾರಿ ಜಂಗಮರಾದ ಶ್ರೀ ಸಿದ್ಧರಾಮೇಶ್ವರರು ಸೊಲ್ಲಾಪುರಕ್ಕೆ ಕರ್ತವ್ಯ ಮುಖಿಯಾಗಿ ವಾಪಸು ಹೊರಡುತ್ತಾರೆ. ನಿರಾಭಾರಿ ಜಂಗಮರಾದ ಶ್ರೀ ಅಲ್ಲಮ ಪ್ರಭುದೇವರು ಅಶ್ವಾರೋಹಿಯಾಗಿ ಶಿಷ್ಯರೊಡನೆ ಸಂಚಾರವನ್ನು ಮುಂದುವರಿಸುತ್ತಾರೆ. ಒಂದು ಸ್ಥಳದಲ್ಲಿ ತಪೋಮಗ್ನರಾಗಿ ತಂಗಿರುತ್ತಾರೆ. ಅದೇ ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಆಳತೆ ಗ್ರಾಮದ ಬಳಿ ಇರುವ ಅಲ್ಲಮ ಪ್ರಭು ಗಿರಿ. ಮರಾಠಿಯಲ್ಲಿ ಅಲ್ಲಮ ಪ್ರಭು ಡೋಂಗರ್ ಎನ್ನುತ್ತಾರೆ. ಇದು ಕೊಲ್ಹಾಪುರದಿಂದ 25 ಕಿ.ಮೀಟರ್ ದೂರದಲ್ಲಿ ಕೊಲ್ಹಾಪುರ-ಸಾಂಗ್ಲಿ-ಸೊಲ್ಲಾಪುರ ಹೆದ್ದಾರಿಯ ಮೇಲಿದೆ. ಸಮೀಪದಲ್ಲಿ ಇಚಲ ಕರಂಜಿ, ಮೀರಜ್, ಸಾಂಗ್ಲಿ ಮತ್ತು ವಡಗಾಂವ ಪಟ್ಟಣಗಳು ಇವೆ. ಮೀರಜ್‌ವರೆಗೆ ರೇಲ್ವೆ ಸೌಲಭ್ಯವಿದೆ. ಪ್ಯಾಸೆಂಜರ್ ರೇಲ್ವೆ ಗಾಡಿಗಳು ಹಾತ್ ಕಣಂಗಲೆ ಮೂಲಕ ಕೊಲ್ಹಾಪುರಕ್ಕೆ ಹೋಗುತ್ತವೆ ಮತ್ತು ಹಾತ್‌ಕಣಂಗಲೆಯಲ್ಲಿ ನಿಲ್ಲುತ್ತವೆ.

ಅಲ್ಲಮ ಪ್ರಭು ನಂದಾದೀಪ

ಶ್ರೀ ಅಲ್ಲಮ ಪ್ರಭುದೇವರು ಪೂಜೆಯ ಸಮಯದಲ್ಲಿ ಹಚ್ಚಿದ ಜ್ಯೋತಿಯನ್ನು ಅಲ್ಲಮ ಪ್ರಭು ಶರಣಾಲಯದ ಪೂಜಾರಿ ವಂಶಸ್ಥರು ನಂದಾದೀಪವಾಗಿ ಕಾಯ್ದುಕೊಂಡು ಬಂದಿರುವುದು ಸ್ಥಳ ವಿಶೇಷ. ಶ್ರೀ ಸಿದ್ಧರಾಮೇಶ್ವರರ ಶರಣಾಲಯವು ಸಹ ಪಕ್ಕದಲ್ಲೇ ಇದ್ದು ಕೆಲವು ಕಾಲ ಅವರು ಸಹ ಈ ಗಿರಿಯಲ್ಲಿ ತಂಗಿದ್ದಾರೆ. ಈ ಉಭಯತರೂ ಪೂಜೆ-ಧ್ಯಾನಗಳಿಗೆ ಬಳಸುತ್ತಿದ್ದ ಗವಿಯು ಶ್ರೀಸಿದ್ಧರಾಮೇಶ್ವರ ಶರಣಾಲಯದ ಕೆಳಗೆ ಇದೆ. ಅಲ್ಲಮ ಪ್ರಭುಗಿರಿಗೆ ಸುಮಾರು 4 ಕಿ.ಮೀ ದೂರದಲ್ಲಿ ಸಿದ್ಧರಾಮೇಶ್ವರ ಗಿರಿ (ಸಿದ್ದೋಬಾ ಡೋಂಗರ್) ಇದ್ದು ಎತ್ತರವಾದ ಆ ಗುಡ್ಡದ ಮೇಲೆ ಸಹ ಸಿದ್ಧರಾಮೇಶ್ವರ ಶರಣಾಲಯವಿದೆ. ಈ ಜಂಗಮ ಕ್ಷೇತ್ರಗಳು ಹೆಚ್ಚಿನ ಪ್ರಚಾರವನ್ನು ಪಡೆಯದೆ ಇರುವುದು ಮತ್ತು ಯಾವುದೇ ವಿಶೇಷ ಅಭಿವೃದ್ಧಿ ಹೊಂದದಿರುವುದು ವಿಷಾದನೀಯ ಸಂಗತಿಯಾಗಿದೆ.

ಬಸವ ಧರ್ಮ ಪೀಠದ ಧ್ಯೇಯೋದ್ದೇಶ

ಕೂಡಲ ಸಂಗಮದ ಬಸವ ಧರ್ಮ ಪೀಠ ಟ್ರಸ್ಟ್ ಶರಣರ ಸ್ಥಾನಗಳನ್ನು ಅಭಿವೃದ್ಧಿ ಪಡಿಸುವ ಆಶಯವನ್ನು ಹೊಂದಿದ್ದು ಅಲ್ಲಮ ಪ್ರಭು ಗಿರಿ(ಡೋಂಗರ್)ಯಲ್ಲಿ ಜಗದ್ಗುರು ಅಲ್ಲಮಪ್ರಭು ಶರಣಾಲಯಕ್ಕೆ ಹತ್ತಿರದಲ್ಲಿ 14 ಎಕರೆಯಷ್ಟು ಜಮೀನನ್ನು ಖರೀದಿಸಿದೆ. ಬೋರ್ ವೆಲ್, ನೀರಿನ ತೊಟ್ಟಿ ಕಾರ್ಯಾಲಯ (Office) ಮತ್ತು ವಾಸಕ್ಕೆ 2 ಕೊಠಡಿ, ಒಂದು ಹಾಲ್ ಸಹ ಕಟ್ಟಿಸಲಾಗಿದೆ. ಮುಂದೆ ವಿಸ್ತಾರವಾದ ಕಾರ್ಯ ಯೋಜನೆಯ ಮಾಸ್ಟರ್ ಪ್ಲಾನ್ ಪ್ರಕಟಿಸ -ಲಾಗುವುದು. ಮತ್ತು ಕಟ್ಟಡ ನಿಧಿಗೆ, ದಾಸೋಹ ನಿಧಿಗೆ ದೇಣಿಗೆಯನ್ನು ಸಂಗ್ರಹಿಸಲಾಗುವುದು.

ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳಿಂದ ಅಲ್ಲಮಪ್ರಭು ಯೋಗ ಪೀಠಾರೋಹಣ ಸಂಜೆ 5ಕ್ಕೆ

ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರು ಮತ್ತು ಕಾಯಕ ಯೋಗಿ ಸಿದ್ಧರಾಮೇಶ್ವರರು ಪಾದವಿಟ್ಟ ಈ ಜಂಗಮ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಬೇಕೆಂದು, ಲಿಂಗಾಯತ ಸಮಾಜದ ಸಂಘಟನೆಯ ದೃಷ್ಟಿಯಿಂದ ಮಹಾರಾಷ್ಟ್ರದಲ್ಲಿ ಬಸವ ಧರ್ಮಪೀಠದ ಶಾಖೆಯೊಂದನ್ನು ಹೊಂದುವುದು ತೀರಾ ಅತ್ಯಗತ್ಯ ಎಂಬ ಮಹಾರಾಷ್ಟ್ರ ಶರಣ ಬಂಧುಗಳ ಬೇಡಿಕೆಯಂತೆ 2006ನೇ ಇಸವಿಯ ಚೈತ್ರ ಶುದ್ಧ ಪ್ರತಿಪದೆ ಯುಗಾದಿಯ ಅಲ್ಲಮಪ್ರಭು ಪೀಠಾರೋಹಣ ಸಂಸ್ಮರಣ ದಿನಕ್ಕೆ ಹೊಂದಿಕೊಂಡು ಮಾರ್ಚ್ ತಿಂಗಳಿನ 29 ಮತ್ತು 30ನೆಯ ದಿನಾಂಕಗಳಂದು ಪ್ರಥಮ ಲಿಂಗಾಯತ ಗಣ ಮೇಳವನ್ನು ಏರ್ಪಡಿಸಲಾಯಿತು.

ಕೂಡಲ ಸಂಗಮದ ಬಸವ ಧರ್ಮಪೀಠ, ಮಹಾರಾಷ್ಟ್ರ ರಾಷ್ಟ್ರೀಯ ಬಸವ ದಳಗಳ ಒಕ್ಕೂಟದ ಸಂಯುಕ್ತ ಆಶ್ರಯದಲ್ಲಿ ಅಲ್ಲಮ ಪ್ರಭು ಗಿರಿಯಲ್ಲಿ ಲಿಂಗಾಯತ ಗಣಮೇಳವನ್ನು ನಡೆಸಲಾಗುವುದು. ದಿ.6-4-2008 ಬೆಳಿಗ್ಗೆ -ಉದ್ಘಾಟನೆ, ಮಧ್ಯಾಹ್ನ - ಚಿಂತನಗೋಷ್ಠಿ, ಸಂಜೆ -ಪ್ರವಚನ, ಸಾಮೂಹಿಕ ಕೀರ್ತನ(ಭಜನೆ), ಯುಗಾದಿ ಪಾಡ್ಯದ ದಿವಸ ಸುಪ್ರಭಾತದಲ್ಲಿ ಇಷ್ಟಲಿಂಗಾರ್ಚನೆ, ಬೆಳಿಗ್ಗೆ 10-30ರಿಂದ ಸಮುದಾಯ ಪ್ರಾರ್ಥನೆ-ಅಲ್ಲಮ ಪ್ರಭು ತೊಟ್ಟಿಲು ಕಾರ್ಯಕ್ರಮ, ಸಿದ್ಧರಾಮೇಶ್ವರ ಗಿರಿಯಿಂದ ಜ್ಯೋತಿಯನ್ನು ತಂದು ತಿರುಗುತ್ತಿಯಿಂದ ಮೆರವಣಿಗೆ ಮೂಲಕ ಅಲ್ಲಮ ಪ್ರಭು ದಿವ್ಯಾಲಯಕ್ಕೆ ಹೋಗಲಾಗುವುದು. ದಿ. 8-4-2008ರಂದು ಲಿಂಗಾಯತ ಗಣ ಮೇಳದ ಸಮಾರೋಪ ಸಮಾರಂಭ.

ಸ್ಥಳದ ಹೆಸರು : ಅಲ್ಲಮ ಪ್ರಭು ಗಿರಿ(ಡೋಂಗರ್), ಗ್ರಾಮ: ಆಳತೆ; ಇದು ಕೊಲ್ಹಾಪುರದಿಂದ ಸಾಂಗ್ಲಿಗೆ ಹೋಗುವ ದಾರಿಯ ಮೇಲೆ ಕೇವಲ 25 ಕಿ.ಮೀಟರ್ ದೂರದಲ್ಲಿ ಇದೆ. ಸುಪ್ರಸಿದ್ಧ ಕೈಗಾರಿಕಾ ನಗರ ಇಚಲ ಕರಂಜಿಯಿಂದಲೂ 20 ಕಿ.ಮೀಟರ್ ದೂರದಲ್ಲಿದೆ. ಈ ಸ್ಥಳದಿಂದ ಸ್ವಲ್ಪ ದೂರದಲ್ಲಿ ಜೈನರ ಸುಪ್ರಸಿದ್ಧ ಯಾತ್ರಾಸ್ಥಳಗಳಾದ ಕುಂತಗಿರಿ ಮತ್ತು ಬಾಹುಬಲಿ ಬೆಟ್ಟವಿದೆ. ವಡಗಾಂವ ನಗರವೂ ಸಮೀಪದಲ್ಲಿದೆ. ಅಲ್ಲಮ ಪ್ರಭು ಗಿರಿ ಇರುವ ಆಳತೆ ಗ್ರಾಮವು ಹಾತ್‌ಕಣಂಗಲೆ ತಾಲ್ಲೋಕಿನಲ್ಲಿದ್ದು ಹಾತ್‌ಕಣಂಗಲೆಯವರೆಗೆ ರೇಲ್ವೆ ಲೈನ್ ಸೌಲಭ್ಯವಿದೆ.

ಕಾರ್ಯಕ್ರಮದ ಸಮಯದಲ್ಲಿ ಬೆಟ್ಟದ ಮೇಲೆ ವಸತಿ ವ್ಯವಸ್ಥೆಯನ್ನು ತಾತ್ಕಾಲಿಕ ಶಾಮಿಯಾನಾ ಟೆಂಟ್‌ಗಳಿಂದಲೇ ಮಾಡಬೇಕು. ಕೋಣೆಗಳ ವ್ಯವಸ್ಥೆ ಬೇಕಾದವರಿಗೆ ಇಚಲ ಕರಂಜಿ - 20 ಕಿ.ಮೀ ಮತ್ತು ಕೊಲ್ಹಾಪುರ 25 ಕಿ.ಮೀಟರ್ ದೂರದಲ್ಲಿರುವ ನಗರಗಳು. ಅಲ್ಲಿಂದ ಬರಲು ಹೋಗಲು ಬಸ್ ವ್ಯವಸ್ಥೆ ಇರುತ್ತದೆ. ಟೆಂಪೋ ಸಹ ಸಿಗುತ್ತವೆ. ದೂರದ ಊರುಗಳಿಂದ ಬರುವವರು ದಿ. 5 ರ ಸಂಜೆಯೊಳಗೆ ಬರಬೇಕೆಂದು, ಹತ್ತಿರದ ಸ್ಥಳಗಳಿಂದ ಬರುವವರು ಬೆಳಿಗ್ಗೆ 10-30ಕ್ಕೆ ನಡೆಯುವ ಉದ್ಘಾಟನಾ ಕಾರ್ಯಕ್ರಮಕ್ಕೆ ತಪ್ಪದೆ ಹಾಜರಾಗಬೇಕೆಂದು ವಿನಂತಿಸುತ್ತೇವೆ.

ಧನ ಸಹಾಯಕ್ಕೆ ಮನವಿ

2008ರ ಏಪ್ರಿಲ್ 6, 7 ಮತ್ತು 8ರಂದು ನಡೆಯುವ ತೃತೀಯ ಲಿಂಗಾಯತ ಗಣ ಮೇಳಕ್ಕೆ ಧನ ಸಹಾಯ ಮಾಡುವವರಿಗೆ ಕೆಳಗಿನಂತೆ ಅವಕಾಶವಿದೆ.

ಮಹಾಪೋಷಕರು	: 10000ರೂ ಮತ್ತು ಮೇಲೆ ಕೊಟ್ಟವರು	ಹಿತೈಷಿಗಳು	500 ರೂ
ಪೋಷಕರು	: 5000ರೂ ಮತ್ತು ಮೇಲೆ ಕೊಟ್ಟವರು	ಉತ್ಸವ ಸಮಿತಿ ಸದಸ್ಯರು	250 ರೂ
ದಾನಿಗಳು	: 1000ರೂ ಮತ್ತು ಮೇಲೆ ಕೊಟ್ಟವರು	ಪ್ರತಿನಿಧಿ ಶುಲ್ಕ	100 ರೂ

ಸ್ವಯಂ ಪ್ರೇರಣೆಯಿಂದ ಅವರವರ ಶಕ್ತ್ಯಾನುಸಾರ ಎಷ್ಟು ಬೇಕಾದರೂ ಕೊಡಬಹುದು. ಚೆಕ್ / ಡಿ.ಡಿ ಕಳಿಸುವವರು ಲಿಂಗಾಯತ ಗಣ ಮೇಳ ಉತ್ಸವ ಸಮಿತಿ, ಇಚಲ ಕರಂಜಿ ಶಾಖೆ ಎಂದು ಬರೆಸಬಹುದು. ಅಥವಾ ಬಸವ ಧರ್ಮ ಪೀಠ, ಬೆಂಗಳೂರು ಎಂದಾದರೂ ಬರೆಸಬಹುದು.

ಲಿಂಗಾಯತ ಗಣ ಮೇಳಾವ ಉತ್ಸವ ಸಮಿತಿ
ಅಲ್ಲಮ ಪ್ರಭು ಗಿರಿ
ಆಳತೆ ಗ್ರಾಮ, ತಾ -ಹಾತ್‌ಕಣಂಗಲೆ
ಜಿ-ಕೊಲ್ಹಾಪುರ, ಮಹಾರಾಷ್ಟ್ರ ರಾಜ್ಯ
ದೂರವಾಣಿ : 0230-2600177
(0) 9850982877, (0)9420585881
(0)9822720714,

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಬಸವ ಮಂಟಪ
2035, 20ನೆಯ ಮುಖ್ಯ ರಸ್ತೆ
ಕಾರ್ಡ್ ರಸ್ತೆ, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
ಕರ್ನಾಟಕ ರಾಜ್ಯ, ಭಾರತ
ದೂರವಾಣಿ : 080-23325335/23322790

ಗಣ ಮೇಳದಲ್ಲಿ ಸಂದೇಶ ವಾಚನ

ರಚನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ

(ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಿಂದ ಅಥವಾ ಸರಿಯಾಗಿ ಓದಬಹುದಾದ ಆಹ್ವಾನಿತ ಅತಿಥಿಗಳಿಂದ)

॥ಓಂ ಶ್ರೀ ಗುರು ಬಸವ ಲಿಂಗಾಯ ನಮಃ॥

ಸೃಷ್ಟಿಕರ್ತ ಲಿಂಗದೇವನನ್ನು ಸ್ಮರಿಸಿ, ಧರ್ಮಗುರು ಬಸವಣ್ಣನವರನ್ನು ಸ್ಮರಿಸಿ, ಈ ಪವಿತ್ರ ಶರಣ ಗಣ ಮೇಳದಲ್ಲಿ ಸಮಾವೇಶವಾಗಿರುವ ಎಲ್ಲ ಶರಣ ಬಂಧುಗಳಿಗೂ ಶರಣು ಶರಣಾರ್ಥಿಗಳು.

ಇಂದು ನಡೆಯುತ್ತಲಿರುವ ಶರಣ 'ಗಣ ಮೇಳ' ವು ಅತ್ಯಂತ ಪವಿತ್ರವಾದ ಗಣ ಸಮಾವೇಶ. ಧರ್ಮಪಿತರ ಕಾಲದಲ್ಲಿ ಹಲವಾರು ಗಣಪರ್ವಗಳು, ಗಣ ಸಭೆಗಳು ನಡೆದು, ಸಂಸ್ಕಾರ ಮತ್ತು ಸಂಘಟನೆ ಎರಡನ್ನೂ ಸಾಧಿಸಿದವು. ಹರಿಹರ ಮಹಾಕವಿ ಬಣ್ಣಿಸುವಂತೆ ಧರ್ಮಪಿತರು 'ಪಾಷಂಡಿ ಭೂಮಿಯೊಳು ಭಕ್ತಿಯನ್ನು ಬಿತ್ತಿ ಬೆಳೆದು ಗಣಪರ್ವಗಳನ್ನು ಸಫಲಂ ಮಾಡಿ, ಭಕ್ತಿಯ ಬಣ್ಣವೇರಿಸಿದ ಕಾರಣಿಕರಾದರು.' ಕಲ್ಯಾಣ ಪಟ್ಟಣದಲ್ಲಿ ಸಾಕಷ್ಟು ಗಣಪರ್ವಗಳನ್ನು ಸಂಯೋಜಿಸಿದರು.

'ಗಣ ' ಎಂದರೇನು ? ಗಣ ಎಂದರೆ ಸಮೂಹ, ಸಮಾಜ, ಧರ್ಮಪಿತ ಬಸವಣ್ಣನವರು 'ಗಣ ಧರ್ಮ ' ಎಂಬುದನ್ನು ಸ್ಥಾಪಿಸಿದರು. ಕುಟುಂಬ, ಜಾತಿ, ಕುಲ, ವರ್ಣಗಳ ಸೀಮೆ ದಾಟಿದ ಗಣ ಧರ್ಮದ ಪರಿಕಲ್ಪನೆ ಕೊಟ್ಟರು. ಈ ಗಣ ಧರ್ಮದ ಸದಸ್ಯರನ್ನು ಬಂಧಿಸುವ ಸೂತ್ರ ಜಾತಿಕುಲವಲ್ಲ, ವರ್ಣ-ವರ್ಗವಲ್ಲ 'ದೇವರ ಕುರುಹು' ಎಂಬುದನ್ನು ಸಾರಿದರು. ದೇವಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡೆನಾದರೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಭಕ್ತರಲ್ಲಿ ಕುಲವನ್ನು ಅರಸುವುದಿಲ್ಲ ಎಂದು ಘೋಷಿಸಿ ತಾತ್ತ್ವಿಕ ಗಣಧರ್ಮದ ಸೂತ್ರವನ್ನು ಬೋಧಿಸಿದರು. ಈ ತಾತ್ತ್ವಿಕ ಗಣಧರ್ಮದ ಸದಸ್ಯತ್ವ ಪಡೆದವರು ಸಹಬಾಳ್ವೆ ಮಾಡುವ ಹಿರಿಯ ಗುಣ ಹೊಂದಬೇಕೆಂದು ಸಾರಿ ಹೇಳಿದರು.

ಕಾಗೆ ಒಂದಗುಳ ಕಂಡರೆ ಕೂಗಿ ಕರೆಯದೆ ತನ್ನ ಬಳಗವನು?
ಕೋಳಿ ಒಂದು ಕುಟುಕ ಕಂಡರೆ ಕರೆಯದೆ ತನ್ನ ಕುಲವನೆಲ್ಲವ ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಕಾಗೆ ಕೋಳಿಯಿಂದ ಕರಕಷ್ಟ, ಲಿಂಗದೇವಾ.

ಕಾಗೆಯಂತಹ ಪಕ್ಷಿ ಅನ್ನದ ಅಗುಳನ್ನು ಕಾಣುತ್ತಲೇ 'ಕಾ ಕಾ' ಎಂದು ಕರೆದು ತನ್ನ ಬಳಗವನ್ನು ಸೇರಿಸಿಕೊಂಡು ತಿನ್ನುತ್ತದೆ. ಕೋಳಿಯು ಕಾಳುಗಳನ್ನು ಕಾಣುತ್ತಲೇ 'ಕೊ ಕ್ಕೊ' ಎಂದು ಕರೆದು ಹಂಚಿಕೊಂಡು ತಿನ್ನುತ್ತದೆ. ಭಕ್ತಿವಂತನಾಗಿ ಒಬ್ಬ ವ್ಯಕ್ತಿಯು ಇಂತಹ ಸಮುದಾಯ ಜೀವನವನ್ನು ನಡೆಸದಿದ್ದರೆ ಹೇಗೆ ? ಆದ್ದರಿಂದ ಭಕ್ತಿಜೀವಿಯಾದವನು ಭಕ್ತಿಪಕ್ಷವನ್ನು ಕಟ್ಟಿಕೊಂಡು, ಸಹಬಾಳ್ವೆ ನಡೆಸಬೇಕು.

ಕರ್ಮವೆಂಬ ಅಂಕದೊಡನೆ ತೊಡರಿದೆ
ಬಿನ್ನಪವ ಅವಧಾರು; ನಿಮ್ಮಾಳಿನ ಭಾಷೆಯ
ಕಡೆಗಳಕ್ಕೆ ನೂಂಕುವೆ ಕೆಡಹುವೆನಂಕವ
ಕರೆದೊಡೋ ಎನಿಸಿದಡೆ ನಿಮ್ಮಾಳಲ್ಲ
ಶಿವಶರಣೆಂಬ ದಂಡೆಯ ಹೂಡಿ
ಗಣಮೇಳಾಪವೆಂಬ ಅಲಗಿನಿಂದಿರಿವೆ, ಲಿಂಗದೇವಾ

ಕರ್ಮ, ಭವ ಎಂಬುದೇ ಶತ್ರು. ಈ ಭವವೆಂಬ ಶತ್ರುವಿನೊಡನೆ ಭಕ್ತನು ಹೋರಾಟಕ್ಕೆ ನಿಲ್ಲುತ್ತಾನೆ. ಈ ಶತ್ರುವನ್ನು ಗೆಲ್ಲಬೇಕಾದರೆ ಎರಡು ಸಾಧನಗಳಿವೆ. ಒಂದು ಪರಮಾತ್ಮನಿಗೆ ಶರಣಾಗುವುದು; ಇನ್ನೊಂದು ಶರಣರ ಸಂಗದಲ್ಲಿ ಒಡನಾಡುವುದು. 'ಗಣ ಮೇಳಾಪ' -ಶರಣ ಸಂಗದಲ್ಲಿ ಸೇರಿ ದೈವೀಚಿಂತನೆ ಮಾಡುವುದೇ ಅತ್ಯಂತ ಪ್ರಬಲ ಶಸ್ತ್ರ.

ಧರ್ಮಗುರುವಿನ ಆದೇಶದಂತೆ ನಾವು ನೀವುಗಳೆಲ್ಲ ಗಣಮೇಳದಲ್ಲಿ ಭಾಗಿಗಳಾಗಿ ಇಲ್ಲಿ ಒಟ್ಟುಗೂಡಿದ್ದೇವೆ. ಈ ಗಣ ಮೇಳವು ಸಮಾನತೆ, ಧಾರ್ಮಿಕ ಸಹೋದರತ್ವ-ಸಹ ಬಾಳ್ವೆಗಳ ಸಂಕೇತವುಳ್ಳ ಕಾರ್ಯಕ್ರಮವಾಗಿದೆ. ಸೃಷ್ಟಿಕರ್ತನಿಗೆ ಮತ್ತು ಧರ್ಮ ಗುರುವಿಗೆ ಕೃತಜ್ಞತೆಯನ್ನು ಸಮರ್ಪಿಸುವ ಶ್ರೇಷ್ಠ ಕ್ರಿಯೆಯಾಗಿದೆ.

ಬಸವ ಗುರುವಿಗೆ ಶರಣಾಗಿದ್ದೇನೆ.
ಜಗತ್ ಕರ್ತನಿಗೆ ಶರಣಾಗಿದ್ದೇನೆ
ಶರಣ ಗಣಕ್ಕೆ ಶರಣಾಗಿದ್ದೇನೆ.

ಎಂಬ ತ್ರಿತತ್ತ್ವದ ಪ್ರತೀಕವಾಗಿದೆ. ಸೃಷ್ಟಿಕರ್ತ ಮತ್ತು ಧರ್ಮಕರ್ತರನ್ನು ಕೃತಜ್ಞತೆಯಿಂದ ಸ್ತುತಿಸಲು ನಾವಿಲ್ಲಿ ಸೇರಿದ್ದೇವೆ.

ಸರ್ವ ಶರಣರ ದಿನಾಚರಣೆ

ಒಂದು ತತ್ತ್ವಜ್ಞಾನವಾಗಲೀ, ಧರ್ಮವಾಗಲೀ ಜೀವಂತವಾಗಿರಬೇಕಾದರೆ ಅದು ಪರಂಪರೆಯಾಗಿ (heritage) ಸಾಗಿಬರಬೇಕು. ಶ್ರೀ ಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಆರಂಭವಾದ ಲಿಂಗಾಯತ ಧರ್ಮದ ಪರಂಪರೆಯು ಶೂನ್ಯ ಪೀಠಾಧೀಶ ಅಲ್ಲಮಪ್ರಭು, ಚಿನ್ಮಯಜ್ಞಾನಿ ಚೆನ್ನಬಸವಣ್ಣ, ಬಸವಯೋಗಿ ಸಿದ್ಧರಾಮೇಶ್ವರ, ವೀರವಿರಾಗಿಣಿ ಅಕ್ಕಮಹಾದೇವಿ, ವೀರಶರಣ ಮಡಿವಾಳ ಮಾಚಿದೇವ ಇವರನ್ನೊಡಗೂಡಿ ಅವ್ಯಾಹತವಾಗಿ ಸಾಗಿ ಬಂದಿದೆ. ಗುರು ಬಸವಣ್ಣನವರ ಕಾಲದ ಆದಿ ಪ್ರಮಥರಿಂದ ಈವರೆಗೆ ಆಗಿ ಹೋಗಿರುವ ಲಿಂಗಾಂಗಯೋಗಿಗಳು, ಶರಣರು ಅಸಂಖ್ಯಾತರು. ಅವರ ಜಯಂತಿ -ಲಿಂಗೈಕ್ಯ ದಿನ ಆಚರಿಸಲು ವರ್ಷದ 365 ದಿನಗಳು ಸಾಕಾಗವು. ಅಂಥ ಸಮೃದ್ಧ ಪರಂಪರೆಯ ವಾರಸುದಾರರು ನಾವು. ಆದ್ದರಿಂದ ಜಗತ್ತಿನ ಮೊಟ್ಟಮೊದಲ ಯೋಗಿಯೂ, ಓಂಕಾರದ ದ್ರಷ್ಟಾರನೂ, ಭಾರತೀಯ ಧಾರ್ಮಿಕ ಪರಂಪರೆಯ ಮೂಲಿಗನಾದ ವೇದಪೂರ್ವ ಪ್ರವಾದಿ"ಯೋಗಿರಾಜ ಶಿವ"ನ ತಪಸ್ಸಿನ ದಿನವಾದ ''ಶಿವರಾತ್ರಿಯಂದು'' ಸರ್ವ ಶರಣರ ಸಂಸ್ಮರಣೆಯನ್ನು ಒಟ್ಟಾಗಿ ಮಾಡೋಣ.

ಬಸವ ಧರ್ಮ ಸಾರ

ಇಂದು ನಾವು ಸಾರರೂಪದಲ್ಲಿ ಮಂತ್ರಪುರುಷ ಬಸವಣ್ಣನವರು ಸಂಸ್ಥಾಪಿಸಿ ಕೊಟ್ಟ ಲಿಂಗಾಯತ ಧರ್ಮದ ಸ್ವರೂಪವನ್ನು ಮನನ ಮಾಡೋಣ. ವಿಶ್ವಗುರು ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಕ್ರಿ.ಶ. 1134ರಲ್ಲಿ ಇಂಗಳೇಶ್ವರ ಬಾಗೇವಾಡಿಯಲ್ಲಿ ಜನಿಸಿದರು. ಶೈವ ಬ್ರಾಹ್ಮಣರಾದ ಮಾದಿರಾಜ-ಮಾದಲಾಂಬಿಕೆಯರ ಗರ್ಭದಲ್ಲಿ ಪೂಜಾಫಲದಿಂದ ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯದಂದು ಜನಿಸಿದರು. ವೈದಿಕ ಧರ್ಮದಲ್ಲಿ ಹುಟ್ಟಿದ ಅವರು ಬಹುದೇವತೋಪಾಸನೆ, ಮೂಢನಂಬಿಕೆ, ವರ್ಣವ್ಯವಸ್ಥೆ, ಜಾತಿಪದ್ಧತಿ ಇವುಗಳ ಪ್ರತಿಫಲವಾದ ಅಸ್ಪೃಶ್ಯತೆ, ಯಜ್ಞ-ಯಾಗಾದಿಗಳ ಹಿಂಸೆ, ಕ್ರೂರದೇವತೆಗಳಿಗೆ ಕೊಡುವ ಪ್ರಾಣಬಲಿ, ಪೂಜಾದಿಗಳಲ್ಲಿದ್ದ ಆಡಂಬರ, ಭೇದಭಾವಗಳನ್ನು ಬಿತ್ತಿ ಬೆಳೆದ ದೇವಾಲಯಗಳ ಸಂಕುಚಿತತೆ, ದೇವ-ಭಕ್ತರ ನಡುವೆ ಇವು ಬೆಳೆಸಿದ ಕಂದರ, ಸ್ತ್ರೀ ಶೋಷಣೆ ಮುಂತಾದವುಗಳನ್ನು ಕಂಡು ಬೇಸತ್ತು, ನೊಂದು ತಾಯಿ-ತಂದೆ, ಸಂಪ್ರದಾಯದ ಬಂಧನದಿಂದ ಆಚೆ ನಡೆದರು. ಕೂಡಲ ಸಂಗಮದ ಗುರುಕುಲದಲ್ಲಿ ಆಶ್ರಯ ಪಡೆದು, ವಿದ್ಯಾಭ್ಯಾಸ ಕೈಗೊಂಡು, ಸಂಗಮೇಶ್ವರನ ಅರ್ಚಕರಾಗಿ ಕೆಲಸ ಮಾಡತೊಡಗಿದರು. ಒಂದು ದಿನ ಪರಮಾತ್ಮನನ್ನು ಪೂಜಿಸುವ ಇಷ್ಟಲಿಂಗದ ಕಲ್ಪನೆ ಹೊಂದಿದರು. ಈ ಇಷ್ಟಲಿಂಗವೇ ಕೇಂದ್ರವಾದ ಹೊಸ ಧರ್ಮದ ರೂಪುರೇಷೆ ಮೂಡಿಸಿಕೊಂಡು ಬಸವರಸ -ಸಂಗನ ಬಸವಣ್ಣನಾಗಿ ಕಲ್ಯಾಣಕ್ಕೆ ಮುನ್ನಡೆದರು . ರಾಜಕೀಯದಲ್ಲಿ ವಿವಿಧ ಹುದ್ದೆ ಹೊಂದಿ , ಪ್ರಧಾನಿಯೂ ಆದರು. ಅನುಭವ ಮಂಟಪ ಎಂಬ ಆಧ್ಯಾತ್ಮಿಕ ಅಭೂತಪೂರ್ವ ಸಂಸ್ಥೆ ಕಟ್ಟಿದರು .ಭಾರತದ ವಿವಿಧ ದಿಕ್ಕುಗಳಿಂದ ಜನರು ಆಗಮಿಸಿದರು. ಅನುಭವ ಮಂಟಪದ ಶರಣರು ವಚನ ಸಾಹಿತ್ಯ ಎಂಬ ಶ್ರೇಷ್ಠ ಕೊಡುಗೆ ಕೊಟ್ಟರು. ತಮ್ಮ ಅನುಯಾಯಿಗಳಾಗಿದ್ದ ಇಬ್ಬರು ಶರಣರ ಮಕ್ಕಳ ಮಧ್ಯೆ ಬಸವಣ್ಣನವರು ವಿವಾಹಕ್ಕೆ ಪ್ರೋತ್ಸಾಹ ನೀಡಿದರು.ಆ ಶರಣರಲ್ಲಿ ಒಬ್ಬರು ಪೂರ್ವಾಶ್ರಮದಲ್ಲಿ ಹುಟ್ಟಿನಿಂದ ಅಸ್ಪೃಶ್ಯರು, ಮತ್ತೊಬ್ಬರು ಬ್ರಾಹ್ಮಣರು ಇದ್ದುದು ಜಾತಿವಾದಿಗಳ ಅಸಹನೆಗೆ ಕಾರಣವಾಗಿ, ಬಸವಣ್ಣನವರು ಪ್ರಧಾನಿ ಪಟ್ಟಕ್ಕೆ ರಾಜೀನಾಮೆ ಕೊಡಬೇಕಾಯಿತು. ಧರ್ಮಪಿತರು ಗಡಿಪಾರು ಶಿಕ್ಷೆ ಹೊಂದಿದರು . ಅವರ ನಿರ್ಗಮನದ ನಂತರ ವಿವಾಹದಲ್ಲಿ ಭಾಗಿಗಳಾದ ಶರಣರ ವಧೆಯಾಯಿತು.ಗಡಿಪಾರು ಹೊಂದಿ ಕೂಡಲ ಸಂಗಮಕ್ಕೆ ಬಂದು ಬಸವಣ್ಣನವರು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ದಿನ ಕ್ರಿ.ಶ. 1196ರಲ್ಲಿ ಲಿಂಗೈಕ್ಯರಾದರು.

ನಮ್ಮ ಧಾರ್ಮಿಕ ಸಂಹಿತೆಯಾದ ವಚನ ಸಾಹಿತ್ಯದ ಮೂಲಕ ಆದಿ ಗುರು ಬಸವಣ್ಣನವರು ನಮಗೆ ವಿಶೇಷ ಶರಣ ಪಥವನ್ನು ನೀಡಿದ್ದಾರೆ. ಅವರು ಬೋಧಿಸಿದ ತತ್ತ್ವದ ಸಾರ ಹೀಗಿದೆ.

ತತ್ವಗಳು ಷಡಾಚಾರಗಳು

1. ವಿಶ್ವಗುರು ಬಸವಣ್ಣನವರು ಸೃಷ್ಟಿಕರ್ತನು ಕಳಿಸಿದ ಪ್ರತಿನಿಧಿ, ದೇವರ ಕರುಣೆಯ ಕಂದ (ಬಸವಾಚಾರ)
2. ದೇವನು ಒಬ್ಬ; ಲಿಂಗದೇವನನ್ನು ಇಷ್ಟಲಿಂಗರೂಪದಲ್ಲಿ ಪೂಜಿಸಬೇಕು. (ಲಿಂಗಾಚಾರ);
3. ಪ್ರತಿಯೊಬ್ಬನೂ ಸತ್ಯಶುದ್ಧ ಕಾಯಕದಿಂದ ಗಳಿಸಬೇಕು. ದಾಸೋಹ ಭಾವದಿಂದ ಸಮಾಜಕ್ಕೆ ವಿನಿಯೋಗಿಸಬೇಕು (ಸದಾಚಾರ)
4. ಮಾನವರೆಲ್ಲರೂ ಸಮಾನರು. ನೀತಿ-ಸಂಸ್ಕಾರದಿಂದ ಶ್ರೇಷ್ಠರಾಗುವರು (ಶಿವಾಚಾರ)
5. ಅನ್ಯಾಯವನ್ನು-ಅಸತ್ಯವನ್ನು ಆತ್ಮಸ್ಥೈರ್ಯದಿಂದ ಎದುರಿಸಬೇಕು (ಗಣಾಚಾರ)
6. ವ್ಯಕ್ತಿಗಿಂತಲೂ ಸಮಾಜ-ಸಮಷ್ಟಿ ದೊಡ್ಡದೆಂದು ಭಾವಿಸಿ ವ್ಯಕ್ತಿಯು ಸಮಾಜದ ಸೇವೆ ಮಾಡಬೇಕು. (ಭೃತ್ಯಾಚಾರ)

ದರ್ಶನ ಶಾಸ್ತ್ರ : ಷಟಸ್ಥಲ - ಮಾನವ ಜೀವನದ ಗುರಿಯೇ ತಾನು ಹೊರಟ ಮೂಲ ನೆಲೆ-ಲಿಂಗದೇವನಲ್ಲಿ ಒಡವೆರೆದು ಒಂದಾಗುವುದು, ಅಂಗ ಲಿಂಗದೊಡನೆ ಒಂದಾಗಬೇಕಾದರೆ ಭಕ್ತ ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಸ್ಥಲ (stages) ಗಳನ್ನು ಅಳವಡಿಸಿಕೊಳ್ಳಬೇಕು.

ಆಚರಣೆ : ಅರ್ಚನೆ-ಅರ್ಪಣೆ-ಅನುಭಾವ. ದಿನನಿತ್ಯವೂ ಸೃಷ್ಟಿಕರ್ತನನ್ನು ಪೂಜಿಸುವುದು! ಕಾಯಕ ಮಾಡಿ ಊಟ ಮಾಡುವುದು; ಶರಣರ ಸಂಗದಲ್ಲಿ ಒಡನಾಡುವುದು.

ಲಾಂಛನಗಳು : ಭಕ್ತಿಯ ಅಭಿವ್ಯಕ್ತಿಗೆ ಅಷ್ಟಾವರಣಗಳಾದ ಗುರು-ಲಿಂಗ-ಜಂಗಮ-ವಿಭೂತಿ-ರುದ್ರಾಕ್ಷಿ-ಮಂತ್ರ, ಕರುಣೋದಕ-ಕರುಣ ಪ್ರಸಾದ ಅಳವಡಿಸಿಕೊಳ್ಳುವುದು.

ಸಪ್ತನೀತಿ ಸೂತ್ರ : ಕಳವು ಮಾಡದಿರುವುದು, ಕೊಲ್ಲದಿರುವುದು (ಅಹಿಂಸೆ), ಸುಳ್ಳು ಹೇಳದಿರುವುದು, ಕೋಪಗೊಳ್ಳದೆ ಸಮಾಧಾನ ಚಿತ್ತದಿಂದಿರುವುದು, ತನಗಿಂತ ಕೀಳಾದವರನ್ನು ತಿರಸ್ಕಾರದಿಂದ ಕಾಣದಿರುವುದು, ಆತ್ಮಸ್ತುತಿ ಮಾಡದಿರುವುದು, ಪರನಿಂದೆ ಮಾಡದಿರುವುದು, ಅಂತರಂಗ ಶುದ್ಧಿ ಸಂಪಾದಿಸುವುದು, ಬಹಿರಂಗ ಶುದ್ಧಿ ಸಾಧಿಸುವುದು, ತನ್ಮೂಲಕ ದೇವನ ಕೃಪೆ ಪಡೆಯುವುದು.

ಜಗತ್ತಿನ ಅನೇಕ ಪ್ರವಾದಿಗಳು ಸುವ್ಯವಸ್ಥಿತ ರೂಪದಲ್ಲಿ ಧರ್ಮವನ್ನು ಕೊಡದೆ ಕೇವಲ ವಚನ ಸಂದೇಶ ಕೊಟ್ಟು ಹೋಗಿದ್ದರೂ ಕಾಲಾನಂತರದಲ್ಲಿ ಅವರ ಅನುಯಾಯಿಗಳು ಅತ್ಯಂತ ಸುಂದರವಾಗಿ ಸಂಘಟಿಸಿ ಕೊಂಡಿದ್ದಾರೆ. ತಮ್ಮ ಸ್ಥಾಪಕರು ಕೊಟ್ಟುದಕ್ಕಿಂತ ಚೆನ್ನಾಗಿ ಸರ್ವಾಂಗ ಸುಂದರವಾಗಿ ಬೆಳೆಸಿಕೊಂಡಿದ್ದಾರೆ. ನಮ್ಮಲ್ಲಿ ದುರ್ದೈವದ ಸಂಗತಿ ಎಂದರೆ ಧರ್ಮಗುರು ಬಸವಣ್ಣನವರು ಸುಸಂಬದ್ಧವಾಗಿ ಕೊಟ್ಟುದನ್ನು ಬೆಳೆಸಿಕೊಳ್ಳುವ ಬದಲಿಗೆ ಅಂದಗೆಡಿಸಿರುವುದನ್ನು ಕಾಣಬಹುದು. ತಪ್ಪನ್ನು ಈಗಲಾದರೂ ಆತ್ಮಾವಲೋಕನ ಮಾಡಿಕೊಂಡು ತಿದ್ದಿಕೊಳ್ಳುವುದು ಅತ್ಯಗತ್ಯವಾಗಿದೆ.

ಧರ್ಮದ ಗುರಿ ಒಟ್ಟುಗೂಡಿಸುವುದು - ಒಡೆಯುವುದಿಲ್ಲ

ವಿಶ್ವಗುರು ಬಸವಣ್ಣನವರು ವಿಶ್ವಕುಟುಂಬತ್ವದ ಬೋಧೆ ನೀಡಿದ್ದಾರೆ.

ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ
ಇವನಮ್ಮವ ಇವನಮ್ಮವ ಇವನಮ್ಮವ ಎಂದೆನಿಸಯ್ಯ
ಲಿಂಗದೇವಾ, ನಿಮ್ಮ ಮಹಾಮನೆಯ ಮಗನೆಂದೆನಿಸಯ್ಯಾ

ಇವನಾರು ? ಎಂದು ಪ್ರಶ್ನಿಸಿ ಜಾತಿ, ಉದ್ಯೋಗ, ಅಂತಸ್ತು ಹಿಡಿದು ಯಾರನ್ನೂ ತಿರಸ್ಕರಿಸದೆ ಎಲ್ಲರನ್ನೂ ನಮ್ಮವರು ಎಂದು ಆದರಿಸಬೇಕು. ಆಗ ಮಾತ್ರ ನಾವು ನಿಜವಾದ ದೇವಭಕ್ತರು, ದೇವರ ಮಕ್ಕಳು ಆಗಲು ಸಾಧ್ಯ.

ಇಂದು ಜಗತ್ತಿನಲ್ಲಿ, ಭಾರತ ಭೂಮಿಯಲ್ಲಿ ಧರ್ಮವು ಪರಸ್ಪರರನ್ನು ಒಡೆಯುವ ವಿಕೃತರೂಪ ಹೊಂದಿದೆ. ಕಾರಣವೇನೆಂದರೆ ಧರ್ಮವು ತನ್ನ ಮೂಲಸ್ವರೂಪವನ್ನು ಕಳೆದುಕೊಂಡು ಮತಾಂಧತೆ, ಜಾತ್ಯಂಧತೆ ಆಗಿರುವುದು. ಬಸವ ಧರ್ಮೀಯರಾದ ನಾವು ಈ ಲೋಪವನ್ನು ಅರಿತುಕೊಂಡು ಧರ್ಮವನ್ನು ಒಡೆಯುವ ಸಾಧನವಾಗಿ ಮಾಡಿಕೊಳ್ಳದೆ ಬೆಸೆಯುವ ಸಾಧನವನ್ನಾಗಿ ಮಾಡಿಕೊಳ್ಳಬೇಕು. ಹೇಗೆ ಪೃಥ್ವಿ ತನ್ನ ಅಕ್ಷದ ಮೇಲೆ ತಿರುಗುತ್ತಲೇ ಸೂರ್ಯನ ಸುತ್ತಲೂ ತಿರುಗುವುದೋ ಹಾಗೆ ನಮ್ಮ ಧರ್ಮಾಚರಣೆಯನ್ನು ನಾವು ನಿಷ್ಠೆಯಿಂದ ಪಾಲಿಸುತ್ತ ದೇಶದ ಹಿತಾಸಕ್ತಿ ಕಾಪಾಡಬೇಕು. ವಿಶ್ವ ಕುಟುಂಬತ್ವದ ಸಂದೇಶ ಸಾರಬೇಕು. ಇಂಥದೊಂದು ಪವಿತ್ರ ಸಂಕಲ್ಪವನ್ನು ಗಣ ಮೇಳದ ಇಂದು ತೊಡೋಣ. -ಜಯ ಗುರು ಬಸವೇಶ ಹರಹರ ಮಹಾದೇವ.

ಮಾಲೂರಿನ ಶರಣೆ. ವಿ.ನಂಜಮ್ಮನವರ ಕ್ರಿಯಾ ವಿಶ್ರಾಂತಿ

ಅದೃಷ್ಟವಿದ್ದರೆ ಸಂಪತ್ತನ್ನು ಪ್ರಯತ್ನ ಮಾಡದೇ ಗಳಿಸಬಹುದು, ಆದರೆ ಪ್ರಯತ್ನವಿಲ್ಲದೆ ಗಳಿಸಲಾಗದ, ಸಿದ್ದಿಸಲಾಗದ ಸಂಪತ್ತು ಎಂದರೆ ವಿದ್ಯೆ. ವಿದ್ಯೆಯು ಎಲ್ಲಾ ಸಂಪತ್ತುಗಳಲ್ಲಿಯೂ ಸರ್ವಶ್ರೇಷ್ಠವಾದುದು, ಅದಕ್ಕಾಗಿ ''ವಿದ್ಯಾ ಧನಂ ಸರ್ವಧನ ಪ್ರಧಾನಂ'' ಅಂದದ್ದು. ವಿದ್ಯೆ ಲೌಕಿಕ ಉನ್ನತಿಯ ಸಂಗಡ ಆತ್ಮೋನ್ನತಿಗೂ ಕಾರಣವಾಗುತ್ತದೆ. ಆದ ಕಾರಣ ''ಸಾ ವಿದ್ಯಾಯಾ ಮುಕ್ತಯೇ'' ಎಂದು ಹೇಳಲಾಗುವುದು. ಇಂಥ ವಿದ್ಯಾದಾನಕ್ಕೆ ಜೀವನದುದ್ದಕ್ಕೂ ಶ್ರಮಿಸಿದ ಅಗ್ರ ಗಣ್ಯರ ಸಾಲಿನಲ್ಲಿ ಮಿಂಚುವ ನಕ್ಷತ್ರ ಶರಣೆ. ವಿ.ನಂಜಮ್ಮನವರು.

ಆಂಧ್ರ, ತಮಿಳುನಾಡು, ಕರ್ನಾಟಕ ಈ ಮೂರು ರಾಜ್ಯಗಳ ಸಮ್ಮಿಶ್ರ ಸಂಸ್ಕೃತಿಯ ಆಚರಣೆಯಲ್ಲಿರುವ ಮಾಲೂರು ನಗರದಲ್ಲಿ ವಿದ್ಯಾ ಸಂಪಾದನೆಗೆ ಬಹಳ ಕಷ್ಟಮಯವಾದ ವಾತಾವರಣದ ಸಂದರ್ಭದಲ್ಲಿ ಅಷ್ಟೇನು ಅನುಕೂಲವಂತರಲ್ಲದ ತಂದೆ ಶ್ರೀ ವಸಂತ ಶೆಟ್ಟಿ ಮತ್ತು ತಾಯಿ ಶ್ರೀಮತಿ ಮುನಿಯಮ್ಮನವರ ಉದರದಲ್ಲಿ 1919 ಆಕ್ಟೋಬರ್ 1ರ ಬುಧವಾರದಂದು ನಂಜಮ್ಮನವರು ಜನಿಸಿದರು.

ಕಷ್ಟಪಟ್ಟು ಶ್ರಮವಹಿಸಿ ತಮ್ಮ ವಿದ್ಯಾಭ್ಯಾಸವನ್ನು ಮಾಲೂರಿನ ಆಗಿನ ಲಂಡನ್ ಮಿಷನ್ ಹೆಣ್ಣು ಮಕ್ಕಳ ಶಾಲೆಯಲ್ಲಿ ಮುಂದುವರಿಸಿ 1933ರಲ್ಲಿ ಕನ್ನಡ ಲೋಯರ್ ಸೆಕಂಡರಿಯಲ್ಲಿ ತೇರ್ಗಡೆಯಾದರು. ತಾವು ಕಲಿತ ಲಂಡನ್ ಮಿಷನ್ ಹೆಣ್ಣು ಮಕ್ಕಳ ಶಾಲೆಯಲ್ಲಿ 1936ರಲ್ಲಿ ತಾತ್ಕಾಲಿಕ ಉಪಾಧ್ಯಾಯರಾಗಿ ಸೇವೆ ಪ್ರಾರಂಭಿಸಿದ ಶ್ರೀಮತಿ ನಂಜಮ್ಮನವರು 1 ವರ್ಷದ ನಂತರ 1973ರಲ್ಲಿ ಕಾಯಂ ಉಪಾಧ್ಯಾಯರಾಗಿ ನೇಮಕವಾದರು. ಆಗ ಇವರನ್ನು ಬಾಗೇಪಲ್ಲಿಗೆ ವರ್ಗಾಯಿಸಲಾಯಿತು. ಅಲ್ಲಿ ಒಂದೇ ಒಂದು ದಿನ ಕೆಲಸ ಮಾಡಿ ಮತ್ತೆ ಮಾಲೂರಿನ ಗಂಡು ಮಕ್ಕಳ ಪ್ರೈಮರಿ ಶಾಲೆಗೆ ಅವರು ವರ್ಗಾವಣೆಯಾಗಿ ಬಂದುದು ಮಾಲೂರಿನ ವಿದ್ಯಾರ್ಥಿಗಳಿಗೆ ನಂಜಮ್ಮನವರು ಮಾಡುವ ಪಾಠ ಪ್ರವಚನಗಳ ಹಿರಿಮೆಗೆ ಒಂದು ಗರಿ ಎಂದರೆ ತಪ್ಪಾಗಲಾರದು. ಇದೇ ಶಾಲೆಯಲ್ಲಿ 25 ವರ್ಷಗಳ ಕಾಲ ಸೇವೆ ಸಲ್ಲಿಸಿ ಸ್ಥಳೀಯ ಧರ್ಮರಾಯಸ್ವಾಮಿ ಶಾಲೆಗೆ ವರ್ಗಾಯಿಸಲ್ಪಟ್ಟರು. ನಂತರ 2 ವರ್ಷಗಳ ಕಾಲ ಎಂ.ಸಿ.ಹಳ್ಳಿಯಲ್ಲಿ ಸೇವೆ ಗೈಯ್ದು ಮತ್ತೆ ಮಾಲೂರಿನ ಬಾಲಕಿಯರ ಹಿರಿಯ ಪ್ರಾಥಮಿಕ ಶಾಲೆಗೆ ವರ್ಗಾವಣೆಯಾಗಿ ಬಂದರು. ಆಗ ಅವರಿಗೆ ಮುಖ್ಯೋಪಾಧ್ಯಾಯಿನಿಯಾಗಲು ಸರ್ಕಾರದಿಂದ ಆದೇಶ ಬಂದರೂ ವಿದ್ಯಾರ್ಥಿಗಳ ಪಾಠ ಪ್ರವಚನದ ಅವಧಿ ಕುಂಠಿತವಾಗುವುದಲ್ಲಾ ಎಂಬ ಆತಂಕದಿಂದ ಸರ್ಕಾರದ ಆದೇಶವನ್ನು ಒಪ್ಪಿಕೊಳ್ಳದೇ ಸಹ ಶಿಕ್ಷಕಿಯಾಗಿಯೇ ಮುಂದುವರೆದಿದ್ದು ಅವರು ಬೋಧನಾ ವೃತ್ತಿಗೆ ಅಂಟಿಕೊಳ್ಳುವ ಭಾವನೆ ವ್ಯಕ್ತವಾಗುತ್ತೆ. ಆ ಸಮಯದಲ್ಲಿ ಅವರ ತಾಯಿಯವರೂ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದರು.

1967ರ ಜನವರಿ 24ರಂದು ಸರ್ಕಾರವು ಮತ್ತೊಮ್ಮೆ ಅವರಿಗೆ ಬಡ್ತಿ ನೀಡಿ ಬಂಗಾರ ಪೇಟೆ ಹೆಣ್ಣುಮಕ್ಕಳ ಪ್ರೌಢಶಾಲೆಯ ಸಹ ಶಿಕ್ಷಕಿಯಾಗಿ ವರ್ಗಾವಣೆ ಮಾಡಿತು. 1974ರ ಸೆಪ್ಟೆಂಬರ್‌ವರೆಗೂ ಸೇವೆ ಸಲ್ಲಿಸಿ ತಮ್ಮ 55ನೇ ವಯಸ್ಸಿನಲ್ಲಿ ವಯೋ ನಿವೃತ್ತಿ ಹೊಂದಿದರು. ನಿವೃತ್ತರಾದಾಗ ಇವರ ಸಂಬಳ ರೂ. 390 ಮಾತ್ರ ಇವರ ನಿವೃತ್ತಿ ವೇತನ ನಿಗದಿಯಾದದ್ದು ಕೇವಲ ರೂ.132 ಮಾಸಿಕ. ಇವರು ನಿವೃತ್ತಿಯಾದರೂ ತಮ್ಮ ಸೇವಾ ಪ್ರವೃತ್ತಿಯನ್ನು ವಿದ್ಯಾದಾನ ಮಾಡುವ ಪ್ರಯತ್ನಗಳೊಂದಿಗೆ ಮುಂದುವರೆಸಿದರು. ಆಗ ಮಾಲೂರಿನಲ್ಲಿ ಯಾವುದೇ ಉತ್ತಮ ಶಿಕ್ಷಣ ನೀಡುವ ಸಂಸ್ಥೆಗಳಿರಲಿಲ್ಲ, ಜನರಿಗೆ ಉತ್ತಮ ಶಿಕ್ಷಣ ಪಡೆಯುವುದು ತುಂಬಾ ಕಷ್ಟವಾಗುತ್ತಿತ್ತು. ಆದ್ದರಿಂದ ಅವುಗಳನ್ನು ಮಾಲೂರಿನಲ್ಲಿಯೇ ಸ್ಥಾಪಿಸಿ ಉತ್ತಮ ವಿದ್ಯಾದಾನದ ಸಂಸ್ಥೆಗಳನ್ನು ಆರಂಭಿಸುವ ಪ್ರಯತ್ನದೊಂದಿಗೆ ಆಗಿನ ಕರ್ನಾಟಕ ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಆರ್.ಗುಂಡೂರಾವ್ ಅವರನ್ನು ಭೇಟಿಯಾಗಿ ವಿನಂತಿಸಿದರು. ಅವರಿಂದ ಸಕಾರಾತ್ಮಕ ಬೆಂಬಲ ದೊರೆಯಿತು. ಆದರೆ ಆಗಿನ ಪರಿಸ್ಥಿತಿಯಲ್ಲಿ ಮಾಲೂರಿನ ಜನತೆಗೆ ಹೆಣ್ಣುಮಕ್ಕಳ ಪ್ರೌಢ ಶಾಲಾ ವಿದ್ಯಾಭ್ಯಾಸ ಕೊಡುವ ಸಂಸ್ಥೆಯು ಬಹುದೊಡ್ಡ ಅವಶ್ಯಕತೆಯಿತ್ತು, ಅದನ್ನು ಮನಗಂಡು ಅವರ ಅಳಿಯಂದಿರಾದ ಶ್ರೀ ಎನ್. ಶಿವಕುಮಾರ್ ರಂಜನ್ ಮತ್ತು ಎಸ್.ಎಸ್.ಪರಮೇಶ್ ಹಾಗೂ ಮಾಲೂರಿನ ಜನತೆಯ ಒತ್ತಾಯ ಪೂರ್ವಕ ಕೋರಿಕೆಯ ಮೇರೆಗೆ 1981ರಲ್ಲಿ ಶ್ರೀ ವಿದ್ಯಾನಿಧಿ ಸಂಸ್ಥೆಯನ್ನು ಪ್ರಾರಂಭಿಸಲು ಸರ್ಕಾರದ ಅನುಮತಿಯನ್ನು ಪಡೆದು 1981ರ ಜೂನ್ ತಿಂಗಳಲ್ಲಿ ಶ್ರೀ ವಿದ್ಯಾನಿಧಿ ಪ್ರೌಢಶಾಲೆಯನ್ನು ಮಾಲೂರಿನಲ್ಲಿ ಪ್ರಾರಂಭಿಸಿಯೇ

ಬಿಟ್ಟರು. ಇದು ಅವರ ಎಡಬಿಡದ ಪ್ರಯತ್ನಶೀಲತೆ, ದಿಟ್ಟ ನಿರ್ಧಾರ ಹಾಗೂ ಉತ್ಕಟ ವಿದ್ಯಾಪ್ರೇಮವನ್ನು ಎತ್ತಿ ತೋರಿಸುತ್ತದೆ. ಮುಂದೆ ಈ ಪ್ರೌಢಶಾಲೆಯ ಜೊತೆಗೆ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಮತ್ತು ನರ್ಸರಿ ಶಿಕ್ಷಕಿಯರ ಸಂಸ್ಥೆಗಳನ್ನು ಪ್ರಾರಂಭಿಸಿ ಯಶಸ್ವಿಯಾಗಿಯೇ ನಡೆಸುತ್ತಾ ಬಂದರು.

ಈ ಎಲ್ಲಾ ವಿದ್ಯಾ ಸಂಸ್ಥೆಗಳ ಆಡಳಿತದ ಜವಾಬ್ದಾರಿಯನ್ನು ನಿರ್ವಹಿಸುವುದು ಎಂಥವರಿಗೂ ಕಷ್ಟಸಾಧ್ಯವೆ. ಶ್ರೀಮತಿ ನಂಜಮ್ಮನವರಿಗೆ ಇದೇನೂ ಕಷ್ಟದ ಕೆಲಸವೆನಿಸದಿದ್ದರೂ ವೃದ್ಧಾಪ್ಯ ಅವರ ಅಚಲ ವಿದ್ಯಾದಾನದ ತುಡಿತಕ್ಕೆ ಸ್ವಲ್ಪ ಅಡೆತಡೆ ಹಾಕಿತು. ಕಾರಣ ಈ ಎಲ್ಲಾ ಸಂಸ್ಥೆಗಳ ಆಡಳಿತ ಅಭಿವೃದ್ಧಿ ಮುಂತಾದವುಗಳ ಜವಾಬ್ದಾರಿಯನ್ನು ನಮ್ಮ ದೇಶದಲ್ಲೇ ಅತ್ಯಂತ ದೊಡ್ಡ ಸಂಸ್ಥೆಯೆನಿಸಿದ ಬೆಳಗಾವಿಯ ಕೆ.ಎಲ್.ಇ.ಸಂಸ್ಥೆಗೆ ವಹಿಸುವಂತೆ ತೀರ್ಮಾನಿಸಿದರು. 1991ರ ಜನವರಿಯಲ್ಲಿ ಕೆ.ಎಲ್.ಇ ಸಂಸ್ಥೆಯ ಕಾರ್ಯಾಧ್ಯಕ್ಷರಾದ ಸನ್ಮಾನ್ಯ ಶ್ರೀ ಪ್ರಭಾಕರ ಕೋರೆಯವರನ್ನು ಖುದ್ದಾಗಿ ಕಂಡು ಶಾಲೆಯ ಬಗ್ಗೆ ವಿದ್ಯಾದಾನದ ಬಗ್ಗೆ ತಮಗಿರುವ ಅಪೂರ್ವ ಕಾಳಜಿಯನ್ನು ವ್ಯಕ್ತಪಡಿಸಿ ಶ್ರೀ ವಿದ್ಯಾನಿಧಿ ಸಂಸ್ಥೆಯನ್ನು ಕೆ.ಎಲ್.ಇ ಸಂಸ್ಥೆಯಲ್ಲಿ ವಿಲೀನಗೊಳಿಸಿದರು.

ಕೆ.ಎಲ್.ಇ ಸಂಸ್ಥೆಗೆ ವಿಲೀನಗೊಳಿಸಿರುವ ಶ್ರೀ ವಿದ್ಯಾನಿಧಿ ಸಂಸ್ಥೆಯ ಎಲ್ಲಾ ಶೈಕ್ಷಣಿಕ ಸಂಸ್ಥೆಗಳಿಗೆ ಸ್ವಂತ, ಸುಸಜ್ಜಿತ ಕಟ್ಟಡ ಒದಗಿಸುವ ಉತ್ಕಟ ಇಚ್ಛೆಯಿಂದ ಸುಮಾರು ನಾಲ್ಕೈದು ಕೋಟಿ ರೂಪಾಯಿಗಳಿಗೂ ಹೆಚ್ಚು ಬೆಲೆ ಬಾಳುವ ಭೂಮಿ ಹಾಗೂ ಆರ್ಥಿಕ ನೆರವನ್ನೂ ಒದಗಿಸಿದರು.

ಇವರು ಶಾಲೆಗಳಿಗಷ್ಟೇ ಅಲ್ಲದೇ ಮಾಲೂರು ತಾಲ್ಲೂಕಿನ ಹಾಗೂ ಮಾಲೂರಿನ ಸಮಾಜದ ಏಳಿಗೆಗಾಗಿಯೂ ಅಪಾರ ಮೊತ್ತದ ಹಣವನ್ನು ದಾನವಾಗಿ ನೀಡಿದ್ದಾರೆ. ಜನತೆಯ ಆರೋಗ್ಯದ ಉನ್ನತಿಗಾಗಿಯೂ ಮಾಲೂರಿನಲ್ಲಿ ಶ್ರೀಮತಿ ವಿ.ನಂಜಮ್ಮನವರು ಏರ್ಪಡಿಸಿದ್ದ ಕ್ಯಾನ್ಸರ್ ತಪಾಸಣಾ ಶಿಬಿರವು ಮಾಲೂರು ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಜನತೆಯನ್ನು ಹೆಚ್ಚಿನ ಮಟ್ಟದಲ್ಲಿ ಆಕರ್ಷಿಸಿತು. ಅಲ್ಲದೇ ಮಾಲೂರು ಬಸ್ ನಿಲ್ದಾಣ, ಸರ್ಕಾರಿ ಕಿರಿಯ ಕಾಲೇಜಿನ ಕಟ್ಟಡ ನಿರ್ಮಾಣ ಹಾಗೂ ತಾಲ್ಲೂಕಿನಾದ್ಯಂತ ಇರುವ ಅನೇಕ ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ಅಪಾರ ಪ್ರಮಾಣದ ಧನ ವಿನಿಯೋಗಿಸಿದ್ದಾರೆ. ಅಲ್ಲದೇ ಇವರ ಸೇವಾ ಮನೋಭಾವನೆ ಬಹುಜನ ಪ್ರಿಯವಾಗುವುದರ ಜೊತೆಗೆ ಅನೇಕ ಮಠ ಮಾನ್ಯಗಳ ಸ್ವಾಮೀಜಿಗಳ ಗಮನ ಸೆಳೆದಿದೆ. ಇಂತಹ ಮಹಾ ಚೇತನ ದಿನಾಂಕ 25-1-2008ರ ರಾತ್ರಿ 8-15 ಘಂಟೆಗೆ ಸರಿಯಾಗಿ ಲಿಂಗೈಕ್ಯವಾಯಿತು.

ಮಹಾದಾನಿ, ತ್ಯಾಗ ಜೀವಿಗಳೂ ಮಾಲೂರಿನ ತಾಯಿ ಎಂದೇ ಊರಿನ ಜನರಿಂದ ಪ್ರೀತಿ ಹಾಗೂ ಅಭಿಮಾನ ಪೂರ್ವಕ ಕರೆಸಿಕೊಳ್ಳುತ್ತಿದ್ದ ಶ್ರೀಮತಿ ವಿ.ನಂಜಮ್ಮನವರು ಲಿಂಗೈಕ್ಯರಾದ ವಿಚಾರ ಮಿಂಚಿನ ವೇಗದಲ್ಲಿ ಮಾಲೂರು ಪಟ್ಟಣ ಹಾಗೂ ಸುತ್ತಮುತ್ತಲಿನ ಗ್ರಾಮಾಂತರಗಳಿಗೆ ಹಬ್ಬುತ್ತಿರುವಂತೆ ಅವರ ಅಂತಿಮ ದರ್ಶನಕ್ಕಾಗಿ ಜನ ಸಾಗರವೇ ಧಾವಿಸಿ ಬಂದು ಅವರ ಪಾರ್ಥಿವ ಶರೀರದ ದರ್ಶನವನ್ನು ಪಡೆದು, ತಮ್ಮ ಶೋಕವನ್ನು ವ್ಯಕ್ತಪಡಿಸಿತು. ಮೃತರ ಗೌರವಾರ್ಥ ಮಾಲೂರು ಟೌನ್‌ದಲ್ಲಿ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ ಜನರು ತಮ್ಮ ಶ್ರದ್ಧಾ ಪೂರ್ವಕ ಗೌರವವನ್ನು ಸೂಚಿಸಿದರು.

ಮೃತರಾದ ಶ್ರೀಮತಿ ವಿ.ನಂಜಮ್ಮನವರಿಗೆ ಶೋಕವನ್ನು ಸೂಚಿಸಲು ಅಂದು ಅಲ್ಲಮಗಿರಿಯಲ್ಲಿದ್ದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ತಮ್ಮ ಕರಕಮಲ ಸಂಜಾತೆಯವರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರನ್ನು ಕಳುಹಿಸಿ ಕೊಟ್ಟಿದ್ದರು. ಪೂಜ್ಯ ಐತಾಂಡಹಳ್ಳಿ ಶ್ರೀಗಳವರು, ಶ್ರೀಗುಮ್ಮಳಾಪುರದ ಶ್ರೀಗಳವರು ಮತ್ತು ಶ್ರೀ ಬೆಳ್ಳದಪುರಿ ವೀರಸಿಂಹಾಸನದ ಪೂಜ್ಯ ಶ್ರೀಗಳವರು ಆಗಮಿಸಿ ನಂಜಮ್ಮನವರ ಅಂತಿಮ ಕಾರ್ಯಗಳಲ್ಲಿ ಸಾನಿಧ್ಯ ವಹಿಸಿ ನೆರವೇರಿಸಿ ಕೊಟ್ಟು ಆಶೀರ್ವಚನ ನೀಡಿದರು. ಮಾಲೂರಿನ ವಿ.ನಂಜಮ್ಮನವರ ಅಭಿಮಾನಿಗಳು ಬಹು ವೈಭವದಿಂದ ಸಿಂಗರಿಸಿದ್ದ ಪುಷ್ಪವಿಮಾನದಲ್ಲಿ ಬಾಜಾ ಭಜಂತ್ರಿಗಳೊಂದಿಗೆ ಊರಿನಲ್ಲಿ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ತಮ್ಮ ಅಂತಿಮ ನಮನವನ್ನು ಸಲ್ಲಿಸಿದರು.

ಇಡೀ ಮಾಲೂರು ತನ್ನ ಅಭಿಮಾನದ ತಾಯಿಯನ್ನು, ಕೊಡುಗೈ ದಾನಿ ಮಗಳನ್ನು ಕಳೆದುಕೊಂಡು ಶೋಕಿಸಿತು, ಗೌರವಪೂರ್ಣವಾಗಿ ಬೀಳ್ಕೊಟ್ಟಿತು.

ಶರಣೆ. ನಂಜಮ್ಮನವರು ಸಮಾಜ ಸೇವಾ ಪ್ರಜ್ಞೆಯ ಆದರ್ಶ ತಂದೆಯ ಮಗಳಾಗಿ ಅವಿವಾಹಿತರಾಗಿಯೆ ಉಳಿದು ಆಜನ್ಮ ಬ್ರಹ್ಮಚಾರಿಣಿಯಾಗಿ ಬಾಳಿದರು. ಇಡೀ ಜೀವನವನ್ನು ಶ್ರೀಗಂಧದಂತೆ ಸಮಾಜಕ್ಕಾಗಿ ತೇಯ್ದರು. ವಿದ್ಯಾಮಂದಿರಗಳು, ಮಠ-ಮಾನ್ಯಗಳು, ಸಂಘ-ಸಂಸ್ಥೆಗಳು ಬಡ ಬಗ್ಗರು ಈ ಎಲ್ಲವೂ ನಂಜಮ್ಮನವರ ದಾಸೋಹ ಹಸ್ತದ ಸ್ಪರ್ಶ ಪಡೆದಂಥವೆ! ಶರಣ ಮೇಳಕ್ಕೆ ಪ್ರತಿ ವರ್ಷ ಅವರಿಂದ 5 ಸಾವಿರ ರೂಪಾಯಿ ದಾಸೋಹಕ್ಕೆ ಸಲ್ಲುತ್ತಿದ್ದವು. ನಮ್ಮ ಮಠದವರು ಕೇಳಲು ಹೋಗುವುದು ತಡವಾದರೆ ಏಕೆ ಬರಲಿಲ್ಲ ಎಂದು ನಂಜಮ್ಮನವರು ಚಟಪಟಿಸುತ್ತಿದ್ದರು.

ಸಿರಿ ಬಂದ ಕಾಲಕ್ಕೆ ಕರೆದು ದಾನವ ಮಾಡು
ಪರಿಣಾಮವಕ್ಕು ಪದವಕ್ಕು । ಕೈಲಾಸ
ನೆರಮನೆಯಕ್ಕು ಸರ್ವಜ್ಞ ॥

ಒಮ್ಮೆ ನಮ್ಮ ಸಂಸ್ಥೆಯವರು ಬೇರೊಂದು ಕಲಸಕ್ಕೆ ಮಾಲೂರು ಹತ್ತಿರ ಹೋಗಿದ್ದರು. ಆ ವೇಳೆಗೆ ನಂಜಮ್ಮ ತಾಯಿಯವರು ಹಾಸಿಗೆ ಹಿಡಿದಿದ್ದಾರೆ ಎಂದು ತಿಳಿಯಿತು. ಮೊಬೈಲಲ್ಲಿ ನಮ್ಮವರಿಗೆ ತಿಳಿಸಿ ಹೋಗಿ ನೋಡಿ ಬನ್ನಿ, ಯೋಗ ಕ್ಷೇಮ ವಿಚಾರಿಸಿ ಎಂದು ಹೇಳಿದೆ. ಇವರು ಇದ್ದಕ್ಕಿದಂತೆಯೇ ಹೋದರು. ತಾಯಿಯವರ ಬಳಿ ಹಣ ಇರಲಿಲ್ಲ. ನೋಡಿಕೊಳ್ಳುವ ಓರ್ವ ಸಹಾಯಕಿ ಬಿಟ್ಟರೆ ಯಾರೂ ಮನೆಯಲ್ಲಿರಲಿಲ್ಲ. ನೀವು ಮೊದಲೇ ತಿಳಿಸದೆ ಏಕೆ ಬಂದಿರಿ? ನನ್ನ ಬಳಿ ಈಗ ಕೊಡಲು ಏನೂ ಇಲ್ಲ. ನಾನು ಎಂದೂ ಯಾರನ್ನೂ ಬರಿಗೈಲಿ ಕಳಿಸಿಲ್ಲ ಎಂದು ಚಟಪಟಿಸಿದರಂತೆ. ಅಂದರೆ ದಾನ-ದಾಸೋಹಕ್ಕೆ ಅವರ ಜೀವ ಎಷ್ಟು ಮಿಡಿಯುತ್ತಿತ್ತು ಎಂಬುದು ಇದರಿಂದ ಗೊತ್ತಾಗುತ್ತದೆ. ಬಸವ ಗಂಗೋತ್ರಿಯ ಅನಾಥಾಲಯದಲ್ಲಿ ಪ್ರಸಾದ ನಿಲಯ (ಊಟದ ಮನೆ) ಕಟ್ಟಲು ಒಂದು ಲಕ್ಷ ರೂಗಳನ್ನು, ಬಸವ ಕಲ್ಯಾಣದಲ್ಲಿ ನಿರ್ಮಾಣವಾಗುತ್ತಿರುವ 108 ಅಡಿ ಬೃಹತ್ ಪುತ್ಥಳಿಗೆ ಒಂದು ಲಕ್ಷ ರೂಗಳನ್ನು ಶರಣೆ. ನಂಜಮ್ಮನವರು ದಾಸೋಹ ಗೈದಿದ್ದಾರೆ.

ತಮ್ಮ ಅಣ್ಣ ಶರಣ.ವಿ.ನಂಜಪ್ಪನವರ ಮಗ ಶರಣ. ಎನ್.ಶಿವಕುಮಾರ್ ರಂಜನ ಅವರನ್ನು ಸಾಕು ಮಗನನ್ನಾಗಿ ನಂಜಮ್ಮನವರು ಸ್ವೀಕರಿಸಿದರು. ಶಿಕ್ಷಕ ವೃತ್ತಿಯನ್ನು ಅವಲಂಬಿಸಿದ್ದ ಶಿವಕುಮಾರ್ ಶರಣೆ.ಪಾರ್ವತಿ ಅವರನ್ನು ವಿವಾಹವಾದರು. ಮಗ ಹೇಮಂತ ಕುಮಾರ್ ಮಂಜುಳಾ ಅವರನ್ನು ವಿವಾಹವಾದರು. ಮಗಳು ಲತಾ ಅವರ ಪತಿಯ ಹೆಸರೂ ಹೇಮಂತ ಕುಮಾರ್ ಎಂಬುದೇ ಆಗಿದೆ. ಪ್ರಿಯಾಂಕ ಮತ್ತೊಬ್ಬ ಮಗಳು. ದಂಪತಿಗಳು ಕಡೆಯ ಕ್ಷಣದವರೆಗೆ ಶರಣೆ ನಂಜಮ್ಮನವರ ಸೇವೆಯನ್ನು ತನು ಮನಗಳಿಂದ ಮಾಡಿದರು. 1919ರ ಅಕ್ಟೋಬರ್ 1ರಂದು ಜನಿಸಿದ ನಂಜಮ್ಮನರು 2008ರ ಜನವರಿ 25ರಂದು ಲಿಂಗೈಕ್ಯರಾದರು. 18ನೆಯ ವಯಸ್ಸಿನಲ್ಲಿ ಸಹ ಶಿಕ್ಷಕಿಯಾಗಿ ಕಾಯಕ ಜೀವನ ಆರಂಭಿಸಿ, ಕಾಯಕವೇ ಕೈಲಾಸವೆಂದು ದುಡಿದು ನಾನು-ನನ್ನದು ಎಂಬ ಮಮಕಾರವಳಿದು ಎಲ್ಲವೂ ದೇವನ ಕೊಡುಗೆ ಎಂಬ ದಾಸೋಹ ಭಾವ ಬಲಿದು 89 ವರ್ಷಗಳನ್ನು ಸಾರ್ಥಕವಾಗಿ ಸವೆಸಿ ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿಯನ್ನು ಐದಿದ್ದಾರೆ. ಶಾರೀರಿಕವಾಗಿ ಇಂದು ಇಲ್ಲವಾದರೂ ತಮ್ಮ ದಾಸೋಹ ಸೇವೆಯಿಂದ ಚಿರಂಜೀವಿಯಾಗಿ ಜನ ಮಾನಸದಲ್ಲಿ ಉಳಿದಿದ್ದಾರೆ. ಅವರ ಪ್ರತಿನಿಧಿಗಳಾಗಿ ಶರಣ. ಶಿವಕುಮಾರ ರಂಜನ್ ಮತ್ತು ಶರಣೆ.ಪಾರ್ವತಮ್ಮ ಅವರು ಲಿಂ॥ ಶರಣೆ. ನಂಜಮ್ಮನವರ ಕಾಯಕ-ದಾಸೋಹಗಳ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವಂತಾಗಲಿ ಎಂದು ಹರಸಿ, ಶರಣೆ ನಂಜಮ್ಮನವರಿಗೆ ಸೃಷ್ಟಿಕರ್ತ ಲಿಂಗದೇವ ಧರ್ಮಕರ್ತ ಬಸವಣ್ಣನವರು ಚಿರಶಾಂತಿಯನ್ನು ನೀಡಲಿ ಎಂದು ಹಾರೈಸೋಣ. ★


ಶರಣ ಶಿವಕುಮಾರ್ ರಂಜನ್ ಅವರ ಪರಿವಾರಕ್ಕೆ ಆಯುರಾರೋಗ್ಯ ಭಾಗ್ಯ ಸಕಲ ಸಂಪದವನ್ನು ಹಾರೈಸುತ್ತೇವೆ.

- ಮಾತಾಜಿ

ಲಿಂಗಾಯತ ಧರ್ಮ ಸ್ವತಂತ್ರ ಧರ್ಮ - ಮತ್ತಷ್ಟು ಮಾಹಿತಿ

- ಮಾತಾಜಿ

ಹಿಂದಿನ 3 ಕಲ್ಯಾಣ ಕಿರಣಗಳಲ್ಲಿ ಲಿಂಗಾಯತ ಧರ್ಮವು ಹಿಂದು ಧರ್ಮದ ಅಂಗವಲ್ಲ ಸ್ವತಂತ್ರ ಧರ್ಮ ಎಂಬ ಬಗ್ಗೆ ಸಾಕಷ್ಟು ಮಾಹಿತಿಯನ್ನು ನೀಡಲಾಗಿದೆ. ಮತ್ತೊಂದು ಹೊಸ ಮಾಹಿತಿ ಲಭ್ಯವಾಗಿದೆ. 1881ನೆಯ ವರ್ಷದ ಜನಗಣತಿಯ ವಿವರವು 1883ರಲ್ಲಿ ಪ್ರಕಟವಾಗಿದೆ. ಪ್ರೆಸಿಡೆನ್ಸಿ ಆಫ್ ಮದ್ರಾಸ್ ಪ್ರಕಾಶಿಸಿರುವ ಲೇವಿಸ್ ಮ್ಯಾಕ್ ಐವರ್ ಸಂಪಾದಿಸಿರುವ IVನೇ ವಾಲ್ಯೂಮ್‌ದಲ್ಲಿ ವಿವರಗಳು ಮುದ್ರಣಗೊಂಡಿವೆ. ನಾಲ್ಕು ಅಂಕಣ (Columns)ಗಳಲ್ಲಿ ವರ್ಗೀಕರಿಸಲಾಗಿದ್ದು 1. ಶೈವರು 2. ವೈಷ್ಣವರು, 3. ಲಿಂಗಾಯತರು 4. ಮತ್ತು ಇತರರು. ಗಮನಾರ್ಹ ಅಂಶವೆಂದರೆ ಲಿಂಗಾಯತರ ಗಣತಿ ಶೈವ, ವೈಷ್ಣವ, ಮತ್ತು ಇತರರು ಈ ಮೂರು ಸಮುದಾಯದಿಂದ ಪ್ರತ್ಯೇಕವಾಗಿ ಆಗಿರುವುದೇ ಅಲ್ಲದೆ ಲಿಂಗಾಯತರ ಒಳ ಪಂಗಡಗಳೆಂದು ಹಲವನ್ನು ಗುರುತಿಸಲಾಗಿದೆ. ಹಿಂದಿನ ಸಂಚಿಕೆಯಲ್ಲಿಯೇ ನಾನು ಮದ್ರಾಸ್ ಪ್ರಾವಿನ್ಸ್ ಮತ್ತು ಮೈಸೂರು ಪ್ರಾಂತ್ಯದಲ್ಲಿದ್ದ ಒಳ ಪಂಗಡಗಳ ಯಾದಿಯನ್ನು ಕೊಟ್ಟಿದ್ದೇನೆ.




ಚಿಂತನ ಗೋಷ್ಠಿ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವ ಲಿಂಗಾಯತ ಧರ್ಮ ಮಹಾಸಭಾ ಅಧ್ಯಕ್ಷರಾದ ಶರಣ. ಎನ್. ಪುಟ್ಟರುದ್ರಪ್ಪನವರು









ರಾಷ್ಟ್ರೀಯ ಬಸವ ದಳದ 21ನೆಯ ಅಧಿವೇಶನವನ್ನು ಉದ್ಘಾಟಿಸುತ್ತಿರುವ ಶರಣ.ಎಂ.ಎಂ.ಸಜ್ಜನ್ (ಮಾಜಿ ಸಚಿವರು, ನ್ಯಾಯವಾದಿ) ಮುದ್ದೇಬಿಹಾಳ.



ಮಾಜಿ ಸಚಿವ ಗೋವಿಂದ ಕಾರಜೋಳ ಅವರು "ಕಾಯಕ-ದಾಸೋಹ" ಎಂಬ ಪುಸ್ತಕವನ್ನು ಬಿಡುಗಡೆ ಮಾಡಿದರು.









21ನೆಯ ಶರಣ ಮೇಳದ ಸಮುದಾಯ ಪ್ರಾರ್ಥನೆ - ವಚನ ಪಠಣ ಕಾರ್ಯಕ್ರಮದಂದು ಧರ್ಮಗುರು ಬಸವಣ್ಣನವರ



ಶರಣ ಕೆ.ಎಸ್.ದಿವಾಕರ್ ಅವರು "ಶರಣರು ಖಂಡಿಸಿದ ಮೂಢಾಚರಣೆಗಳು" ಕಿರುಹೊತ್ತಿಗೆಯನ್ನು ಬಿಡುಗಡೆ ಮಾಡಿದರು.





ಶರಣ ಮೇಳದ ಸುಂದರ ಬೃಹತ್ ಸಭಾ ಮಂಟಪದಲ್ಲಿ ಪ್ರಾರ್ಥನೆ ಮಾಡುತ್ತಿರುವ ಶರಣ ಸಾಗರ



ಶರಣ ಮೇಳದಲ್ಲಿ ಅಚ್ಚುಕಟ್ಟಾದ ದಾಸೋಹ ವ್ಯವಸ್ಥೆ






ಶರಣ ಮೇಳದ ಪಥ ಸಂಚಲನದಲ್ಲಿ ಕುಣಿದು ಕುಪ್ಪಳಿಸುತ್ತಿರುವ ಶರಣ ಸಮೂಹ




ಶರಣ ಮೇಳದ ಪಥಸಂಚಲನದಲ್ಲಿ ಶರಣೆಯರೊಂದಿಗೆ ಪೂಜ್ಯ ಗಂಗಾ ಮಾತಾಜಿ







ಸಿದ್ಧರಾಮೇಶ್ವರ ಜಯಂತಿಯಂದು ಶರಣ ದರ್ಶನ ಮತ್ತು ಸಮಾರೋಪ



ಬಸವ ಧರ್ಮ ಸಂಸ್ಥಾಪನಾ ದಿನದಂದು ಧ್ವಜಾರೋಹಣ

ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ಅಲಂಕರಿಸಿದ
ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು



